# ಕಮಲ ಪತ್ರ

RNI No.:KARKAN/2023/84034 | ಸಂಪುಟ : 01 | ಸಂಚಿಕೆ : 07 | ಅಕ್ಟೋಬರ್ 2023 | ಬೆಂಗಳೂರು | ₹ 10/-






ದೆಹಲಿಯ ಪ್ರಗತಿ ಮೈದಾನದಲ್ಲಿ ಆಯೋಜಿಸಿದ್ದ 'ಸಂಕಲ್ಪ ಸಪ್ತಾಹ' ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ




ಹೈದರಾಬಾದ್ - ರಾಯಚೂರು ರೈಲು ಸೇವೆ ಹಾಗೂ ಹಲವು ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಶ್ರೀ ಮೋದಿ ರವರಿಂದ ಹಸಿರು ನಿಶಾನೆ



ಪ್ರಧಾನಿ ಶ್ರೀ ನರೇಂದ್ರ ಮೋದಿ ರವರಿಂದ ಮಹಾತ್ಮ ಗಾಂಧಿ ಹಾಗೂ ದಿ. ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ರವರ ಜನ್ಮದಿನದಂದು ಅವರ ಸಮಾಧಿಗೆ ಪುಷ್ಪಾರ್ಚನೆಯ ಮೂಲಕ ಗೌರವ ಸಮರ್ಪಣೆ



ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಸರ್ಕಾರಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳ ಸಭೆ



ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ರವರಿಂದ ದೆಹಲಿಯ ಖಾದಿ ಮಳಿಗೆಗೆ ಭೇಟಿ

# ಕಾಂಗ್ರೆಸ್‌ನ ಮತ್ತದೇ ಹಳೇ ಚಾಳಿ...

ಮತ್ತೊಮ್ಮೆ ಭಾರತದ ಶಕ್ತಿಯ ಅನಾವರಣವಾಗಿದೆ. ಹಾಗೆಯೇ ದೇಶದೊಳಗಿನ ದೇಶ ವಿರೋಧಿ ಮನಃಸ್ಥಿತಿಯೂ ಬೆಳಕಿಗೆ ಬಂದಿದೆ. ಇದೆಲ್ಲದಕ್ಕೂ ಕಾರಣವಾಗಿರುವುದು ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವೆ ನಡೆಯುತ್ತಿರುವ ಯುದ್ಧ. ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ದದಲ್ಲಿ ಭಾರತ ನಿರ್ಣಾಯಕ ಪಾತ್ರ ವಹಿಸಬೇಕೆಂಬ ಮಾತುಗಳು ಕೇಳಿ ಬರುತ್ತಿದೆ. ಆದರೆ ಕಾಂಗ್ರೆಸ್ ಹಮಾಸ್ ಉಗ್ರರನ್ನು ಬೆಂಬಲಿಸುವ ನಿರ್ಣಯವನ್ನು ತೆಗೆದುಕೊಳ್ಳುವ ಹಂತಕ್ಕೆ ಹೋಗಿ ನಿಂತಿದೆ. ಇಡೀ ವಿಶ್ವದಲ್ಲಿ ಮಾನವೀಯತೆಯ ಪ್ರತಿಪಾದಕರಾರೂ ಹಮಾಸ್ ಉಗ್ರರನ್ನು ಬೆಂಬಲಿಸಲಾರರು. ಅಷ್ಟೇ ಅಲ್ಲ, ಈ ಉಗ್ರರ ವಿರುದ್ದದ ಹೋರಾಟಕ್ಕೆ ಎಲ್ಲ ರೀತಿಯಿಂದಲೂ ಇಸ್ರೇಲ್‌ಗೆ ಬೆಂಬಲ ನೀಡದೆ ಇರಲಾರರು.

ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರಕಾರ ಮಾತ್ರವಲ್ಲದೆ ಇಡೀ ದೇಶದ ಜನತೆ ಈ ಯುದ್ಧದಲ್ಲಿ ಇಸ್ರೇಲ್‌ನ ಜೊತೆ ನಿಂತಿದೆ. ಆದರೆ ಕುತ್ಸಿತ ಮನಃಸ್ಥಿತಿಯ ಕಾಂಗ್ರೆಸ್, ಹಮಾಸ್ ಉಗ್ರರ ಪರ ನಿಂತಿರುವುದು ಕಾಂಗ್ರೆಸ್‌ನ ನೈತಿಕ ದಿವಾಳಿತನದ ದ್ಯೋತಕ ಎನ್ನಬಹುದು. ಆದರೆ ಕಾಂಗ್ರೆಸ್‌ನ ಈ ಧೋರಣೆ ವಿರೋಧಪಕ್ಷಗಳ ಕೂಟದಲ್ಲಿ ಬಿರುಕು ಮೂಡಲು ಕಾರಣವಾಗಿರುವ ಸಂಗತಿಯು ಬರಲಿರುವ ಲೋಕಸಭಾ ಚುನಾವಣೆಯ ಮೇಲೆ ಖಂಡಿತವಾಗಿಯೂ ಪರಿಣಾಮ ಬೀರಲಿದೆ.

ರಾಜ್ಯದಲ್ಲಿನ ಕಾಂಗ್ರೆಸ್‌ನ ಆಡಳಿತ ಗೊಂದಲದ ಗೂಡಾಗುತ್ತಿದೆ. ಮೈಸೂರಿನಲ್ಲಿ ಮಹಿಷ ದಸರಾ ಮಾಡುವ ಮನಸ್ಸುಗಳಿಗೆ ಪರೋಕ್ಷ ಕುಮ್ಮಕ್ಕು ನೀಡುತ್ತಿರುವ ಕಾಂಗ್ರೆಸ್ ಶಿವಮೊಗ್ಗದಲ್ಲಿ ನೇರವಾಗಿ ಮತಾಂಧ ಟಿಪ್ಪೂ ಹಾಗೂ ಔರಂಗಜೇಬನ್ನು ವೈಭವೀಕರಿಸುವ ದುಷ್ಟ ಶಕ್ತಿಗಳಿಗೆ ಬೆಂಬಲ ನೀಡುತ್ತಿದೆ. ಕಾಂಗ್ರೆಸ್ ಅಮಾಯಕರ ಮೇಲೆ ಹಲ್ಲೆ, ಗಲಭೆಗಳನ್ನು ಮಾಡಿದ ಒಂದು ಕೋಮಿನ ಜನರ ಬೆಂಬಲಕ್ಕೆ ನಿಂತಿರುವುದು ಖಂಡನೀಯ. ಹಿಂದೆಂದೂ ಇಲ್ಲದ ರೀತಿಯಲ್ಲಿ ಈದ್ ಮಿಲಾದ್ ಆಚರಣೆ ಮಾಡಿದ ದುಷ್ಟರು, ಪಾಕಿಸ್ತಾನದ ಬಾವುಟಗಳನ್ನು ಹಾರಾಡಿಸಿದ್ದೂ ಅಲ್ಲದೆ, ಹಿಂದೂ ವಿರೋಧಿ ವ್ಯಕ್ತಿಗಳನ್ನು ವೈಭವೀಕರಿಸುವ ಮೂಲಕ ಪ್ರಚೋದನೆಗೆ ಕಾರಣರಾದರು. ತಾಳ್ಮೆಯಿಂದ ವರ್ತಿಸಿದ ನಾಗರೀಕ ಸಮಾಜವನ್ನೇ ಗುರಿಯನ್ನಾಗಿಸಿಕೊಂಡ ಮತಾಂಧ ಶಕ್ತಿಗಳು ಹಿಂದೂಗಳ ಮನೆಗಳನ್ನೇ ಗುರಿಯನ್ನಾಗಿಸಿಕೊಂಡು ನಡೆಸಿದ ದಾಳಿಗಳ ಪರಿಣಾಮವನ್ನು ಕಾಂಗ್ರೆಸ್ ಎದುರಿಸಲೇ ಬೇಕಾಗುತ್ತದೆ.

ಸಂಪಾದಕೀಯ

ಇನ್ನು ಮಹಿಷ ದಸರಾವೂ ಕಾಂಗ್ರೆಸ್ ಕೃಪಾಕಟಾಕ್ಷದಿಂದ ಹುಟ್ಟಿಕೊಂಡ ಶಿಶುವೇ. ಮೈಸೂರಿನ ಅಧಿದೇವತೆಯನ್ನು ಅಪಮಾನ ಪಡಿಸುವಂತಹ ದುಷ್ಟ ಶಕ್ತಿಗಳು ತಲೆ ಎತ್ತಿರುವುದು ಕಾಂಗೆಸ್ ಸರ್ಕಾರ ನೀಡುತ್ತಿರುವ ಕುಮ್ಮಕ್ಕಿನಿಂದಲೇ ಎನ್ನುವ ಸಂಗತಿ ಗುಟ್ಟಾಗಿ ಉಳಿದಿಲ್ಲ. ಮಹಿಷ ದಸರಾ ಅನುಮತಿ ನೀಡದ ಸರ್ಕಾರದ ಕ್ರಮ, ಬಿಜೆಪಿಯ ಸಂಘಟಿತ ಶಕ್ತಿಗೆ ಸಂದ ಜಯ. ಇನ್ನು ಕೋಲಾರದಲ್ಲೂ ಕಾಂಗ್ರೆಸ್ ಮಾಡಿದ ಇದೇ ರೀತಿಯ ಹುನ್ನಾರಗಳು ವೋಟಿಗಾಗಿ ಓಲೈಕೆಯ ರಾಜಕಾರಣದ ಕಾಂಗ್ರೆಸ್‌ನ ಹಳೇ ಚಾಳಿ ಎನ್ನದೆ ವಿಧಿಯಿಲ್ಲ.

ಆದರೆ ಅಲ್ಪಸಂಖ್ಯಾತರ ಓಲೈಕೆ ರಾಜಕಾರಣದಲ್ಲಿ ಇನ್ನಿಲ್ಲದ ಆಸಕ್ತಿ ತೋರುವ ಕಾಂಗ್ರೆಸ್ ಸರಕಾರ ತಾನೇ ಘೋಷಿಸಿದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿ, ಕಾವೇರಿ ನೀರನ್ನು ತಮಿಳು ನಾಡಿಗೆ ಹರಿಸುವುದನ್ನು ತಡೆಯುವಲ್ಲಿ, ಸಮರ್ಪಕ ವಿದ್ಯುತ್‌ನ್ನು ರಾಜ್ಯದ ಜನತೆಗೆ ನೀಡುವಲ್ಲಿ ಇಚ್ಛಾಶಕ್ತಿಯನ್ನು ತೋರಿಸಲೇ ಇಲ್ಲ. ಆರ್ಥಿಕವಾಗಿ ದಿವಾಳಿಯತ್ತ ಸಾಗುತ್ತಿರುವ ಕಾಂಗ್ರೆಸ್ ಆಡಳಿತದಲ್ಲಿ ಸ್ವಪಕ್ಷೀಯರಿಂದಲೇ ಅಸಮಧಾನಗಳು ಹೊರಬರುತ್ತಿದೆ. ಇನ್ನು ಬಿಜೆಪಿ ಶಾಸಕರುಗಳಿಗೆ ನೀಡಿದ ಅನುದಾನವನ್ನು ಹಿಂತೆಗೆದುಕೊಳ್ಳುವಂತಹ ಕೀಳು ರಾಜಕಾರಣಕ್ಕೂ ಕಾಂಗ್ರೆಸ್ ಇಳಿದು ಬಿಟ್ಟಿದೆ. ಬೆಳ್ತಂಗಡಿ ತಾಲೂಕಿನಲ್ಲಿ ವಾಸಿಸುತ್ತಿದ್ದ ಮನೆಯಿಂದಲೇ ಅಮಾಯಕ ರೈತನನ್ನು ಒಕ್ಕಲೆಬ್ಬಿಸ ಹೊರಟ ಅಧಿಕಾರಿಗಳ ವರ್ತನೆ ಖಂಡನೀಯ. ಆದರೆ ಇಂತಹ ವ್ಯಕ್ತಿಗೆ ಬೆಂಬಲವಾಗಿ ನಿಂತ ಸ್ಥಳೀಯ ಶಾಸಕ ಶ್ರೀ ಹರೀಶ್ ಪೂಂಜಾ ಹಾಗೂ ಇನ್ನಿತರ ಶಾಸಕರುಗಳ ನಡೆ ನಿಜಕ್ಕೂ ಅನುಕರಣೀಯ.

ಏಷ್ಯನ್ ಗೇಮ್ಸ್‌ನಲ್ಲಿ ಶತಕ ಪದಕಗಳ ಸಾಧನೆ ಮಾಡಿದ ಭಾರತದ ತಂಡ ನಿಜಕ್ಕೂ ಅಭಿನಂದನೆಗೆ ಅರ್ಹ. ಅದೇ ರೀತಿ ಪದಕ ವಿಜೇತರನ್ನು ಖುದ್ದು ಆಹ್ವಾನಿಸಿ ಮಾತನಾಡಿಸಿದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನಡೆ ನಿಜಕ್ಕೂ ಕೇಂದ್ರ ಸರ್ಕಾರ ಕ್ರೀಡಾಪಟುಗಳ ಸಾಧನೆಗೆ ನೀಡುತ್ತಿರುವ ನೈತಿಕ ಬೆಂಬಲದ ಪ್ರತೀಕ.

ಬಿಜೆಪಿಯಲ್ಲಿ ಕಾರ್ಯಕರ್ತರ ಸಮಾವೇಶಗಳು ಆರಂಭವಾಗಿದೆ. ಲೋಕಸಭಾ ಚುನಾವಣೆ ಸನ್ನಿಹಿತವಾಗುತ್ತಿರುವ ಈ ದಿನಗಳಲ್ಲಿ ಬಿಜೆಪಿಯ ಚಟುವಟಿಕೆಗಳಿಗೆ ಮತ್ತಷ್ಟು ವೇಗ ಕೊಡಬೇಕಾಗಿರುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಬಿಜೆಪಿ ನಾಯಕತ್ವ ಮಹತ್ವದ ಹೆಜ್ಜೆಗಳನ್ನು ಇಡುವ ದಿನಗಳು ದೂರವಿಲ್ಲ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಶ್ರೀ ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಶ್ರೀ ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ಇವತ್ತು ಏನು ನಿಮ್ಮನ್ನು ನೋಯಿಸುತ್ತದೆಯೋ, ನಾಳೆ ಅದೇ ನಿಮ್ಮನ್ನು ಬಲಗೊಳಿಸುತ್ತದೆ...**

**- ಎ.ಪಿ.ಜೆ. ಅಬ್ದುಲ್ ಕಲಾಂ**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005


## ಈ ಸಂಚಿಕೆಯಲ್ಲಿ






**08** ನಾರಿಯರಿಗಾಗಿ ನರೇಂದ್ರರಿಂದ 'ನಾರಿ ಶಕ್ತಿ ವಂದನಾ'








**14** ಭರವಸೆಯ ಸಂಸ್ಕೃತಿ ಭಯದ ವಿಕೃತಿ

**19** ಕೆನಡಾ ಭಯೋತ್ಪಾದಕರ ಸುರಕ್ಷಿತ ತಾಣ

- ಮಹಿಷನೆಂಬ ಮಹಾ ಭ್ರಮೆ ........ 05
- ಬಡವರಿಗಾಗಿ ಬಿಜೆಪಿ ಧ್ವನಿ ........ 12
- ಹಿಂದು ರಕ್ಷಣೆಗೆ ವಿಫಲ ........ 15
- ಕಾವೇರಿ ಸಂಕಷ್ಟಕ್ಕೆ ಬಿಜೆಪಿ ಸ್ಪಂದನೆ ........ 23
- ಕಾಂಗ್ರೆಸ್ ಪಕ್ಷದ ಇಬ್ಬಗೆಯ ನಿಲುವುಗಳು ........ 26
- ಮಹಿಳಾ ಮೋರ್ಚಾ ರಾಜ್ಯ ಕಾರ್ಯಕಾರಿಣಿ ........ 28
- ಪಂ. ದೀನದಯಾಳ ಉಪಾಧ್ಯಾಯರ ಜನ್ಮದಿನ ........ 30
- ಮಾಸದ ಮಾಧುರ್ಯ: 'ಶರಸೇತು ಬಂಧನ ಹಾಗೂ ಗಾನ ನಾಟ್ಯ ವೈಭವ' ........ 33
- **ಮನ್ ಕಿ ಬಾತ್** – ಭಾರತ ಪ್ರಜಾಪ್ರಭುತ್ವದ ತಾಯಿ ... ........ 34






**ಮಹಿಷನ ವಂಶ ಯಾವುದು ? ಉತ್ತರವಿಲ್ಲ !!!**

**ಆತನ ಆಳ್ವಿಕೆಯ ರಾಜ್ಯದ ವಿಸ್ತಾರ ಎಷ್ಟು??? ಉತ್ತರವಿಲ್ಲ !!!**

**ಮಹಿಷನ ರಾಜ್ಯದ ರಾಜಧಾನಿ ಯಾವುದು ? ಉತ್ತರವಿಲ್ಲ !!!**

**ಮಹಿಷನ ಕಾಲದ ಅರಮನೆ ಯಾವುದು ? ಉತ್ತರವಿಲ್ಲ !!!**

**ಮಹಿಷನ ಆಳ್ವಿಕೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಹೇಗಿತ್ತು ??? ಉತ್ತರವಿಲ್ಲ !!!**

**ಮಹಿಷನ ಕಾಲದ ದೇವಸ್ಥಾನಗಳು ಮತ್ತು ಬೌದ್ಧ ಮಂದಿರಗಳು ಯಾವುದು? ಉತ್ತರವಿಲ್ಲ !!!**

**ಮಹಿಷನ ರಾಜ ಲಾಂಛನ ಯಾವುದು? ಉತ್ತರವಿಲ್ಲ !!!**

**ಮಹಿಷನು ಮಾಡಿದ ಯುದ್ಧಗಳು ಯಾವುವು??? ಉತ್ತರವಿಲ್ಲ !!!**

**ಮಹಿಷನ ನಂತರದ ರಾಜ ಯಾರು??? ಉತ್ತರವಿಲ್ಲ!!!**

**ಮಹಿಷ ಯಾವ ಕಾಳಗದಲ್ಲಿ ಸತ್ತ ??? ಉತ್ತರವಿಲ್ಲ !!!**

# ಮಹಿಷನೆಂಬ ಮಹಾಭ್ರಮೆ...




**ಪರಮಾನಂದ ಎಂ.ಎಸ್.**
ರಾಜ್ಯ ಕಾರ್ಯದರ್ಶಿ,
ಬಿಜೆಪಿ - ಎಸ್‌ಸಿ ಮೋರ್ಚಾ


ರಾಜಕೀಯ ಎಂಬ ಚದುರಂಗದಾಟದಲ್ಲಿ ಪರಿಶಿಷ್ಟ ಜಾತಿ ಎಂಬುದು ಒಂದು ಪ್ರಮುಖ ದಾಳವಾಗಿದೆ. ಸ್ವಾತಂತ್ರ್ಯ ನಂತರ ಪರಿಶಿಷ್ಟ ಜಾತಿಯವರ ಮತಗಳು ಹೆಂಡಕ್ಕೋ, ಹಣಕ್ಕೋ, ಮೇಲ್ಜಾತಿಯವರ ಪ್ರಭಾವಕ್ಕೋ ಬಿಕರಿಯಾಗುತ್ತಿದ್ದವು. ಆದರೆ 2000ನೇ ಇಸವಿಯಿಂದ ಈಚೆಗೆ ಅರ್ಥವಿಲ್ಲದ ವಿಚಾರಗಳಿಗೆ, ದುಷ್ಟರ ಪ್ರಭಾವಕ್ಕೆ, ಜನಾಂಗೀಯ ಮುಖಂಡರ ಅವಿವೇಕತನಕ್ಕೆ ಪರಿಶಿಷ್ಟ ಜಾತಿಯವರ ಮತಗಳು ಪೋಲಾಗುತ್ತಿದೆ. ಡಾ. ಬಾಬಾ ಸಾಹೇಬರು ಯಾವ ಸಂವಿಧಾನವನ್ನು ರಾಷ್ಟ್ರ ಕಟ್ಟುವ, ಸರ್ವ ಜನಾಂಗದ ಅದರಲ್ಲೂ ಪರಿಶಿಷ್ಟರ ಅಭಿವೃದ್ಧಿಗಾಗಿ ಕೊಟ್ಟರೋ, ಅದೇ ಸಂವಿಧಾನವನ್ನು ಬಳಸಿಕೊಂಡು ರಾಷ್ಟ್ರ ಹೊಡೆಯುವ ಕಾರ್ಯಕ್ಕಾಗಿ ಪರಿಶಿಷ್ಟ ಜಾತಿಯವರನ್ನು ಬಳಸಿಕೊಳ್ಳುತ್ತಿದ್ದಾರೆ. ವಿಪರ್ಯಾಸವೆಂದರೆ ಈ ಕಾರ್ಯಕ್ಕೆ ಕಾಂಗ್ರೆಸ್, ಕಮ್ಯುನಿಸ್ಟ್‌ನವರು ಪರಿಶಿಷ್ಟ ಜಾತಿಯ ಮುಖಂಡರನ್ನೇ, ಪರಿಶಿಷ್ಟ ಜಾತಿಯ ಸಂಘಟನೆಗಳನ್ನೇ ಬಳಸಿಕೊಳ್ಳುತ್ತಿದ್ದಾರೆ.

ಈ ಮೂಲಕ ಡಾ. ಬಾಬಾ ಸಾಹೇಬರ ಸದುದ್ದೇಶದ 'ಶಿಕ್ಷಣ, ಸಂಘಟನೆ, ಹೋರಾಟ' ಎಂಬ ಘೋಷವಾಕ್ಯವು ದುರುದ್ದೇಶಕ್ಕೆ ದುರ್ಬಳಕೆಯಾಗುತ್ತಿದೆ. ಇದಕ್ಕೆ ಉದಾಹರಣೆಯೇ 'ಮಹಿಷ ದಸರಾ'. ಯಾರು ಈ ಮಹಿಷ?, ಆತ ಮಾನವನೂ? ದಾನವನೋ?, ರಾಜಾನೋ? ಸನ್ಯಾಸಿಯೊ?, ಬುದ್ಧನೋ? ಸಿದ್ದನೋ?, ದಲಿತನೋ? ಬ್ರಾಹ್ಮಣನೋ?, ಪುರಾಣದವನೋ? ಇತಿಹಾಸದವನೋ?, ಉತ್ತರದವನೋ? ದಕ್ಷಿಣದವನೋ?, ಇವೆಲ್ಲಾ ಪ್ರಶ್ನೆಗಳಿಗೆ ಇದುವರೆಗೂ ಸ್ಪಷ್ಟವಾದ ಉತ್ತರ ಸಿಕ್ಕಿಲ್ಲ... ಬಹುಷಃ ಆ ಉತ್ತರ ಸಿಗುವುದೂ ಇಲ್ಲ. ಕಾರಣ 'ಪ್ರಶ್ನೆಯೇ ತಪ್ಪಿದ್ದಾಗ ಸರಿ ಉತ್ತರ ಹೇಗೆ ಸಿಗುತ್ತದೆ'?.

**ಇತ್ತೀಚಿಗೆ ಬಾಯಿ ತೆಗೆದ್ರೆ ಕೆಟ್ಟ ಪದ ಬಳಸುವ ಬೀಪ್ ಬುದ್ದಿಜೀವಿಯೊಬ್ಬ ಸುದ್ದಿವಾಹಿನಿಯಲ್ಲಿ 'ಮಹಿಷ ದಸರಾ' ಎಂಬ ಎರಡು ಪದಗಳ ಮದ್ಯೆ 'ಬೌದ್ಧ' ಎಂಬ ಪದ ಸೇರಿಸಿ 'ಮಹಿಷ ಬೌದ್ಧ ದಸರಾ' ಎಂದು ಹೊಸದಾಗಿ ವ್ಯಾಖ್ಯಾನಿಸಿದ. ಇದು ಹಾಸ್ಯಾಸ್ಪದವಲ್ಲದೆ ಮತ್ತೇನು. 'ಮಹಿಷ ಎಂಬುವವನು ಬೌದ್ಧನೇ ಆಗಿದ್ದರೆ ಅವನ ಹಣೆಯ ಮೇಲೆ ವಿಭೂತಿ ಏಕಿರುತ್ತಿತ್ತು? ಅವರ ಮೊದಲ ವಾದವೇ ಇಲ್ಲಿ ಬಿದ್ದು ಹೋಯಿತು .**

ಒಂದು ಸುಳ್ಳನ್ನು ಸತ್ಯ ಮಾಡಲು ಸುಳ್ಳಿನ ಮೇಲೆ ಸುಳ್ಳುಗಳನ್ನು ಜೋಡಿಸಿ ಬಹಳ ತಿಣುಕಾಡಿ, ತಿಣುಕಾಡಿ ನಮ್ಮ ಜನರನ್ನು ಇವರು ದಿಕ್ಕು ತಪ್ಪಿಸಿದ್ದಾರೆ. ಐತಿಹಾಸಿಕ ಹಿನ್ನಲೆಯಿಂದ ನಾವು ಇಲ್ಲದ ಈ ಮಹಿಷನನ್ನು ವಿಶ್ಲೇಷಣೆ ಮಾಡುವುದಾದರೆ ಈ ಸುಳ್ಳುಜೀವಿಗಳ ಪ್ರತಿಪಾದನೆಯಂತೆಯೇ ಆತ ಅಶೋಕನು ಮೂರನೇ ಧರ್ಮ ಸಮ್ಮೇಳನದ ನಂತರ ಕಳಿಸಿದ ಬೌದ್ಧ ಬಿಕ್ಕುವೇ ಆದರೆ ಅವನು ಸನ್ಯಾಸಿಯಾಗಿರುತ್ತಾನೆ. ಸನ್ಯಾಸಿಯಾದವನು ಇಲ್ಲಿ ಹೇಗೆ ರಾಜನಾಗಲು ಸಾಧ್ಯ? ಆತ ಬೌದ್ಧ ತತ್ವಗಳನ್ನು ಪ್ರಚಾರ ಮಾಡಲು ಬಂದವನೋ ಅಥವಾ ಇಲ್ಲಿ ಆಳ್ವಿಕೆ ಮಾಡಲು ಬಂದವನೋ?, ಅಸಲಿಗೆ ಅಶೋಕನು

ಆ ಸಂದರ್ಭದಲ್ಲಿ ಕರ್ನಾಟಕ ಭಾಗಕ್ಕೆ ಕಳಿಸಿದ್ದು ಇಬ್ಬರು ಬೌದ್ಧ ಬಿಕ್ಷುಗಳನ್ನು ಬನವಾಸಿಗೆ 'ರಖಿತ್' ಎಂಬಾತನನ್ನು ಮಹಿಷ ಮಂಡಲಕ್ಕೆ 'ಮಹಾದೇವ ತೇರಾ' ಎಂಬ ವ್ಯಕ್ತಿಯನ್ನು. ಇದು ನಿಜವಾಗಿಯೂ ಮತ್ತು ಇತಿಹಾಸಕಾರರು ದಾಖಲಿಸಿದ ಅಂಶವಾಗಿರುತ್ತದೆ ಮತ್ತು ಈಗಾಗಲೇ ವಿಶ್ವವಿದ್ಯಾನಿಲಯಗಳಲ್ಲಿ ಇತಿಹಾಸ ಪುಸ್ತಕಗಳಲ್ಲಿ ಭೋಧಿಸುತ್ತಿರುವ ವಿಷಯವಾಗಿರುತ್ತದೆ. ಆದರೆ ಈ ಅರೆಬೆಂದ ಬುದ್ದಿಜೀವಿಗಳು ಮಹಾದೇವ ತೇರಾ ಎಂಬ ವ್ಯಕ್ತಿಯೇ ಮಹಿಷನಾದ ಎಂಬ ವಾದವನ್ನು ಮುಂದಿಡುತ್ತಾರೆ. ಇದಕ್ಕಿಂತಲೂ ಹಾಸ್ಯಾಸ್ಪದ ಸಂಗತಿ ಏನೆಂದರೆ ಮಹಾದೇವ ತೇರಾ ಎಂಬ ವ್ಯಕ್ತಿಯೇ ಮಹದೇಶ್ವರ ಬೆಟ್ಟದಲ್ಲಿ ನೆಲೆಯಾದ ಮಹದೇಶ್ವರ ಸ್ವಾಮಿ ಎನ್ನುತ್ತಾರೆ.

ನಿಮ್ಮ ಮಹಾದೇವಾ ತೇರಾ ಎಂಬುವವನೇ ಮಹಿಷನಾದರೆ ಬಿಕ್ಷು ಯಾರು? ರಾಜ ಯಾರು? ಅಥವಾ ಅವರ ಎರಡನೇ ವಾದ ಮಹಾದೇವ ತೇರಾ ಎಂಬುವವನೇ ಮಹದೇಶ್ವರ ಸ್ವಾಮಿಯಾದರೆ ಆತ ಬೌದ್ಧ ತತ್ವವನ್ನು ಬೋಧಿಸಲು ಬಂದು ವಿಭೂತಿ ಬಳಿದುಕೊಂಡು ಶಿವತತ್ವವನ್ನು ಭೋದಿಸುವ ಪವಾಡಪುರುಷನಾಗಿ ಅವನೇ ಮತಾಂತರಗೊಂಡನೇ !!! ಇವರುಗಳು ತಮ್ಮ ಸುಳ್ಳುಗಳನ್ನು ಸತ್ಯ ಮಾಡುವ ಭರದಲ್ಲಿ ಒಬ್ಬ ಜಾನಪದ ಪವಾಡ ಪುರುಷ ವ್ಯಕ್ತಿಯನ್ನೇ ಬದಲಾಯಿಸಲು ಹೊರಟಿದ್ದಾರೆ. ಈ ಮೂಲಕ ಲಕ್ಷಾಂತರ ಜನರ ನಂಬಿಕೆಯನ್ನೇ ಮಣ್ಣು ಮಾಡಲು ಪ್ರಯತ್ನಿಸುತ್ತಿದ್ದಾರೆ. ಮಹಾದೇವಾ ತೇರಾ ಎಂಬ ವ್ಯಕ್ತಿ ಏಕೆ ಇಲ್ಲಿ ಬಂದು ವಿಭೂತಿ ಬಳಿದುಕೊಂಡು ಶಿವಲಿಂಗದ ಮುಂದೆ ಧ್ಯಾನ ಮಾಡುತ್ತಾ ಕುಳಿತ?.

ಮಹಿಷಾಸುರ ಎಂಬ ವ್ಯಕ್ತಿ ಮೈಸೂರನ್ನೇ ಆಳುತ್ತಿದ್ದ ಅರಸ ಎಂದಾದರೆ ಆ ಕಾಲದಲ್ಲಿ ಇತಿಹಾಸದ ದಾಖಲೆಯಂತೆ ಅಶೋಕ ಚಕ್ರವರ್ತಿಯ ಆಳ್ವಿಕೆ ಈ ಭಾಗದಲ್ಲಿತ್ತು. ಆ ಬಗ್ಗೆ ಬಹಳಷ್ಟು ಇತಿಹಾಸದ ದಾಖಲೆಗಳು ಮತ್ತು ಕರ್ನಾಟಕದಲ್ಲಿಯೇ ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗ ರಾಮೇಶ್ವರ, ಮಸ್ಕಿ, ಕೊಪ್ಪಳಗಳಲ್ಲಿ ಶಾಸನಗಳು ಲಭಿಸಿವೆ. ಆ ಶಾಸನಗಳಲೆಲ್ಲಿಯೂ ಮಹಿಷನ ಹೆಸರಿನ ಉಲ್ಲೇಖಗಳಿಲ್ಲ, ಅದನ್ನು ಮೀರಿ ನಾವು ಪ್ರಶ್ನಿಸುವುದಾದರೆ ಒಂದೇ ಸಮಯದಲ್ಲಿ ಒಂದೇ ಭಾಗದಲ್ಲಿ ಇಬ್ಬಿಬ್ಬರು ಸಾಮ್ರಾಟರು ಆಳುತ್ತಿದ್ದರೆ?, ಮಹಿಷ ಇಲ್ಲಿ ಆಳ್ವಿಕೆ ಮಾಡುತ್ತಿದ್ದ ಎಂಬುದೇ ನಿಜವಾದರೆ ನಾವು ಇತಿಹಾಸವನ್ನು ಅಧ್ಯಯನ ಮಾಡುವ ನಿಯಮಗಳ ಪ್ರಕಾರ ಆಗ ಮಹಿಷನ ವಂಶ ಯಾವುದು ? ಉತ್ತರವಿಲ್ಲ !!! ಆತನ ಆಳ್ವಿಕೆಯ ರಾಜ್ಯದ ವಿಸ್ತಾರ ಎಷ್ಟು??? ಉತ್ತರವಿಲ್ಲ !!! ಮಹಿಷನ ರಾಜ್ಯದ ರಾಜಧಾನಿ ಯಾವುದು ? ಉತ್ತರವಿಲ್ಲ !!! ಮಹಿಷನ ಕಾಲದ ಅರಮನೆ ಯಾವುದು ? ಉತ್ತರವಿಲ್ಲ !!! ಮಹಿಷನ ಆಳ್ವಿವಿಕೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಹೇಗಿತ್ತು ??? ಉತ್ತರವಿಲ್ಲ !!! ಮಹಿಷನ ಕಾಲದ ದೇವಸ್ಥಾನಗಳು ಮತ್ತು ಬೌದ್ಧ ಮಂದಿರಗಳು ಯಾವುದು ? ಉತ್ತರವಿಲ್ಲ !!! ಮಹಿಷನ ರಾಜ ಲಾಂಛನ ಯಾವುದು? ಉತ್ತರವಿಲ್ಲ !!! ಮಹಿಷನು ಮಾಡಿದ ಯುದ್ಧಗಳು ಯಾವುವು??? ಉತ್ತರವಿಲ್ಲ !!! ಮಹಿಷನ ನಂತರದ ರಾಜ ಯಾರು??? ಉತ್ತರವಿಲ್ಲ!!! ಮಹಿಷ ಯಾವ ಕಾಳಗದಲ್ಲಿ ಸತ್ತ??? ಉತ್ತರವಿಲ್ಲ!!!



ನನಗೆ ಬಹಳ ಬಹಳ ಕಾಡುವ ಪ್ರಶ್ನೆ... ಬುದ್ಧನ ಕಾಲದಲ್ಲಿ ಜಾತಿಪದ್ಧತಿ ಇತ್ತು. ಹಾಗಾದರೆ ಮಹಿಷ ಹೊಲೆಯ ರಾಜನಾದರೆ ಆತನ ಆಳ್ವಿಕೆಯಲ್ಲಿ ಜಾತಿ ಪದ್ಧತಿ ಇತ್ತಾ ???

ಆ ಜಾತಿಯನ್ನು ಬಿಟ್ಟು ಮಹಿಷ ಬೌದ್ಧನಾದರೆ ಆತ ಹೀನಯಾನ ತತ್ವದ ಪಾಲನೆ ಮಾಡುತ್ತಿದ್ದನೋ? ಅಥವಾ ಮಹಾಯಾನ ತತ್ವ ಪಾಲನೆ ಮಾಡುತ್ತಿದ್ದನೋ? ಅಲ್ಲದೆ ವಜ್ರಯಾನ ಅನುಸರಿಸುತ್ತಿದ್ದನೋ ? ಅಶೋಕ ಪ್ರಸರಿಸಿದ್ದು ಹೀನಯಾನವನ್ನು ಹಾಗಾಗಿಯೇ ಅವನ ಕಾಲದಲ್ಲಿ ನಾವು ಬೌದ್ಧ ಸ್ತೂಪಗಳನ್ನು ಕಾಣಬಹುದೇ ಹೊರತು ವಿಗ್ರಹಗಳನ್ನಲ್ಲ. ಸ್ವತಃ ಅಶೋಕನ ವಿಗ್ರಹಗಳನ್ನೇ ನಾವು ಹೆಚ್ಚು ನೋಡಲಾರೆವು. ಹಾಗಿದ್ದಲ್ಲಿ ಆ ಕಾಲದ ಮಹಿಷ ಹೀನಯಾನವನ್ನೇ ಪಾಲಿಸುತ್ತಿದ್ದ ಎಂದುಕೊಂಡರು ನಮಗೆ ಬುದ್ಧನನ್ನು ಪರಿಚಯಿಸಿದ ಅಶೋಕನನ್ನೇ ಮರೆಸದ ನಾವು ಇಂದೇಕೆ ಮಹಿಷನನ್ನು ಮರೆಸಲು ಹೋಗುತ್ತಿದ್ದೇವೆ!!!???

ದಸರಾ ಆಚರಣೆ ಮಾಡುವುದೇ ಯುದ್ಧವನ್ನು ಗೆದ್ದ ವಿಜಯೋತ್ಸವದ ಸಂಕೇತವಾಗಿ. ಹಾಗಿದ್ದಲ್ಲಿ ಮಹಿಷ ಗೆದ್ದ ರಾಜ್ಯ ಯಾವುದು ಆತನ ವಿಜಯೋತ್ಸವ ದಸರಾದ ಹಿನ್ನೆಲೆಯ ಇತಿಹಾಸವೇನು?



ಈ ಯಾವ ಪ್ರಶ್ನೆಗಳಿಗೂ ಅವರಲ್ಲಿ ಉತ್ತರವಿಲ್ಲ. ಉತ್ತರ ಸಿಗುವುದು ಸತ್ಯ ಸಂಗತಿಗಳಿಗೆ ಮಾತ್ರ. ಸುಳ್ಳಿನ ಕಂತೆಗಳಿಗಲ್ಲ. ಇತಿಹಾಸತಜ್ಞರ ಸಂಶೋಧನೆಯಂತೆ ಈ ಪ್ರದೇಶದಲ್ಲಿ ಬಹಳಷ್ಟು ಕಾಡೆಮ್ಮೆಗಳಿದ್ದವು. ಮನುಷ್ಯ ಕಾಡುಪ್ರಾಣಿಗಳನ್ನು ನಾಡಿಗೆ ತಂದು ಪಳಗಿಸಿಕೊಂಡು ತನ್ನ ಜೀವನೋಪಾಯಕ್ಕೆ ಬಳಸಿಕೊಳ್ಳುತ್ತಿದ್ದ. ಅವುಗಳಲ್ಲಿ ಕಾಡೆಮ್ಮೆ, ಕಾಡುಬೆಕ್ಕು, ಕಾಡುನಾಯಿ, ಹೀಗೆ ಹಲವಾರು ಕಾಡುಎಮ್ಮೆಯನ್ನು ತಂದು ತನ್ನ ವ್ಯವಸಾಯಕ್ಕೆ ಮತ್ತು ಹಾಲಿಗೆ ಆಹಾರಕ್ಕೆ ಉಪಯೋಗಿಸುತ್ತಿದ್ದ ಪ್ರತೀತಿ ಇತ್ತು. ಅದಕ್ಕಾಗಿಯೇ ಇದನ್ನು 'ಇರಮ್ಮೈ ನಾಡು - ಅಂದರೆ ಎಮ್ಮೆಗಳ ನಾಡು' ಎಂದು ಕರೆಯುತ್ತಿದ್ದರು. ಇರಮ್ಮೆ ಪದವು ಸಂಸ್ಕೃತದಲ್ಲಿ 'ಮಹಿಷ' ಎಂದು ಬದಲಾಗಿ ಎಮ್ಮೆಗಳ ಪ್ರದೇಶವು 'ಮಹಿಷ ಮಂಡಲ' ಎಂದು ಪರಿವರ್ತನೆಗೊಂಡಿದೆ. 'ಮಹಿಷ' ಎಂದರೆ ಕೋಣ, ಈಗಲೂ ಮಂಗಳೂರಿನ ಕಂಬಳ ಸ್ಪರ್ಧೆಯಲ್ಲಿ ಕೋಣಗಳ ಓಟವನ್ನು ನಾವು ಗಮನಿಸಬಹುದಾಗಿದೆ. ಈ ರೀತಿಯಾಗಿ ಮಹಿಷ ಮಂಡಲವೇ ಮಹಿಸೂರು ಅಥವಾ ಮೈಸೂರು ಆಗಿರಬಹುದಾದ ಸಾಧ್ಯತೆಗಳಿವೆ ಎಂದು ಇತಿಹಾಸ ತಜ್ಞರು ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ. ಆದರೆ ಇವರ ಕಟ್ಟು ಕಥೆಯ ಮಹಿಷ ರಾಜನಿಗೂ ಈ ನಮ್ಮ ಮೈಸೂರಿಗೂ ಎತ್ತಣದಿಂದೆತ್ತ ಸಂಬಂಧ.

ಮಹಿಷ ಇದ್ದ ಎಂಬ ಜೀವಂತ ದಾಖಲೆಗಳನ್ನು ತೋರಲು ಉತ್ತರ ಭಾರತದ ಒಂದಷ್ಟು ಮಹಿಷಾಸುರನ ದೇವಸ್ಥಾನಗಳನ್ನು, ಊರಿನ ಹೆಸರನ್ನು ತೋರಿಸುತ್ತಾರೆ. ಮಹಿಷಾಸುರನು ದೇವಸ್ಥಾನದ ಒಳಗೆ ಇದ್ದಾನೆಂದಾದರೆ ಅವನು ಚಾಮುಂಡಿ ತಾಯಿಯಂತೆಯೇ ಪುರಾಣ ವ್ಯಕ್ತಿಯೇ ಆಗುತ್ತಾನಲ್ಲದೆ ಇತಿಹಾಸದ ವ್ಯಕ್ತಿಯಾಗಲು ಹೇಗೆ ಸಾಧ್ಯ? ಉತ್ತರ ಭಾರತದ ಆ ಮಹಿಷಾಸುರರಿಗೂ ದಕ್ಷಿಣ ಕರ್ನಾಟಕದ ಈ ಮೈಸೂರಿಗೂ ಇಲ್ಲಿರುವ ವಿಭೂತಿ ಬಳಿದುಕೊಂಡ ಮಹಿಷಾಸುರನಿಗೂ ಎಲ್ಲಿಯ ತಾಳೆ ?

ಈಗ ಮೈಸೂರಿನಲ್ಲಿ 'ಮಹಾಬಲ ಬೆಟ್ಟ' ಎಲ್ಲಿದೆ ಎಂದರೆ ಎಲ್ಲರಿಗೂ ಆಶ್ಚರ್ಯವಾಗುತ್ತದೆ ಮತ್ತು ಈತ ದಾರಿ ತಪ್ಪಿ ಬಂದಿದ್ದಾನೆ ಎಂದು ಭಾವಿಸಬಹುದು. ಆದರೆ ಇತಿಹಾಸ ಏನೆಂದರೆ ಇಂದಿನ ಚಾಮುಂಡಿ ಬೆಟ್ಟವೇ ಅಂದಿನ ಮಹಾಬಲ ಬೆಟ್ಟ. ಮಹಾಬಲೇಶ್ವರ ಎಂಬ ಶಿವಲಿಂಗದ ಪೂಜೆ ಅಲ್ಲಿ ಚಾಮುಂಡಿ ದೇವಸ್ಥಾನದ ಪಕ್ಕದಲ್ಲಿ ಈಗಲೂ ನಡೆಯುತ್ತದೆ. ಯದುವಂಶದ ರಾಜರು ಮೈಸೂರನ್ನು ಆಳ್ವಿಕೆ ಮಾಡಲು ಬಂದಾಗಿನಿಂದ ಇಲ್ಲಿ ಚಾಮುಂಡಿಯನ್ನು ಪ್ರತಿಷ್ಠಾಪಿಸಿದರು. ಆ ಜನರ ನಂಬುಗೆಯ ಶಕ್ತಿ ದೇವತೆಯೇ



ಮಹಿಷ ದಸರಾ ಆಚರಿಸುವ ಮೂಲಕ ಹಿಂದೂ ಭಾವನೆಗಳಿಗೆ ನೋವುಂಟು ಮಾಡುತ್ತಿದ್ದಾರೆ. ನಾಲ್ಕು ಜನ ಸಂಘ ಕಟ್ಟಿಕೊಂಡು ದೆವ್ವವನ್ನು ದೇವರು ಮಾಡಿ, ದೇವರನ್ನು ದೆವ್ವ ಎಂದು ಹೇಳುತ್ತಿದ್ದಾರೆ. ಇವರನ್ನು ಈಗಲೇ ಮಟ್ಟ ಹಾಕದಿದ್ದರೆ ಮುಂದೊಂದು ದಿನ ಮಲೆ ಮಹದೇಶ್ವರಕ್ಕೆ ಹೋಗಿ ವೀರಪ್ಪನ್‌ನನ್ನೇ ಮೂಲ ನಿವಾಸಿಗಳ ನಾಯಕ ಎಂದು ಹೇಳಿ ಮಲೆ ಮಹದೇಶ್ವರನಿಗೂ ಅವಮಾನ ಮಾಡುತ್ತಾರೆ.

**- ಪ್ರತಾಪಸಿಂಹ**

**ಸಂಸದ, ಮೈಸೂರು ಕೊಡಗು ಲೋಕಸಭಾ ಕ್ಷೇತ್ರ**

ನಾಡದೇವಿ ಚಾಮುಂಡೇಶ್ವರಿ. ರಾಜರ ಆಳ್ವಿಕೆ ನಂತರ ಪ್ರಜಾಪ್ರಭುತ್ವದಲ್ಲಿ ದಸರಾ ಹಬ್ಬದ ಅಂಬಾರಿ ಮೆರವಣಿಗೆಯಲ್ಲಿ ಶಕ್ತಿದೇವತೆ ಚಾಮುಂಡಿಯ ಮೆರವಣಿಗೆ ಹೊರಡುತ್ತದೆ. ಆ ಕೊಟ್ಯಾಂತರ ಜನರ ನಂಬುಗೆಯ, ಭಕ್ತಿಯ ಶಕ್ತಿ ದೇವತೆ ಚಾಮುಂಡೇಶ್ವರಿಗೆ ಧಕ್ಕೆ ತರುವಂತೆ ಮಹಿಷ ದಸರಾ ಮಾಡುತ್ತೇವೆ ಎಂದು ಹೊರಡುವುದು ಈ ನಾಡಿನ ಜನತೆಯ ಭಾವನೆಗಳಿಗೆ ಮಾಡುವ ಅಪಚಾರವಲ್ಲವೇ?

ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ರವರು ಕೂಲಂಕುಶವಾಗಿ ಬೌದ್ಧ ಧರ್ಮ ಅಧ್ಯಯನ ಮಾಡಿದ್ದಾರೆ. ಆ ಬಗ್ಗೆ ಬುದ್ಧ ಮತ್ತು ದಮ್ಮ ಪುಸ್ತಕದಲ್ಲಿ ವಿವರವಾಗಿ ಬರೆದಿದ್ದಾರೆ. ಅಂಬೇಡ್ಕರ್ ರವರ ಬರಹ ಮತ್ತು ಭಾಷಣಗಳ ಯಾವ ಸಂಪುಟಗಳಲ್ಲೂ ಮಹಿಷನ ಉಲ್ಲೇಖವಿಲ್ಲ. ಅಲ್ಲಿಗೆ ಈ ಸುಳ್ಳು ಬುದ್ಧಿಜೀವಿಗಳು ಅವರಿಗಿಂತಲೂ ಅಧ್ಯಯನ ಮಾಡಿ ಇಲ್ಲಿ ಮಹಿಷನನ್ನು ಮೆರೆಸಲು ಹೊರಟಿದ್ದಾರೆಯೇ ?

ನೆನಪಿರಲಿ... ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ರವರು ನಿಮಗೆ ಸಂವಿಧಾನವನ್ನು ಕೊಟ್ಟಿರುವುದು ಪರಿಶಿಷ್ಟ ಜಾತಿಯವರಾದ ನಾವು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಹೊರತು, ಅರ್ಥವಿಲ್ಲದ ಈ ಮಹಿಷ ಎಂಬ ಮೌಢ್ಯ ಆಚರಣೆಗೆ ಸೀಮಿತವಾಗಲು ಅಲ್ಲ. ಹನ್ನೊಂದು ಸಾವಿರದ ನೂರಾ ನಲವತ್ನಾಲ್ಕು ಕೋಟಿ ಎಸ್ ಸಿ ಎಸ್ ಪಿ - ಟಿ ಎಸ್ ಪಿ ಯಾ ಪರಿಶಿಷ್ಟರ ಹಣ ಬಿಟ್ಟಿ ಭಾಗ್ಯಗಳಿಗೆ ದುರ್ಬಳಕೆ ಆಗುತ್ತಿದೆ. ಗ್ರಾಮಕ್ಕೊಂದು ಹೆಂಡದ ಅಂಗಡಿ ತೆರೆದು ನಮ್ಮ ದಲಿತರನ್ನು ಕುಡಿಸಿ ಸಾಯಿಸಿ ಅವರ ಸಮಾಧಿಯ ಮೇಲೆ ಕಾಂಗ್ರೆಸ್ ನವರು ಸಾಮ್ರಾಜ್ಯ ಕಟ್ಟಲು ಹೋರಾಡುತ್ತಿದ್ದಾರೆ!!! ನಾವು ಹೋರಾಟ ಮಾಡಬೇಕಿರುವುದು ಈ ಅನ್ಯಾಯದ ವಿರುದ್ಧ. ಆದರೆ ದಲಿತರು ದಾರಿ ತಪ್ಪಿರುವುದು ಕಲ್ಪಿತ ಮಹಿಷನೆಂಬ ವ್ಯಕ್ತಿಯೆಡೆಗೆ. ಇದು ಸರಿಯೇ? ಪರಿಶಿಷ್ಟ ಜಾತಿಯವರೇ ಆಲೋಚಿಸಬೇಕು.



# ನಾರಿಯರಿಗಾಗಿ ನರೇಂದ್ರರಿಂದ 'ನಾರಿ ಶಕ್ತಿ ವಂದನಾ'




ಅಶ್ವಿನಿ ಶಂಕರ್
ಸದಸ್ಯರು
ರಾಜ್ಯ ಪ್ರಕಾಶನ ಪ್ರಕೋಷ್ಠ


ಒಂದು ಆರೋಗ್ಯಕರ ಸಮಾಜವೆಂದರೆ ಪುರುಷರಿಗೆ ಸರಿಸಮಾನವಾಗಿ ಶಿಕ್ಷಣ, ಭದ್ರತೆ, ಸ್ವಾತಂತ್ರ್ಯ, ಉದ್ಯೋಗವಕಾಶಗಳು, ಅಧಿಕಾರ, ಸಂಪತ್ತು ಎಲ್ಲವನ್ನೂ ಸಹ ಆ ಸಮಾಜದ ಹೆಣ್ಣು ಮಕ್ಕಳು ಎಲ್ಲವನ್ನೂ ಪಡೆಯುವುದಾಗಿದೆ. ಪ್ರಸ್ತುತದಲ್ಲಿ ವಿಶ್ವದಾದ್ಯಂತ ಭಾರತವೂ ಸೇರಿದಂತೆ ಎಲ್ಲೆಡೆಗಳಲ್ಲಿ ಸ್ತ್ರೀ ಸಮಾನತೆಯ ವಿಷಯವಾಗಿ ಸಾಕಷ್ಟು ಚರ್ಚೆ ನಡೆಯುತ್ತಿದ್ದು, ಜಾಗೃತಿ ಮೂಡಿಸಲಾಗುತ್ತಿದೆ. ಮುಖ್ಯವಾಗಿ ಮಹಿಳೆಯರನ್ನು ಹೆಚ್ಚಿನ ಸಂಖ್ಯೆಗಳಲ್ಲಿ ರಾಜಕೀಯ ರಂಗದಲ್ಲಿ ತೊಡಗಿಸಿ, ಮಹಿಳಾ ನಾಯಕಿಯರನ್ನಾಗಿ ಬಲಪಡಿಸಿ ಮಹಿಳೆಯರೇ ಪುರುಷರ ಸಮಾನವಾಗಿ ಚುನಾಯಿತ ಪ್ರತಿನಿಧಿಗಳಾಗಿ, ಸಮಾಜದ ಸ್ವಾಸ್ಥ್ಯಕ್ಕೆ ಬೇಕಾದ ಕಾನೂನುಗಳನ್ನು ರೂಪಿಸಿ ದೇಶವನ್ನು ಜವಾಬ್ದಾರಿಯಿಂದ ಮುನ್ನಡೆಸುವ ನಿಟ್ಟಿನಲ್ಲಿ ನಮ್ಮ ಭಾರತ ಇಂದು ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ದಾಪುಗಾಲು ಹಾಕುತ್ತಿದೆ.

ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಸೆಪ್ಟೆಂಬರ್ ತಿಂಗಳಿನಲ್ಲಿ ವಿಶೇಷ ಅಧಿವೇಶನ ಘೋಷಿಸಿ ತನ್ನೆಲ್ಲಾ ಎನ್‌ಡಿಎ ಮೈತ್ರಿಕೂಟದ ಸಂಸದರಿಗೆ ಕಡ್ಡಾಯವಾಗಿ ಸಂಸತ್ತಿನಲ್ಲಿ ಹಾಜರಿರಬೇಕೆಂದು ವಿಪ್ ಜಾರಿ ಮಾಡಿತೋ, ಆಗ ಕಾಂಗ್ರೆಸ್ ಮತ್ತು ಅದರ ಮೈತ್ರಿ ಪಕ್ಷಗಳಿಗೆ ತಳಮಳ ಪ್ರಾರಂಭವಾಗಿ ಹತ್ತಾರು ದಿನಗಳ ಕಾಲ ಕಣ್ಣಿಗೆ ಎಣ್ಣೆಬಿಟ್ಟುಕೊಂಡು, ಆತಂಕದಿಂದ ಕಾಯುತ್ತಿದ್ದರು. 19 ಸೆಪ್ಟೆಂಬರ್ 2023ರಂದು ಗಣೇಶ ಚತುರ್ಥಿಯ ದಿನದಂದೇ ಭಾರತ ಹಾಗೂ ಭಾರತೀಯ ನಾರಿಯರ ಪಾಲಿಗೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ವಿಶೇಷ ದಿನ.

ಪ್ರಧಾನಿ ಶ್ರೀ ಮೋದಿ ಅವರ ನಾಯಕತ್ವದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ಸರ್ವ ಸಂಸದರು ಶಿಸ್ತಿನಿಂದ ಪ್ರಧಾನಿಗಳ ಜೊತೆಗೂಡಿ, ದೇಶಭಕ್ತಿಯ ಘೋಷವಾಕ್ಯಗಳನ್ನು ಕೂಗುತ್ತಾ, ಸಂಭ್ರಮದಿಂದ ಹೆಜ್ಜೆ ಹಾಕುತ್ತಾ,



## ನಾರಿ ಶಕ್ತಿ ವಂದನಾ ಅಧಿನಿಯಮದ 6 ಪ್ರಮುಖ ಅಂಶಗಳು

- ಲೋಕಸಭೆ, ರಾಜ್ಯಗಳ ವಿಧಾನಸಭೆ ಮತ್ತು ದೆಹಲಿಯ ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲು.
- ಈ ಮಸೂದೆ ಅಂಗೀಕಾರವಾಗಿದ್ದರೂ ಸಹ, ಇದರ ಅನ್ವಯದ ನಿಯಮಗಳನ್ನು 2027ರಲ್ಲಿ ನಡೆಯುವ ಕ್ಷೇತ್ರಗಳ ಮರು ವಿಂಗಡನೆಯ ನಂತರವಷ್ಟೇ ಜಾರಿಗೆ ಬರಲಿದೆ.
- ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಗಳ 1/3 ರಷ್ಟು ಮೀಸಲಿರುವ ಸೀಟುಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮಹಿಳೆಯರಿಗೆ ಮೀಸಲಿಡಲಾಗುವುದು. ಇತರ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಈ ರೀತಿಯ ಯಾವುದೇ ಮೀಸಲಾತಿ ಇರುವುದಿಲ್ಲ.
- ರಾಜ್ಯಸಭೆ ಮತ್ತು ರಾಜ್ಯ ವಿಧಾನ ಪರಿಷತ್ತುಗಳಲ್ಲಿ ಯಾವುದೇ ಮಹಿಳಾ ಮೀಸಲಾತಿ ಇರುವುದಿಲ್ಲ.
- ಈ ಮೀಸಲಾತಿಯ ಮಸೂದೆಯನ್ನು ಕಾನೂನು ಪರಿವರ್ತನೆಗೊಂಡ ನಂತರ ಕೇವಲ 15 ವರ್ಷಗಳ ಕಾಲ ಅಸ್ತಿತ್ವದಲ್ಲಿರಲಿದೆ. ಆದರೆ ಇದರ ಕಾಲಮಿತಿಯನ್ನು ಸಂದರ್ಭ ಅನುಸಾರವಾಗಿ ವಿಸ್ತರಿಸಬಹುದಾಗಿದೆ.
- ಕ್ಷೇತ್ರಗಳ ಮರು ವಿಂಗಡನೆಯ ನಂತರ, ಮಹಿಳೆಯರಿಗೆ ಮೀಸಲಿರುವ ಸೀಟುಗಳನ್ನು ಆವರ್ತನ ಪದ್ಧತಿಯ ಮೇರೆಗೆ ಪ್ರತಿಸಾರಿ ಬದಲಾಯಿಸಬಹುದಾಗಿದೆ.

ನೂತನ ಸಂಸತ್ ಭವನದೊಳಗೆ ಪಾದಾರ್ಪಣೆ ಮಾಡಿದರು. ಅಂತಹ ಐತಿಹಾಸಿಕ ದಿನದಂದು ಮತ್ತೊಂದು ಐತಿಹಾಸಿಕ ಸುಕೃತ್ಯ ಮಾಡಲು ಪ್ರಧಾನಿ ಶ್ರೀ ಮೋದಿ ಸರ್ಕಾರ ಪೂರ್ವಭಾವಿಯಾಗಿ ಸಕಲ ಸಿದ್ಧತೆ ಮಾಡಿ ಕೊಂಡಿತ್ತು. 'ನಾರಿ ಶಕ್ತಿ ವಂದನ ಅಧಿನಿಯಮ' ಹೆಸರಿನಲ್ಲಿ ಈ ದೇಶದ ನಾರಿಯರಿಗೆ ಸಲ್ಲಬೇಕಾಗಿದ್ದ, ಶತಮಾನಗಳ ಕೂಗಾಗಿದ್ದ, ಅನೇಕ ಮಹಿಳಾ ನಾಯಕಿಯರ ಬಯಕೆ ಮತ್ತು ಕನಸಾಗಿದ್ದ, ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಮೀಸಲಾತಿಯ ಮಸೂದೆಯನ್ನು ಮಂಡಿಸಲಾಯಿತು. 19ನೇ ಸೆಪ್ಟೆಂಬರ್ 2023ರಂದು ಲೋಕಸಭೆಯಲ್ಲಿ ಮತ್ತು 20 ಸೆಪ್ಟೆಂಬರ್ 2023ರಂದು ರಾಜ್ಯಸಭೆಯಲ್ಲಿ ಅವಿರೋಧವಾಗಿ 541 ಮತಗಳನ್ನು ಪಡೆಯುವುದರ ಮೂಲಕ ಅಂಗೀಕಾರ ದೊರೆಯಿತು.

### ಮಹಿಳಾ ಮೀಸಲಾತಿ ಕಾಯ್ದೆಯ ಅವಶ್ಯಕತೆ

ಇಂದು ಭಾರತದಲ್ಲಿ ಜನಸಂಖ್ಯೆಯ ಆಧಾರದಲ್ಲಿ ಗಂಡು / ಹೆಣ್ಣು ಅನುಪಾತವನ್ನು ತುಲನಾತ್ಮಕವಾಗಿ ನೋಡಿದರೆ ಮಹಿಳೆಯರು ಪುರುಷರಷ್ಟೇ ಪ್ರಮಾಣದಲ್ಲಿ ಸರಿಸಮಾನರಾಗಿದ್ದಾರೆ. ಆದರೆ, ರಾಜಕಾರಣದಲ್ಲಿ ತೊಡಗಿಸಿಕೊಂಡು ಚುನಾಯಿತ ಪ್ರತಿನಿಧಿಗಳಾಗಿ, ಶಾಸಕಿಯರು, ಸಂಸದರಾಗಿ ನೋಡಿದಂತಹ ಸಂದರ್ಭದಲ್ಲಿ ಅವರ ಸಂಖ್ಯೆ ಅತ್ಯಂತ ಕಡಿಮೆ ಪ್ರಮಾಣದಲ್ಲಿದ್ದು, ಶೋಚನೀಯ ಪರಿಸ್ಥಿತಿಯಲ್ಲಿದೆ, ಅಲ್ಲಿ ಸಮಾನತೆ ಕಂಡು ಬರುವುದಿಲ್ಲ. ಇದಕ್ಕೆ ಪುರಾವೆ ಇಲ್ಲಿದೆ.

2011ರ ಜನಗಣತಿಯ ಆಧಾರದ ಮೇಲೆ ಗಂಡು / ಹೆಣ್ಣಿನ ಸಂಖ್ಯೆಯನ್ನು ನೋಡಿದರೆ ಪ್ರತಿ 1,000 ಪುರುಷರಿಗೆ 943 ಮಹಿಳೆಯರಿದ್ದಾರೆ. 2021ರ ರಾಷ್ಟ್ರೀಯ ಕುಟುಂಬ ಸ್ವಾಸ್ಥ್ಯ ಸಮೀಕ್ಷೆಯ ಅನ್ವಯ ಭಾರತದಲ್ಲಿ ಹೆಣ್ಣಿನ ಸಂಖ್ಯೆಯಲ್ಲಿ ಏರಿಕೆಯಾಗಿದ್ದು, ಪ್ರತಿ ಸಾವಿರ ಪುರುಷರಿಗೆ ಸಮಾಜದಲ್ಲಿ 1,023 ಹೆಣ್ಣು ಮಕ್ಕಳಿದ್ದಾರೆ. ಆದರೆ ಇದರ ಆಧಾರದ ಮೇಲೆ ನಾವು ಲೋಕಸಭೆಯಲ್ಲಿ ನೋಡಿದರೆ ಪ್ರತಿ ನೂರು ಗಂಡಸರಿಗೆ ಕೇವಲ 14.9%ರಷ್ಟು ಮಾತ್ರ ಮಹಿಳೆಯರಿದ್ದಾರೆ. ರಾಜ್ಯ ಸಭೆಯಲ್ಲಿಯೂ

ಮಹಿಳೆಯರ ಸಂಖ್ಯೆ ಪ್ರತಿ ನೂರು ಪುರುಷರಿಗೆ ಹೋಲಿಸಿದರೆ 14% ಮಾತ್ರ. ಅಮೆರಿಕಾದಲ್ಲಿ 18% ಮಾತ್ರ, ಆದರೆ ಇಡೀ ವಿಶ್ವದಲ್ಲಿ ರವಾಂಡಾ ದೇಶದಲ್ಲಿ ಅತಿ ಹೆಚ್ಚು ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿಯನ್ನು ನೀಡಲಾಗಿದೆ.

ರಾಜ್ಯಗಳ ಮಟ್ಟದಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಗಮನಿಸಿದರೆ, ಅದು ಕೇವಲ ಶೇ 8ರಷ್ಟು ಮಾತ್ರ!! ಗುಜರಾತ್‌ನಲ್ಲಿ 182 ವಿಧಾನಸಭಾ ಸದಸ್ಯರ ಪೈಕಿ ಕೇವಲ ಶೇ 8ರಷ್ಟು ಮಾತ್ರ ಮಹಿಳೆಯರು. ಹಿಮಾಚಲ ಪ್ರದೇಶದಲ್ಲಿ 68 ವಿಧಾನಸಭಾ ಸದಸ್ಯರ ಪೈಕಿ ಕೇವಲ ಒಬ್ಬ ಮಹಿಳಾ ಪ್ರತಿನಿಧಿಯನ್ನು ನೋಡಬಹುದು.

### ರಾಜಕೀಯ ಇತಿಹಾಸ

ಸ್ವಾತಂತ್ರ್ಯ ಪೂರ್ವದಿಂದಲೂ ಮಹಿಳೆಯರಿಗೆ ಪ್ರಾತಿನಿಧ್ಯ ಸಿಗಬೇಕೆಂಬ ಕೂಗು ಜೋರಾಗಿಯೇ ಇತ್ತು. ಝಾನ್ಸಿರಾಣಿ ಲಕ್ಷ್ಮೀ ಬಾಯಿ, ಬೇಗಂ ಹಜರತ್ ಮಹಲ್, ಕದಂಬಿನಿ ಗಂಗೂಲಿ, ಸರೋಜಿನಿ ನಾಯ್ಡು ಮುಂತಾದ ಹಲವಾರು ನಾಯಕಿಯರ ಕೂಗಾಗಿತ್ತು. ಈ ಮಹಿಳಾ ಪ್ರಾತಿನಿಧ್ಯಕ್ಕೆ ಸ್ವಾತಂತ್ರ್ಯದ ನಂತರ ಸಂವಿಧಾನ ಸಭೆಯಲ್ಲಿಯೂ ಬೇಡಿಕೆ ಇಡಲಾಗಿತ್ತು. 1970ರಲ್ಲಿ ವಿಶ್ವ ಸಂಸ್ಥೆಯು 1975 ವರ್ಷವನ್ನು ಅಂತಾರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸಿ, ಅದರ ಸದಸ್ಯ ರಾಷ್ಟ್ರಗಳಿಗೆ ತಮ್ಮ ದೇಶದಲ್ಲಿ ಮಹಿಳೆಯರ ಸ್ಥಿತಿಗತಿಗಳ ಕುರಿತಾಗಿ ಮಾಹಿತಿ ಕೇಳಿ ವರದಿ ನೀಡುವಂತೆ ಕೇಳಿದ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಪರಿಸ್ಥಿತಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಆರೋಗ್ಯದ ದೃಷ್ಟಿಯಿಂದಲೂ ಅತ್ಯಂತ ದಯನೀಯ ಪರಿಸ್ಥಿತಿಯಲ್ಲಿರುವುದು ಅಂದಿನ ಸರ್ಕಾರದ ಅರಿವಿಗೆ ಬಂದಿತು. ಅಲ್ಲಿಂದ ಇಂತಹುದೊಂದು ಆಲೋಚನೆ ಮೂಡಿತು.

ಮೊಟ್ಟ ಮೊದಲನೆಯದಾಗಿ 1971ರಲ್ಲಿ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಚಿವಾಲಯವು CSWI (Committee for Status of Women in India) ಎಂಬ ಸಮಿತಿಯನ್ನು ಶ್ರೀಮತಿ ವೀಣಾ ಮಜುಂದಾರ್ ರವರ ಅಧ್ಯಕ್ಷತೆಯಲ್ಲಿ ರಚಿಸಿತು. ಈ ಸಮಿತಿಯು 199 ಪುಟಗಳ ವಿಸ್ತೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಆ ವರದಿಯಲ್ಲಿ ಭಾರತವು ಮಹಿಳಾ ಪ್ರಾತಿನಿಧ್ಯ ಕಲ್ಪಿಸುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಅರಿವಿಗೆ ಬಂದಿತು. ಭಾರತವು ಎಂದೂ ಮಹಿಳಾ ಸಬಲೀಕರಣದ ಕುರಿತು ಆಲೋಚಿಸಿಯೇ ಇಲ್ಲದಿರುವುದು ಆಗ ಜ್ಞಾನೋದಯವಾಯಿತು. ನಂತರ 1987ರಲ್ಲಿ ರಾಜೀವ್ ಗಾಂಧಿ ರವರ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಅವರು ಅಂದಿನ ಕೇಂದ್ರ ಸಚಿವೆಯಾಗಿದ್ದ ಶ್ರೀಮತಿ ಮಾರ್ಗರೆಟ್ ಆಳ್ವ ರವರ ಅಧ್ಯಕ್ಷತೆಯಲ್ಲಿ 14 ಸದಸ್ಯರ ಸಮಿತಿಯನ್ನು ರಚಿಸಿದರು. ಈ ಸಮಿತಿಯು ಮಹಿಳೆಯರಿಗೆಂದೇ National Perspective Plan ರೂಪಿಸಿದರು. ಅದರ ಅನ್ವಯ 1988 ರಿಂದ 2000 ಇಸವಿಯ ವರೆಗೂ ಮಹಿಳೆಯರಿಗಾಗಿ 353 ಶಿಫಾರಸ್ಸುಗಳನ್ನು



ಸರ್ಕಾರಕ್ಕೆ ಸಲ್ಲಿಸಿತು. ಅದರಲ್ಲಿ ಒಂದು ಶಿಫಾರಸ್ಸು ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ದೊರೆಯಬೇಕೆನ್ನುವುದಾಗಿತ್ತು. ಆದರೆ ಇದಾದ ನಂತರ ಸರ್ಕಾರ ಬಹುಮತ ಕಳೆದುಕೊಳ್ಳಬೇಕಾಯಿತು. ಹಾಗಾಗಿ ಆ ಶಿಫಾರಸ್ಸುಗಳು ಜಾರಿಗೆ ಬರಲೇ ಇಲ್ಲ. ತದನಂತರ ದಿ. ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಆ 353 ಶಿಫಾರಸ್ಸುಗಳ ಪೈಕಿ ಒಂದು ಶಿಫಾರಸ್ಸಾಗಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಶೇ 33 ರಷ್ಟು ಮಹಿಳಾ ಪ್ರಾತಿನಿಧ್ಯವನ್ನು ಕಡ್ಡಾಯ ಮಾಡಲಾಯಿತು.

ಮುಂದುವರೆದು 1996ರಲ್ಲಿ ಮೊಟ್ಟ ಮೊದಲ ಬಾರಿಗೆ ಮಹಿಳಾ ಮೀಸಲಾತಿ ಬಿಲ್‌ನ್ನು ಅಂದಿನ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡರು ಸಂಸತ್ತಿನಲ್ಲಿ ಮಂಡಿಸಿದರು. ಅದರ ಪ್ರಕಾರವೂ ಸಹ ಸಂಸತ್ತಿನಲ್ಲಿ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ 1/3ರಷ್ಟು ಮೀಸಲಾತಿ ನೀಡುವುದು. ಆದರೆ, ಅಂದಿನ ಹಿಂದುಳಿದ ವರ್ಗಗಳಿಗೆ ಸೇರಿದ ಸಂಸದರು ಇದನ್ನು ತೀವ್ರವಾಗಿ ವಿರೋಧಿಸಿದ್ದರು. ಹಾಗಾಗಿ ಶ್ರೀ ದೇವೇಗೌಡರು ಮತ್ತೊಮ್ಮೆ ಕಮ್ಯುನಿಸ್ಟ್ ನಾಯಕಿಯಾದಂತಹ ಶ್ರೀಮತಿ ಗೀತಾ ಮುಖರ್ಜಿ ರವರ ಅಧ್ಯಕ್ಷತೆಯಲ್ಲಿ ಒಂದು **Select Committe,** 14 ಜನ ಸದಸ್ಯರನ್ನೊಳಗೊಂಡಂತೆ ರಚಿಸಿದರು. ಈಗಿನ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿರುವ ಕು. ಮಮತಾ ಬ್ಯಾನರ್ಜಿ, ದಿ. ಶ್ರೀಮತಿ ಸುಷ್ಮಾ ಸ್ವರಾಜ್, ಕು. ಉಮಾ ಭಾರತಿ ಅವರುಗಳು ಇದರ ಸದಸ್ಯರಾಗಿದ್ದರು.

ಈ ಸಮಿತಿಯು ಇತರೆ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಪ್ರಾತಿನಿಧ್ಯ ಸಿಗಬೇಕೆಂದು ವರದಿ ನೀಡಿತು. ಆದರೆ ಇದು ಸಾಧ್ಯವಾಗಲಿಲ್ಲ. ಕಾರಣ ಹಿಂದುಳಿದ ವರ್ಗಗಳ ಸಂಸದರ ವಿರೋಧ, ಅವರಿಗೆ ಮೊದಲು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಘೋಷಿಸಿದ ನಂತರವಷ್ಟೇ ಅದರಲ್ಲಿ ಮಹಿಳೆಯರ ಮೀಸಲಾತಿ ನೀಡಲು ಸಾಧ್ಯವೆಂಬುದಾಗಿತ್ತು.

ನಂತರ ಬಂದ ಶ್ರೀ ಐ.ಕೆ. ಗುಜ್ರಾಲ್ ನೇತೃತ್ವದ ಸರ್ಕಾರ ಮೇ 16, 1997ರಂದು ಈ ಮಹಿಳಾ ಮೀಸಲಾತಿ ಮಸೂದೆಯನ್ನು ಮತ್ತೊಮ್ಮೆ ಸಂಸತ್ತಿನಲ್ಲಿ ಮಂಡಿಸಿತು. ಆದರೆ ಮತ್ತೊಮ್ಮೆ ಹಿಂದುಳಿದ ವರ್ಗಗಳ ಸಂಸದರ ವಿರೋಧದ ಕಾರಣವಾಗಿ ಸೋಲಾಯಿತು.

ಮುಂದುವರೆದು 1998, ಜುಲೈ 12 ರಂದು ದಿ. ಶ್ರೀ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಅವರು ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಲು ಅಂದಿನ ಕೇಂದ್ರ ಕಾನೂನು ಸಚಿವರಾಗಿದ್ದಂತಹ ಶ್ರೀ ತಂಬಿ ದೊರೈ ರವರು ಮಂಡಿಸಲು ಹೋದಾಗ ವಿರೋಧ ಪಕ್ಷಗಳಲ್ಲೊಂದಾದ ಆರ್‌ಜೆಡಿ ಪಕ್ಷದ ಸಂಸದ ಶ್ರೀ ಸುರೇಂದ್ರ ಪ್ರಕಾಶ್ ಯಾದವ್ ರವರು ಶ್ರೀ ತಂಬಿದೊರೈರವರ ಕೈಯಿಂದ ಆ ಮಸೂದೆಯ ಲಿಖಿತ ಪ್ರತಿಯನ್ನು ಕಸಿದುಕೊಂಡು ಸಂಸತ್ ಭವನದ ಬಾವಿಯಲ್ಲಿ ತುಂಡು ತುಂಡಾಗಿ ಹರಿದು ಬಿಸಾಡಿದರು. ಅದೇ ಸಮಯದಲ್ಲಿ ಬಿಎಸ್‌ಪಿ ಪಕ್ಷದ ಇಲಿಯಾಸ್ ಆಜ್ಮಿ ರವರು ಮಹಿಳಾ ಮೀಸಲಾತಿ ವಿಷಯ ಬಂದರೆ ಇತರೆ ಹಿಂದುಳಿದ ಜಾತಿಗಳ ಮಹಿಳೆಯರ ಜೊತೆ ಜೊತೆಗೆ ಮುಸಲ್ಮಾನ ಮಹಿಳೆರಿಗೂ ಮೀಸಲಾತಿ ಸಿಗಬೇಕೆಂದು ಆಗ್ರಹಿಸಿದ್ದರು. ದುರದೃಷ್ಟವಶಾತ್ ಕೇಂದ್ರದಲ್ಲಿ ಎಐಎಡಿಎಂಕೆ ಪಕ್ಷದ ಅಧಿನಾಯಕಿ ದಿ. ಕು. ಜಯಲಲಿತಾ ರವರು ಎನ್‌ಡಿಎ ಮೈತ್ರಿಗೆ ನೀಡಿದಂತಹ ಬೆಂಬಲವನ್ನು ಹಠಾತ್ತಾಗಿ ವಾಪಸ್ ಪಡೆದಿದ್ದರಿಂದ ಸರ್ಕಾರ ವಿಸರ್ಜನೆಗೊಂಡಿತು.

ನಂತರ 2000ರಲ್ಲಿ ಕೇಂದ್ರ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ಮಹಿಳಾ ಮೀಸಲಾತಿ ಕುರಿತಾಗಿ ತಮ್ಮ ಪಕ್ಷಗಳ ವತಿಯಿಂದ ಸಲಹೆಗಳನ್ನು ನೀಡಲು ತಿಳಿಸಿತು. ಶ್ರೀ ಎಂ.ಎಸ್. ಗಿಲ್‌ರವರು ಅಂದಿನ ಕೇಂದ್ರ ಚುನಾವಣಾ ಆಯೋಗದ ಮುಖ್ಯಸ್ಥರಾಗಿದ್ದರು. ಎಲ್ಲಾ ಸಲಹೆಗಳನ್ನು ಸ್ವೀಕರಿಸುವಷ್ಟರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ / ಯುಪಿಎ ಮೈತ್ರಿಕೂಟದ ಶ್ರೀ ಮನ್‌ಮೋಹನ್ ಸಿಂಗ್ ರವರ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಶ್ರೀ ಮನ್‌ಮೋಹನ್ ಸಿಂಗ್ ರವರ ಸರ್ಕಾರ ಮೂರು ವಿಷಯಗಳ ಅನುಷ್ಠಾನದ ಕುರಿತು ತೀರ್ಮಾನಿಸಿತು. ಮೊದಲನೆಯದಾಗಿ ಶೇ 33ರಷ್ಟು ಮಹಿಳಾ ಮೀಸಲಾತಿಯನ್ನು ತರುತ್ತೇವೆ. ಎರಡನೆಯದಾಗಿ 1/3ರಷ್ಟು ಮಹಿಳಾ ಮೀಸಲಾತಿಯನ್ನು 100 ಸೀಟುಗಳಿಗೆ ಬದಲಾಗಿ ಅದನ್ನು 133 ಸೀಟುಗಳಿಗೆ ಹೆಚ್ಚಿಸಿ ಅದರಲ್ಲಿ ಶೇ 33 ಸೀಟುಗಳನ್ನು ಮಹಿಳೆಯರಿಗೆ ಮೀಸಲಿಡುವುದಾಗಿತ್ತು. ಮೂರನೆಯದಾಗಿ ಕೇವಲ ಲೋಕಸಭೆ / ರಾಜ್ಯ ವಿಧಾನಸಭೆಗಳಲ್ಲಷ್ಟೇ ಅಲ್ಲದೆ, ರಾಜಕೀಯ ಪಕ್ಷಗಳಲ್ಲಿಯೂ ಸಹ ಶೇ 33 ರಷ್ಟು ಮಹಿಳೆಯರಿಗೆ ಚುನಾವಣೆ ಟಿಕೆಟ್‌ಗಳನ್ನು ನೀಡುವುದಾಗಿತ್ತು.

ಇವುಗಳ ಆಧಾರದ ಮೇರೆಗೆ ಮೇ 6, 2008ರಂದು ರಾಜ್ಯಸಭೆಯಲ್ಲಿ ಯುಪಿಎ ಸರ್ಕಾರ ರಾಜ್ಯಸಭೆಯಲ್ಲಿ ಮಹಿಳಾ ಮೀಸಲಾತಿ ಕಾಯ್ದೆಯನ್ನು ಮಂಡಿಸಿತು. ಆದರೆ ಕಾಂಗ್ರೆಸ್ ಪಕ್ಷದ ಒಳಗೆಯೇ ಅನೇಕ ಭಿನ್ನಾಭಿಪ್ರಾಯಗಳು ಮೂಡಿದವು. ಕಾಂಗ್ರೆಸ್ ಅಧಿನಾಯಕಿಯಾಗಿದ್ದಂತಹ ಶ್ರೀಮತಿ ಸೋನಿಯಾ ಗಾಂಧಿ ರವರಿಗೆ ಇದಕ್ಕೆ ಸುತರಾಂ ಒಪ್ಪಿಗೆ ಇರಲಿಲ್ಲ. ಅವರು ಮತ್ತು ಅವರ ಪಕ್ಷ ಹಿಂದಿನಿಂದಲೂ ಈ ವಿಷಯಗಳಲ್ಲಿ ದ್ವಂದ್ವ ನೀತಿಯನ್ನು ಅನುಸರಿಸುತ್ತಲೇ ಬಂದಿತ್ತು. ಇದರ ಪರಿಣಾಮ ಅಂದು ಮಹಿಳಾ ಮೀಸಲಾತಿ ಮಸೂದೆ ರಾಜ್ಯಸಭೆಯಲ್ಲಿ ಅಂಗೀಕೃತಗೊಂಡರೂ ಸಹ ಲೋಕಸಭೆಯಲ್ಲಿ ಸೋತು ನಲುಗಿತು. ಇದರ ಸಂಪೂರ್ಣ ಹೊಣೆ ಶ್ರೀಮತಿ ಸೋನಿಯಾರವರಿಗೆ ಮೀಸಲು.

2014ರಲ್ಲಿ ಭಾರತದ ಸ್ವರ್ಣಯುಗದ ಪ್ರಾರಂಭವಾಯಿತು. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರವು ಅಸ್ತಿತ್ವಕ್ಕೆ ಬಂದಿತು. ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿಯೇ ಮಹಿಳಾ ಮೀಸಲಾತಿ ತರುವುದಾಗಿ ಘೋಷಿಸಿತ್ತು. ಇದರ ಜೊತೆ ಜೊತೆಗೆ ಮಹಿಳಾ ಸಬಲೀಕರಣದ ಪ್ರಯುಕ್ತ ಉಜ್ವಲಾ, ಬೇಟಿ ಪಡಾವೋ – ಬೇಟಿ ಬಚಾವೋ, ಸ್ವಚ್ಛ ಭಾರತ ಯೋಜನೆಯ ಅಡಿಯಲ್ಲಿ ಬಯಲು ಮುಕ್ತ ಶೌಚ ಮಾಡಲು ಇಡೀ ಭಾರತದಾದ್ಯಂತ ಶೌಚಾಲಯಗಳ ನಿರ್ಮಾಣ, ಮುದ್ರಾ ಯೋಜನೆ, ಮಾತೃ ವಂದನಾ, ಮಾತೃ ಛಾಯಾ ಯೋಜನೆಗಳನ್ನು ಘೋಷಿಸಿತು. ಆದರೆ ಸಂಸತ್ತಿನಲ್ಲಿ 2/3ರಷ್ಟು ಬಹುಮತ ಬಿಜೆಪಿಗೆ ಇಲ್ಲದಿದ್ದ ಕಾರಣ 2014–2019ರಲ್ಲಿ ಮಹಿಳಾ ಮೀಸಲಾತಿ ಕಾಯ್ದೆಯನ್ನು ಅಂಗೀಕರಿಸಲು ಸಾಧ್ಯವಾಗಿರಲಿಲ್ಲ.

ಆದರೆ ಮತ್ತೊಮ್ಮೆ 2019ರಲ್ಲಿ ಪ್ರಧಾನಿ ಶ್ರೀ ಮೋದಿರವರ ನಾಯಕತ್ವವನ್ನು ದೇಶದ ಜನತೆ ಆಶೀರ್ವದಿಸಿದಾಗ, ಪ್ರಧಾನಿ ಶ್ರೀ ಮೋದಿಯವರು ಎರಡನೇ ಬಾರಿಗೆ ದೇಶದ ಪ್ರಧಾನ ಮಂತ್ರಿಗಳಾಗಿ ಆಯ್ಕೆಗೊಂಡರು. ಸಂಪೂರ್ಣ ಬಹುಮತದೊಂದಿಗೆ ಬಿಜೆಪಿ ದೇಶದಲ್ಲಿ ಪ್ರಚಂಡ ಜಯಭೇರಿ ಬಾರಿಸಿ, ಅತ್ಯಧಿಕ 303 ಸಂಸದರನ್ನು ಹೊಂದಿದ ಕಾರಣ ಈ ಬಾರಿ ಪ್ರಧಾನಮಂತ್ರಿಗಳು ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಿ, ಸಂಪೂರ್ಣ ಬಹುಮತದ ಕಾರಣ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಅಂಗೀಕೃತಗೊಳಿಸುವಲ್ಲಿ ಇಂತಹ ಪುಣ್ಯದ, ಪವಿತ್ರವಾದ ಕೈಂಕರ್ಯಕ್ಕೆ ಐತಿಹಾಸಿಕ ವಿಜಯ ದೊರಕಿಸಿಕೊಟ್ಟರು. ಈ ಅಂಗಿಕಾರ ತಾಯಿ ಭಾರತಿಗೆ ಸಂದ ಗೌರವ, ಗೆಲುವು ಎಂದರೆ ತಪ್ಪಾಗಲಾರದು.

ದೇಶದ ಜನರ ಮುಂದಾಳತ್ವದಲ್ಲಿ ಪ್ರಧಾನಿ ಶ್ರೀ ಮೋದಿ ಅವರು 'ನುಡಿದಂತೆ ನಡೆದವರು' ಎಂಬ ವಿಶ್ವಾಸ ಇನ್ನಷ್ಟು ಬಲಿಷ್ಟವಾಗಿ ಬೇರೂರಿರುವುದಂತೂ ಸತ್ಯ. ಬನ್ನಿ ಪ್ರಧಾನಿ ಶ್ರೀ ಮೋದಿ ಅವರೊಂದಿಗೆ ಕೈ ಜೋಡಿಸಿ ಅವರನ್ನು ಇನ್ನಷ್ಟು ಬಲಿಷ್ಠಗೊಳಿಸೋಣ.



# ಬಡವರಿಗಾಗಿ ಬಿಜೆಪಿ ಧ್ವನಿ...



ಸುಪ್ರೀತ್ ಜೈನ್
ಸಂಚಾಲಕರು
ಸಾಮಾಜಿಕ ಜಾಲತಾಣ, ಬೆಳ್ತಂಗಡಿ

**ಬೆ**ಳ್ತಂಗಡಿ ತಾಲೂಕಿನ ಕಳೆಂಜ ಗ್ರಾಮದಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಕೃಷಿ ಚಟುವಟಿಕೆಯನ್ನು ಮಾಡುತ್ತಾ ಅಲ್ಲಿಯೇ ವಾಸಿಸುತ್ತಿದ್ದ ಶ್ರೀ ದೇವಣ್ಣ ಗೌಡ ಎಂಬ ಬಡ ಕುಟುಂಬವನ್ನು ಯಾವುದೇ ಮುನ್ಸೂಚನೆ ಇಲ್ಲದೇ ಒಕ್ಕಲೆಬ್ಬಿಸಲು ಅರಣ್ಯ ಇಲಾಖೆಯು ಮುಂದಾಗಿತ್ತು. ಈ ಮಾಹಿತಿ ತಿಳಿಯುತ್ತಲೇ ಬೆಳ್ತಂಗಡಿ ಕ್ಷೇತ್ರದ ಶಾಸಕರಾದ ಶ್ರೀ ಹರೀಶ್ ಪೂಂಜ ಅವರು ಶ್ರೀ ದೇವಣ್ಣಗೌಡ ಅವರೊಂದಿಗೆ ಮಾತನಾಡಿ ನಿಮಗೆ  ಯಾವುದೇ ರೀತಯಲ್ಲಿ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಭರವಸೆ ನೀಡಿದರು.

ಆದರೆ ಅಷ್ಟೊತ್ತಿಗಾಗಲೇ ಅರಣ್ಯ ಇಲಾಖೆಯ ಅಧಿಕಾರಿಗಳು ಶ್ರೀ ದೇವಣ್ಣ ಗೌಡ ಅವರ ನಿರ್ಮಾಣ ಹಂತದಲ್ಲಿದ್ದ ಮನೆಯನ್ನು ನಾಶ ಮಾಡಿದರು.  ಶ್ರೀ ಹರೀಶ್ ಪೂಂಜ ಅವರು ಘಟನಾ ಸ್ಥಳಕ್ಕೆ ಧಾವಿಸಿ ಸಂತ್ರಸ್ಥ ಕುಟುಂಬದವರಿಂದ ಅವರು ವಾಸವಿದ್ದ ಜಾಗದ ಮಾಹಿತಿ ಪಡೆದು, ಕೆಡವಿದ್ದ ಮನೆ ಕಂಡು ತಾತ್ಕಾಲಿಕ ಶೆಡ್ ರೂಪದ ಮನೆ ನಿರ್ಮಿಸಿ ಕೊಟ್ಟರು. ಬಳಿಕ ಅರಣ್ಯ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿ ಸಮೀಕ್ಷೆಯಾಗುವವರೆಗೆ ಮಾನವೀಯತೆಯ ನೆಲೆಯಲ್ಲಿ ಬಡ ಕುಟುಂಬದ ಯಾವುದೇ ಸ್ವತ್ತುಗಳಿಗೆ ಹಾನಿಯನ್ನುಂಟುಮಾಡದಂತೆ  ಅರಣ್ಯ ಅಧಿಕಾರಿಗಳಲ್ಲಿ ಮನವಿ ಮಾಡಿದರು. ಆದರೆ ಅಧಿಕಾರಿಗಳು ಶಾಸಕರ ಮಾತನ್ನು ಕೇಳಲು ಸಿದ್ಧರಿರಲಿಲ್ಲ.

ಬಳಿಕ ಶಾಸಕರು ಸ್ವತಃ ರಾಜ್ಯ ಅರಣ್ಯ ಸಚಿವರಾದ ಶ್ರೀ ಈಶ್ವರ್ ಖಂಡ್ರೆ ಅವರನ್ನು ದೂರವಾಣಿ  ಮೂಲಕ ಸಂಪರ್ಕಿಸಿ ಪರಿಸ್ಥಿತಿಯನ್ನು ವಿವರಿಸಿದಾಗ ಯಥಾಸ್ಥಿತಿ ಕಾಪಾಡಿ, ಮುಂದಿನ ಆದೇಶದವರೆಗೆ ಯಾವುದೇ ಕ್ರಮವನ್ನು ಕೈಗೊಳ್ಳದಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಆದರೆ ಮರುದಿನ ಅಲ್ಲಿಯ ಪರಿಸ್ಥಿತಿಯೇ ಬೇರೆಯಾಗಿತ್ತು. ಬೆಳ್ಳಂಬೆಳಗ್ಗೆಯೇ ಅರಣ್ಯ ಇಲಾಖೆ ಅವರು ಮತ್ತೆ ಶ್ರೀ ದೇವಣ್ಣ ಗೌಡ ಅವರ ಮನೆಯ ಮುಂದೆ ನಿಂತಿತ್ತು. ತಾತ್ಕಾಲಿಕವಾಗಿ ನಿರ್ಮಿಸಲಾಗಿದ್ದ ಶೆಡ್ ರೂಪದ ಮನೆಯನ್ನೂ ಕೂಡ ನಾಶ ಮಾಡಲು ಸರ್ವಸನ್ನದ್ಧರಾಗಿ ಬಂದಿದ್ದರು. ಶಾಸಕರು  ಈ ಕುರಿತು ಅಧಿಕಾರಿಗಳನ್ನು ಪ್ರಶ್ನಿಸಿದಾಗ ಬಡವರನ್ನು ಒಕ್ಕಲೆಬ್ಬಿಸಲು ಸಚಿವರ ಆದೇಶವಿದೆ ಎಂಬ ಉತ್ತರವನ್ನು ನೀಡಿದರು.

ಶ್ರೀ ಹರೀಶ್ ಪೂಂಜ ಅವರು ಜಿಲ್ಲೆಯ ಶಾಸಕರಿಗೆ ಕರೆ ಮಾಡಿ ಪರಿಸ್ಥಿತಿಯನ್ನು ವಿವರಿಸಿ ಬಡ ಕುಟುಂಬದ ಜೊತೆ ಬಿಜೆಪಿ ನಿಲ್ಲಬೇಕಿದೆ ಎಂದು ಕೇಳಿಕೊಂಡಾಗ ಜಿಲ್ಲೆಯ ಶಾಸಕರುಗಳು, ಪರಿಷತ್ ಸದಸ್ಯರು, ಬಿಜೆಪಿ ಪದಾಧಿಕಾರಿಗಳು ಹಾಗೂ

ಮಂಡಲ ಅಧ್ಯಕ್ಷರು ಎಲ್ಲರೂ ಒಟ್ಟಾಗಿ ಬೆಳಗ್ಗೆಯೇ ಘಟನಾ ಸ್ಥಳಕ್ಕೆ ಆಗಮಿಸಿ ಬಡ ಕುಟುಂಬದ ಜೊತೆಗೆ ನಾವಿದ್ದೇವೆ ಎಂಬ ಭರವಸೆಯನ್ನು ನೀಡಿದರು. ಜಿಲ್ಲೆಯ ಶಾಸಕರು ಘಟನಾ ಸ್ಥಳದಲ್ಲಿದ್ದಾಗಲೇ ಅಧಿಕಾರಿಗಳು ತಾತ್ಕಾಲಿಕ ಮನೆಯನ್ನು ಕೂಡ ನಾಶಮಾಡಲು ಯತ್ನಿಸಿದರು. ಆಗ ಶಾಸಕರು ಡಿಎಫ್‌ಒ ಅವರು ಸ್ಥಳಕ್ಕೆ ಆಗಮಿಸಬೇಕೆಂದು ಪಟ್ಟು ಹಿಡಿದರು. ಶಾಸಕರ ಹಾಗೂ ಜನರ ಆಗ್ರಹಕ್ಕೆ ಮಣಿದ ಅರಣ್ಯ ಇಲಾಖೆ ಡಿಸಿಎಫ್ ಅವರನ್ನು ಘಟನಾ ಸ್ಥಳಕ್ಕೆ ಕಳುಹಿಸಿ ಮಾತುಕತೆ ನಡೆಸಿತು. ಕೊನೆಗೂ ಅರಣ್ಯ ಇಲಾಖೆ ಬಿಜೆಪಿ ಶಾಸಕರ ಆಗ್ರಹಕ್ಕೆ ಮಣಿಯಿತು.

ಶ್ರೀ ದೇವಣ್ಣ ಗೌಡ ಅವರ ಮನೆ ತೆರವುಗೊಳಿಸುವ ಅರಣ್ಯ ಇಲಾಖೆಯ ಪ್ರಯತ್ನ ಬಿಜೆಪಿಯ ಸಂಘಟಿತ ಹೋರಾಟದ ಪರಿಣಾಮವಾಗಿ ವಿಫಲವಾಯಿತು. ಶ್ರೀ ದೇವಣ್ಣ ಗೌಡರು ವಾಸಿಸುತ್ತಿದ್ದ ಸ್ಥಳವನ್ನು ಜಂಟಿ ಸಮೀಕ್ಷೆ ಮಾಡಿ ಮುಂದಿನ ವರದಿ ಬರುವವರೆಗೆ ಯಥಾಸ್ಥಿತಿ ಕಾಪಾಡಬೇಕು ಎನ್ನುವ ಶಾಸಕರ ಆಗ್ರಹಕ್ಕೆ ಅರಣ್ಯ ಇಲಾಖೆ ಸಮ್ಮತಿಯನ್ನು ಸೂಚಿಸಿತು. ಬಡವರ ಪರವಾಗಿ ಬಿಜೆಪಿ ಸದಾ ಧ್ವನಿ ಎತ್ತುತ್ತದೆ ಎನ್ನುವುದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಈ ಪ್ರಕರಣ ಸಾಕ್ಷಿಯಾಯಿತು.

ಈ ಹೋರಾಟದಲ್ಲಿ ಪರಿಷತ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್, ಬಂಟ್ವಾಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ



ರಾಜೇಶ್ ನಾಯ್ಕ್ ಬಂಟ್ವಾಳ, ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಭಾಗೀರಥಿ ಮುರುಳ್ಯ, ಮೂಡಬಿದ್ರೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಉಮಾನಾಥ್ ಕೋಟ್ಯಾನ್, ಮಂಗಳೂರು ಉತ್ತರ ಕ್ಷೇತ್ರದ ಶಾಸಕರಾದ ಡಾ. ವೈ. ಭರತ್ ಶೆಟ್ಟಿ, ಬೆಳ್ತಂಗಡಿ ಮಂಡಲ ಅಧ್ಯಕ್ಷರಾದ ಶ್ರೀ ಜಯಂತ್ ಕೋಟ್ಯಾನ್, ಪಕ್ಷದ ಪದಾಧಿಕಾರಿಗಳು, ವಿವಿಧ ಜಿಲ್ಲೆಗಳ ಬಿಜೆಪಿ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಒಳ್ಳೆಯ ಮನಸ್ಸಿನ ಮಿತ್ರರಿಂದ ತಾನೆ ನಮಗೂ ಬೆಲೆ...



ಬೆಳ್ತಂಗಡಿ ಕ್ಷೇತ್ರದ ಕಳೆಂಜದಲ್ಲಿ ಅರಣ್ಯ ಅಧಿಕಾರಿಗಳು ದಶಕಗಳ ಕಾಲದಿಂದ ವಾಸವಿದ್ದ ಸಾಮಾನ್ಯ ವ್ಯಕ್ತಿಯೊಬ್ಬರ ಮನೆಯಿಂದ ಒಕ್ಕಲೆಬ್ಬಿಸಲು ದಬ್ಬಾಳಿಕೆ ನಡೆಸಿ ವಿಫಲರಾದರು. ಈ ಸಂದರ್ಭದಲ್ಲಿ ನನ್ನ ಪ್ರಾಣ ಸ್ನೇಹಿತ, ಬೆಳ್ತಂಗಡಿಯ ಶಾಸಕ ಹರೀಶ್ ಪೂಂಜಾನಲ್ಲಿ ''ಕೇವಲ ಒಂದು ಮನೆಯನ್ನು ನಡೆಸುತ್ತಿರುವ ಇಷ್ಟೊಂದು ದೊಡ್ಡ ಹೋರಾಟ ಬೇಕೇನೋ'' ಅಂತ ಕೇಳಿದೆ. ಅದಕ್ಕವನು ''ಒಂದು ಫೋಟೋ ವಾಟ್ಸ್ ಅಪ್ ಮಾಡಿದ್ದೇನೆ ನೋಡು ಎಂದು ಒಂದು ಮನೆಯ ಉಳಿವಿಗಾಗಿ ಈ ಹೋರಾಟ ಅಲ್ಲ ಕಣೋ, ನಾನು ಈ ಮಗುವನ್ನು ಗಾಳಿಯಲ್ಲಿ ಮೇಲಕ್ಕೆ ಎಸೆಯುವಾಗ, ನನ್ನನ್ನು ನೋಡಿ ಆ ಮಗು ಧೈರ್ಯದಿಂದ ನಗುತ್ತಿತ್ತು. ಏಕೆಂದರೆ ಆ ಮಗುವಿಗೆ ನನ್ನ ಮೇಲೆ ನಂಬಿಕೆ ಇತ್ತು. ಅದೇ ರೀತಿ ನನ್ನ ಕ್ಷೇತ್ರದ ಪ್ರತೀ ವ್ಯಕ್ತಿಯೂ ಅಂತಹುದೇ ನಂಬಿಕೆಯನ್ನಿಟ್ಟಿದ್ದಾರೆ. ಆ ನಂಬಿಕೆ ಇಟ್ಟ ನನ್ನ ಬಂಧುಗಳಿಗಾಗಿ ನನ್ನ ಈ ಹೋರಾಟ. ಪ್ರತಿಫಲದ ನಿರೀಕ್ಷೆಯಿಲ್ಲ, ಪಟ್ಟ ಪರಿಶ್ರಮದ ಬಗ್ಗೆ ಚಿಂತೆಯಿಲ್ಲ, ಅವೆಲ್ಲಾ ನಂತರ ಯೋಚಿಸುವಂತಹುದ್ದು. ನನ್ನ ಮೇಲೆ ನಂಬಿಕೆ ಇಟ್ಟ ನನ್ನ ಕ್ಷೇತ್ರದ ಬಂಧುಗಳ ಭವಿಷ್ಯಕ್ಕಾಗಿ ಈ ಹೋರಾಟ'' ಎಂದಾಗ ಕಣ್ಣಂಚು ಯಾಕೋ ಅರಿವಿಲ್ಲದೆ ಒದ್ದೆಯಾಯಿತು. ಇಂಥಹ ಒಳ್ಳೆಯ ಮನಸ್ಸಿನ ಮಿತ್ರರಿಂದ ತಾನೆ ನಮಗೂ ಬೆಲೆ.

**– ಸಂದೀಪ್ ಕುಮಾರ್ ಮುಗೆರೋಡಿ**



# ಭರವಸೆಯ ಸಂಸ್ಕೃತಿ ಭಯದ ವಿಕೃತಿ...




**ಎಂ.ಬಿ. ಭಾನುಪ್ರಕಾಶ್**
ಪ್ರಕೋಷ್ಠಗಳ ರಾಜ್ಯ ಸಂಯೋಜಕರು


**ಶಿ**ವಮೊಗ್ಗದ ಎರಡು ಬೃಹತ್ ಮೆರವಣಿಗೆಗಳು. ಹಿಂದು ಮಹಾಸಭಾ ಗಣಪತಿ ವಿಸರ್ಜನೆ ಹಾಗೂ ಶಾಂತಿ ಸಂದೇಶದ ಈದ್ ಮಿಲಾದ್. ಎರಡೂ ಮೆರವಣಿಗೆಯಲ್ಲಿ ಯುವಕರು ಭಾರೀ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಊರೆಲ್ಲಾ ಕಡೆ, ಗಲ್ಲಿ ಗಲ್ಲಿಯಲ್ಲಿ, ವೃತ್ತಗಳಲ್ಲಿ, ರಸ್ತೆಗಳಲ್ಲಿ ಭರ್ಜರಿ ಅಲಂಕಾರ. ತ್ಯಾಗದ ಸಂಕೇತದ ಕೇಸರಿಯ ಬಣ್ಣದ ಧ್ವಜ, ತೋರಣ ಗಣಪತಿಗೆ.. ಸಮೃದ್ದಿಯ ಸಂಕೇತ ಸಸ್ಯ ಶ್ಯಾಮಲೆಯ ಹಸಿರು ಬಣ್ಣ ಶಾಂತಿಯ ಸಂದೇಶಕರಿಗೆ. ರಾಷ್ಟ್ರಕ್ಕಾಗಿ,ದೇಶಪ್ರೇಮ ಮೆರೆದ ಮಹನೀಯರ ಭಾವಚಿತ್ರದೊಂದಿಗೆ, ಭವ್ಯ ಪರಂಪರೆಯನ್ನು ನೆನಪಿಸುವ ಅಲಂಕಾರ ಒಂದೆಡೆಯಾದರೆ,, ರಾಷ್ಟ್ರವಿರೋಧಿ,ರಾಷ್ಟ್ರ ಘಾತುಕ, ದೌರ್ಜನ್ಯ, ಕ್ರೌರ್ಯ, ಹಿಂಸೆ, ಅತ್ಯಾಚಾರ, ಮತಾಂತರದ ಆಡಳಿತದ ಪರಂಪರೆಯ ನೆನಪು ಮಾಡುವ ಅಲಂಕಾರ ಇನ್ನೊಂದೆಡೆ.

'ಸರ್ವೇಭವಂತು ಸುಖಿನಃ' ಘೋಷಣೆ ಲಕ್ಷಲಕ್ಷ ಜನರ ಮೆರವಣಿಗೆಯಲ್ಲಿ. ಜಗತ್ತನ್ನು ಇಸ್ಲಾಂ ಮಯ ಮಾಡುವ ಜಿಹಾದ್ ಮಾನಸಿಕತೆಯ ಘೋಷಣೆ ಜುಲೂಸ್‌ನಲ್ಲಿ.. ಧರ್ಮರಕ್ಷಣೆಗಾಗಿ, ದುಷ್ಟಮರ್ಧಕ ಭಗವಾನ್ ನರಸಿಂಹನ ಅಲಂಕಾರ ಮೂರ್ತಿಪೂಜೆ ಮಾಡುವ ಸಂಸ್ಕೃತಿಯವರಿಂದ.. ಸ್ವಾರ್ಥಕ್ಕಾಗಿ,ಅಧಿಕಾರಕ್ಕಾಗಿ,ಸ್ವಹಿತಕ್ಕಾಗಿ ನರಮೇಧ,ಬಲಾತ್ಕಾರ ಮತಾಂತರ ಮಾಡಿದ, ಮೂರ್ತಿ ಭಂಜಕ ಔರಂಗಜೇಬ್,ಟಿಪ್ಪುವಿನ ಅಲಂಕಾರ ಆತನ ಪರಂಪರೆಯವರು ಎಂದು ತಪ್ಪು ತಿಳುವಳಿಕೆಯ, ಭ್ರಾಂತಿಯ ಶಾಂತಿದೂತರಿಂದ.

ಅಲ್ಲಾ ಮಾತ್ರ ದೇವರು ಎಂಬ ನಂಬಿಕೆಯಿಂದ ಹಾಗೂ ಮೂರ್ತಿಪೂಜೆ ಬಗ್ಗೆ ನಂಬಿಕೆ ಇಲ್ಲದ ಮುಸ್ಲಿಂ ಸಮಾಜ. ದೇವಬಂದಿ ತಬ್ಲೀಕ್ ಮುಂತಾದ ಮುಸ್ಲಿಮರು ಒಂದೆಡೆ! ಅದೇ ಸಮಾಜದ ಷಿಯಾ,ಸುನ್ನಿ ಮುಂತಾದವರು ರಾಷ್ಟ್ರವಿರೋಧಿ ಜೇಬ,ಟಿಪ್ಪು,ಹೈದರ್‌ನ ಭಾವಚಿತ್ರದ ಅಲಂಕಾರ ಮಾಡಿರುವುದು ಯಾವ ಉದ್ದೇಶಕ್ಕಾಗಿ? ಇದು ಮೂರ್ತಿ ಪೂಜೆಗೆ ಸರಿಸಮನಲ್ಲವೇ? ಯಾರಿಗೋ ನೋವು ಮಾಡಲು ತಮ್ಮತನ ಮರೆಯುವುದೇ? ಆ ಮೆರವಣಿಗೆಯ ಉದ್ದೇಶವೇ ಪ್ರಶ್ನಾರ್ಹ??

ಒಂದೂವರೆ ಲಕ್ಷ ಜನಸಾಮಾನ್ಯ ಹಿಂದುಗಳು, ಪಕ್ಷಭೇದ, ಜಾತಿಭೇದ,ಲಿಂಗಭೇದ,ಮರೆತು ಕುಣಿದು ಕುಪ್ಪಳಿಸಿ ಆನಂದ ಸಂತೋಷದಿಂದ ಮೆರವಣಿಗೆ ಶಾಂತಿಯುತವಾಗಿ ಮಾಡಬಹುದಾದರೆ! ಸಾವಿರ ಸಂಖ್ಯೆಯ ಮುಸಲ್ಮಾನರು, ಒಂದೇ ಮತಾಚರಣೆ ಮಾಡುವರು, ಮಹಿಳೆಯರನ್ನು ಮೆರವಣಿಗೆಗೆ ಬಾರದಂತೆ ತಡೆದು, ರಕ್ಷಿತ ಪ್ರದೇಶಗಳಿಗೆ ಅಟ್ಟಿ ಹಿಂಸಾಚಾರ ಮಾಡುವ ಪೂರ್ವಯೋಜಿತ ಸಂಚನ್ನು ಅರ್ಥ ಮಾಡಿಕೊಳ್ಳದಷ್ಟು ದಡ್ಡ ಸಮಾಜ ನಮ್ಮದಲ್ಲ.

'ಸಬ್ ಕಾ ಸಾಥ್... ಸಬ್ ಕಾ ವಿಕಾಸ್'ಎಂಬ ಧ್ಯೇಯದ ಸಮಾಜ ನಮ್ಮದು. ಹಿಂಸೆಯಿಂದ ದೂರವುಳಿದ ಜೀವನ ಪದ್ಧತಿಯ ಸಮಾಜದ ಪರಂಪರೆಯವರು ನಾವು. ಸಾವಿರಾರು ವರ್ಷದ ಬರ್ಬರತೆಯನ್ನು ಎದುರಿಸಿ, ಬಗ್ಗುಬಡಿದ ಮೃತ್ಯುಂಜಯ ಸಮಾಜ ಇದು. ತಾಳ್ಮೆ, ಸಂಯಮ, ಉದಾರತೆ, ಸಹೋದರತೆ ಮಹಿಳೆಯರನ್ನು ಮಾತೆಯರು ಎಂದು ಗೌರವಿಸುವ ಸುಸಂಸ್ಕೃತ ಹಿಂದೂ ಸಮಾಜ. ಇದ್ಯಾವುದೂ ದೌರ್ಬಲ್ಯದ ಲಕ್ಷಣಗಳಲ್ಲ! ಬದಲಾಗಿ, ಅಜೇಯತನ,ವಿಜಗೀಷು ಪ್ರವೃತ್ತಿಯ ಗುಣಧರ್ಮಗಳು.

ಹಾಗಾಗಿ ಸ್ನೇಹಕ್ಕೆ ಬದ್ದ..ಸಮರಕ್ಕೆ ಸಿದ್ಧ ನಮ್ಮ ಸ್ವಭಾವ. ಮರೆಯಬೇಡಿ.. ಮರೆತು ವಿನಾಶದ ಕಡೆ ಪ್ರಯಾಣ ಬೆಳೆಸಬೇಡಿ.




# ಹಿಂದು ರಕ್ಷಣೆಗೆ ವಿಫಲ

## ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ನಳಿನ್ ಕುಮಾರ್ ಕಟೀಲ್ ಆಕ್ರೋಶ

**ಹಿಂದೂ ಸಮಾಜವನ್ನು ರಕ್ಷಣೆ ಮಾಡುವಲ್ಲಿ ಕಾಂಗ್ರೆಸ್ ಸರಕಾರ ವಿಫಲವಾಗಿದ್ದು, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಡಳಿತವು ಹಿಂದೂ ವಿರೋಧಿ ಆಡಳಿತವಾಗಿದೆ**

**- ನಳಿನ್ ಕುಮಾರ್ ಕಟೀಲ್**
**ರಾಜ್ಯಾಧ್ಯಕ್ಷರು, ಬಿಜೆಪಿ - ಕರ್ನಾಟಕ**



ವಿಟ್ಲದ ನಿರೀಕ್ಷಣಾ ಮಂದಿರದಲ್ಲಿ ಪತ್ರಕರ್ತರೊಂದಿಗೆ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್ ಕುಮಾರ್ ಕಟೀಲ್‌ರವರು ಮಾತನಾಡಿ, ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ, ಭಯೋತ್ಪಾದನಾ ಚಟುವಟಿಕೆಗಳಿಗೆ ಕಾಂಗ್ರೆಸ್ ಸರ್ಕಾರ ಬೆಂಬಲವಾಗಿ ನಿಂತಿದೆ. ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಬೆಂಬಲವಾಗಿ ನಿಂತಿರುವ ಕಾರಣಕ್ಕಾಗಿ ಗಲಭೆಗಳು ಸೃಷ್ಟಿಯಾಗುತ್ತಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಅತಂಕವಾದಿಗಳು, ನಿರಾತಂಕವಾದಿಗಳು ರಾಜ್ಯದಲ್ಲಿ ಅಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದಾರೆ. ಕೋಲಾರದಲ್ಲಿ ಈದ್ ಮಿಲಾದ್‌ನ ಹೆಸರಿನಲ್ಲಿ ಕತ್ತಿಯ ಪ್ರದರ್ಶನ, ಔರಂಗಜೇಬನ ಕಟೌಟ್‌ನ ಮುಖಾಂತರ, ಟಿಪ್ಪುವಿನ ಕಟೌಟ್‌ನ ಮುಖಾಂತರ, ಕೋಲಾರದಲ್ಲಿ ಆಶಾಂತಿಯನ್ನು ನಿರ್ಮಾಣಮಾಡುವ ಪ್ರಯತ್ನ ನಡೆದಿದೆ. ಶಿವಮೊಗ್ಗದಲ್ಲಿ ಈದ್ ಮಿಲಾದ್‌ನ ಹೆಸರಿನಲ್ಲಿ ಹಿಂದೂ ಮನೆಗಳ ಮೇಲೆ ಕಲ್ಲು ತೂರಾಟ, ಅಂಗಡಿ ಮುಂಗಟ್ಟುಗಳ ಮೇಲೆ ಕಲ್ಲುತೂರಾಟ ನಡೆಸಿರುವ ಗಂಭೀರ

## ರಾಜ್ಯದಲ್ಲಿ ಗಲಭೆ ಸೃಷ್ಟಿಸುವ ಹುನ್ನಾರ

ಮಂಗಳೂರಿನಲ್ಲಿ ನಡೆದ ಕುಕ್ಕರ್ ಬ್ಲಾಸ್ಟ್‌ನಲ್ಲಿ ತೀರ್ಥಹಳ್ಳಿಯ ಭಯೋತ್ಪಾದಕರ ಚಟುವಟಿಕೆಗಳು ಸ್ಪಷ್ಟವಾಗಿ ಗೋಚರಿಸಿದೆ. ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಾಗಲೆಲ್ಲಾ, ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದಾಗಲೆಲ್ಲ ಆತಂಕವಾದಿಗಳಿಗೆ, ಭಯೋತ್ಪಾದಕರಿಗೆ ಯಾಕೆ ಶಕ್ತಿ ಬರುತ್ತದೆ ಎಂದವರು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್ ಕುಮಾರ್ ಕಟೀಲ್ ಅವರು ಪ್ರಶ್ನಿಸಿದರು. ಡಿ.ಜೆ. ಹಳ್ಳಿ ಕೆ.ಜೆ. ಹಳ್ಳಿ ಪ್ರಕರಣಗಳಿರಬಹುದು, ಆಗ ಆರೋಪಿಗಳನ್ನು ನಮ್ಮ ಸರ್ಕಾರ ಬಂಧನ ಮಾಡಿತ್ತು. ಅವರನ್ನು ಬಿಡುಗಡೆ ಮಾಡುವ ಕೆಲಸವನ್ನು ಕಾಂಗ್ರೆಸ್ ಸರಕಾರ ಮಾಡುತ್ತಿದೆ. ಕೋಲಾರದಲ್ಲಿ ನಡೆದ ಘಟನೆಯ ಬಗ್ಗೆ ಕಠೋರ ಕ್ರಮ ಕೈಗೊಳ್ಳದೆ ಇರುವುದರಿಂದ ಆತಂಕವಾದಿಗಳು ನಿರಾತಂಕವಾಗಿ ಈ ರಾಜ್ಯದಲ್ಲಿ ಮೆರೆಯುತ್ತಿದ್ದಾರೆ ಎಂದು ಹೇಳಿದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿವಸ ಅವರ ವಿಜಯೋತ್ಸವದ ಹೆಸರಿನಲ್ಲಿ ಮೆರವಣಿಗೆ ನಡೆದಂತಹ ಸಂದರ್ಭದಲ್ಲಿ ಪಾಕಿಸ್ತಾನದ ಪರ ಘೋಷಣೆಗಳನ್ನು ಹಾಕಲಾಗಿತ್ತು, ಪಾಕಿಸ್ತಾನದ ಧ್ವಜವನ್ನು ಹಿಡಿದು ಪ್ರದರ್ಶಿಸುವ ಕೆಲಸವಾಗಿದೆ ಎಂದು ಹೇಳಿದರು.

ಪ್ರಕರಣಗಳು ನಡೆದಿರುವುದು ಖಂಡನೀಯ ಎಂದು ಹೇಳಿದರು.

ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಪ್ರತಿ ಬಾರಿ ರಾಜ್ಯದಲ್ಲಿ ಗಲಭೆ ಸೃಷ್ಟಿ ಮಾಡುವಂತಹ, ಗಲಭೆ ಕೋರರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಾ ಬಂದಿದೆ ಎಂದು ಹೇಳಿದರು. ಶ್ರೀ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೊದಲ ಅವಧಿಯಲ್ಲಿ ಟಿಪ್ಪು ಸುಲ್ತಾನ್ ಮೆರೆಯುವಂತಾಯಿತು. ಈಗ ಎರಡನೇ ಅವಧಿಯಲ್ಲಿ ಔರಂಗಜೇಬನನ್ನು ಪ್ರದರ್ಶನ ಮಾಡುವ ಕೆಲಸವಾಗಿದೆ. ಅವರ ಸಂಕೇತ ಟಿಪ್ಪು ಅಥವಾ ಔರಂಗಜೇಬ ಅಲ್ಲ, ಬದಲಿಗೆ ಅದರ ಹಿಂದೆ ಭಯೋತ್ಪಾದನಾ ಚಟುವಟಿಕೆ ನಡೆಯುತ್ತಿದೆ. ಇವತ್ತು ಕಾಂಗ್ರೆಸ್ ಆಡಳಿತದಲ್ಲಿ ತೀರ್ಥಹಳ್ಳಿಯಲ್ಲಿ ಭಯೋತ್ಪಾದನೆಯ ಪ್ರದರ್ಶನ ಪ್ರಾರಂಭವಾಗುತ್ತಿದೆ. ದಿ. ಹರ್ಷ, ಪ್ರವೀಣ್ ನೆಟ್ಟಾರು ಹತ್ಯೆಯ ಬಳಿಕ ಎನ್‌ಐ.ಎ. ತನಿಖೆಗಳು ತೀವ್ರಗೊಳಿಸಿದ ಮೇಲೆ ಶಿವಮೊಗ್ಗದ ತೀರ್ಥಹಳ್ಳಿ ಭಯೋತ್ಪಾದನಾ ಕೇಂದ್ರವಾಗಿದೆ ಎನ್ನುವುದನ್ನು ಎನ್.ಐ.ಎ. ತಿಳಿಸಿದೆ ಎಂದು ಹೇಳಿದರು.

ಪುತ್ತೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಶ್ರೀ ಸಂಜೀವ ಮಠಂದೂರು, ಪ್ರಮುಖರಾದ ಶ್ರೀ ಮಾಧವ ಮಾನೆ, ಶ್ರೀ ಪ್ರವೀಣ್ ಶೆಟ್ಟಿ ಕಾರ್ಕಳ, ಶ್ರೀ ಹರಿಪ್ರಸಾದ್ ಯಾದವ್, ಶ್ರೀ ರಾಮ್‌ದಾಸ್ ಶೆಣೈ, ಶ್ರೀ ಮೋಹನದಾಸ್ ಉಕ್ಕುಡ, ಶ್ರೀ ವೀರಪ್ಪ ಗೌಡ, ಶ್ರೀ ರಾಯರಬೆಟ್ಟು, ವಿಟ್ಲ ಪಟ್ಟಣ ಪಂಚಾಯತ್ ಸದಸ್ಯರಾದ ಶ್ರೀ ಅರುಣ್ ವಿಟ್ಲ, ಶ್ರೀ ಹರೀಶ್ ಸಿ.ಹೆಚ್, ಶ್ರೀ ಜಯಂತ್ ಸಿ.ಹೆಚ್., ವಿಟ್ಲ ಪಡ್ನೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಜಯಂತ ಪಿ. ಮೊದಲಾದವರು ಉಪಸ್ಥಿತರಿದ್ದರು.

## ಶಿವಮೊಗ್ಗದಲ್ಲಿ ಹಿಂದೂಗಳನ್ನೇ ಟಾರ್ಗೆಟ್ ಮಾಡಿ ದಾಳಿ!





ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯ ರಾಗಿಗುಡ್ಡದಲ್ಲಿ ಈದ್ ಮಿಲಾದ್ ಮೆರವಣಿಗೆ ವೇಳೆ ಕಲ್ಲು ತೂರಾಟ ಘಟನೆಗೆ ಸಂಬಂಧಿಸಿದಂತೆ ಬಿಜೆಪಿ ಸತ್ಯ ಶೋಧನಾ ಸಮಿತಿಯು ಅಲ್ಲಿನ ಸ್ಥಳೀಯ ನಿವಾಸಿಗಳನ್ನು ಭೇಟಿ ಮಾಡಿತು. ಆ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳು '**ನಾವಿಲ್ಲಿ ಬದುಕುವುದಕ್ಕೇ ಆಗುತ್ತಿಲ್ಲ, ಭಯದ ವಾತಾವರಣವಿದ್ದು ನಮ್ಮ ಮೇಲೆ ಯಾವಾಗ, ಯಾರು ದಾಳಿ ಮಾಡುತ್ತಾರೋ? ಎಂಬ ಆತಂಕ ಕಾಡುತ್ತಿದೆ. ನಾವು ಇದುವರೆಗೆ ಯಾರಿಗೂ ತೊಂದರೆ ಕೊಟ್ಟಿಲ್ಲ. ಆದರೂ ನಮ್ಮನ್ನೇ (ಹಿಂದು) ಟಾರ್ಗೆಟ್ ಮಾಡಿಕೊಂಡು ದಾಳಿ ಮಾಡುತ್ತಿದ್ದಾರೆ. ದಯವಿಟ್ಟು ನಮಗೆ ರಕ್ಷಣೆ ಕೊಡಿ...**' ಎಂದು ತಮ್ಮ ಅಳಲು ತೋಡಿಕೊಂಡರು.

ಹಿಂಸಾಚರದ ಸಂದರ್ಭದಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಮನೆಗಳ ಮೇಲೆ ಹಾಕಿದ್ದಾರೆ, ವಾಹನಗಳನ್ನು ಜಖಂಗೊಳಿಸಿ ಹಿಂದುಗಳ ಮನೆಗಳ ಮೇಲೆಯೇ ದಾಳಿ ಮಾಡಿದ್ದಾರೆ. ಮಕ್ಕಳು, ವೃದ್ಧರು, ಬಾಣಂತಿಯರು ಇದ್ದರೂ ಮನೆಗಳ ಮೇಲೆ ಕಲ್ಲು ತೂರಿದ್ದಾರೆ, ಪೊಲೀಸರು ಇದ್ದ ಕಾರಣದಿಂದಾಗಿ ಸ್ಥಳೀಯರ ಜೀವ ಉಳಿದಿದೆ. ಆ ಘಟನೆ ನೆನಪಿಸಿಕೊಂಡರೆ ಈಗಲೂ ರಾತ್ರಿ ನಿದ್ರೆ ಬರುತ್ತಿಲ್ಲ ಎಂದು ಸ್ಥಳೀಯರು ಸಮಿತಿ ಮುಂದೆ ಹೇಳಿಕೊಂಡಿದ್ದಾರೆ.

ರಾಗಿಗುಡ್ಡದಲ್ಲಿ ಹಿಂದು, ಮುಸ್ಲಿಮರು ಒಟ್ಟಿಗೆ ಎಲ್ಲ ಹಬ್ಬಗಳನ್ನೂ ಒಗ್ಗಟ್ಟಾಗಿ ಆಚರಿಸುತ್ತಿದ್ದೆವು. ಆದರೆ ಯಾರೋ ಕಿಡಿಕೇಡಿಗಳ ಕೃತ್ಯಕ್ಕೆ ಇಡೀ ಶಿವಮೊಗ್ಗಕ್ಕೆ ಕೆಟ್ಟ ಹೆಸರು ಬರುತ್ತಿದೆ. ಸರ್ಕಾರ ಅವರಿಗೆ ತಕ್ಕ ಶಿಕ್ಷೆ ವಿಧಿಸಬೇಕು, ಇಲ್ಲವಾದರೆ ಇಂತಹ ಘಟನೆಗಳು ಪುನರಾವರ್ತನೆ ಆಗುತ್ತವೆ ಎಂದು ಸ್ಥಳೀಯ ನಿವಾಸಿ ಶ್ರೀಮತಿ ಅನಿತಾ ಅವರು ಬೇಸರ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾಜಿ ಉಪ ಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್. ಈಶ್ವರಪ್ಪ, ಶ್ರೀ ಸಿ.ಎನ್. ಅಶ್ವತ್ಥನಾರಾಯಣ, ಮಾಜಿ ಗೃಹ ಸಚಿವ ಶ್ರೀ ಆರಗ ಜ್ಞಾನೇಂದ್ರ, ಸಂಸದರಾದ ಶ್ರೀ ಬಿ.ವೈ.ರಾಘವೇಂದ್ರ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್, ಶಾಸಕರಾದ ಶ್ರೀ ಎಸ್.ಎನ್. ಚನ್ನಬಸಪ್ಪ, ವಿಧಾನಪರಿಷತ್ ಸದಸ್ಯರಾದ ಶ್ರೀ ರುದ್ರೇಗೌಡ, ಶ್ರೀಮತಿ ಭಾರತಿ ಶೆಟ್ಟಿ ಹಾಗೂ ಶ್ರೀ ಡಿ.ಎಸ್. ಅರುಣ್ ಉಪಸ್ಥಿತರಿದ್ದರು.

## ಶಿಕ್ಷಕ ದಂಪತಿ ಕಣ್ಣೀರು



ಶಿವಮೊಗ್ಗದ ರಾಗಿ ಗುಡ್ಡದಲ್ಲಿ ಈದ್ ಮಿಲಾದ್ ಮೆರವಣಿಗೆಯ ಸಂದರ್ಭದಲ್ಲಿ ಪಾಠ ಕಲಿಸಿದ ಶಿಕ್ಷಕಿಯ ಮನೆ ಮೇಲೆ ಕಿಡಿಗೇಡಿಗಳು ಕಲ್ಲು ಹೊಡೆದಿದ್ದಾರೆ. ಈ ಬಗ್ಗೆ ಆಕೆಯ ಪತಿ ಸಮಿತಿ ಎದುರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಶಿಕ್ಷಕಿಯಾದ ನನ್ನ ಪತ್ನಿ ಉರ್ದು ಭಾಷೆಯನ್ನು ಕಲಿತು ಕನ್ನಡದ ಕಲಿಸುವುದರ ಜೊತೆಗೆ ಇಲ್ಲಿನ ಮುಸ್ಲಿಂ ಮಕ್ಕಳಿಗೆ ಉರ್ದು ಭಾಷೆಯನ್ನು ಕಲಿಸಿದ್ದಾಳೆ. ಗುರು ಎಂಬ ಆ ಗೌರವವೂ ಇಲ್ಲದೆ ಕಿಡಿಗೇಡಿಗಳು ಮಾಡಿರುವ ಈ ಘಟನೆಯಿಂದ ನನ್ನ ಪತ್ನಿ ಬಹಳ ನೊಂದುಕೊಂಡಿದ್ದಾಳೆ ಎಂದು ಹೇಳಿದರು. ಇದೇ ಕೊನೆ ಬೀದಿಯಲ್ಲಿ ಇರುವ ಮುಸ್ಲಿಮರ ಕಾರುಗಳು ಮನೆಗಳು ಮಾತ್ರ ಸುರಕ್ಷಿತವಾಗಿವೆ ಆದರೆ ನಮ್ಮ ಮನೆ ಹಾಗೂ ಮನೆಯ ಮುಂದೆ ನಿಲ್ಲಿಸಿದ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ ಎಂದರೆ ಇದರ ಅರ್ಥ ಏನೆಂಬುದು ಸ್ಪಷ್ಟವಾಗತ್ತಿದೆ ಎಂದು ಶಿಕ್ಷಕ ದಂಪತಿ ಕಣ್ಣೀರಿಟ್ಟರು.



ರಾಜ್ಯ ಕಾಂಗ್ರೆಸ್ ಸರ್ಕಾರವು ಇಂತಹ ಹಲವಾರು ಕೇಸ್‌ಗಳನ್ನು ಮುಚ್ಚಿ ಹಾಕುವ ಷಡ್ಯಂತ್ರ ಮಾಡುತ್ತಿದೆ. ಏನೂ ನಡೆದೇ ಇಲ್ಲ ಎಂಬಂತೆ ಬಿಂಬಿಸುತ್ತಿದೆ. ಇಲ್ಲಿಗೆ ಬಂದು ನೋಡಿದರೆ ಏನಾಗಿದೆ ಎಂದು ಗೊತ್ತಾಗುತ್ತದೆ. ನಾವು ರಾಗಿಗುಡ್ಡದ ಜನತೆಗೆ ನ್ಯಾಯ ಕೊಡಿಸುವ ಕೆಲಸ ಮಾಡುತ್ತೇವೆ.

**- ಡಾ. ಸಿ.ಎನ್. ಅಶ್ವತ್ಥನಾರಾಯಣ,**
ಮಾಜಿ ಉಪ ಮುಖ್ಯಮಂತ್ರಿ

## ಸಾಂತ್ವನ, ಕೀಳು ರಾಜಕಾರಣ...



ಶಿವಮೊಗ್ಗದ ಈ ಗಲಭೆಗಳ ಮಧ್ಯೆ ಬಹಳ ತಾಳ್ಮೆಯಿಂದ ವರ್ತಿಸಿದ್ದು ಹಾಗೂ ಜನರಲ್ಲಿ ಆತ್ಮವಿಶ್ವಾಸ ತುಂಬುವ ಕಾರ್ಯ ಮಾಡಿದ್ದು ಬಿಜೆಪಿ ಮತ್ತು ಇನ್ನಿತರ ಹಿಂದೂ ಪರ ಸಂಘಟನೆಗಳೇ. ಸ್ವತಃ ರಾಜ್ಯಾಧ್ಯಕ್ಷ ಶ್ರೀ ನಳೀನ್‌ಕುಮಾರ್‌ರವರೇ ದಾಳಿಗೊಳಗಾದ ಸಂತ್ರಸ್ಥ ಕುಟುಂಬಗಳನ್ನು ಭೇಟಿ ಮಾಡಿ ಸಾಂತ್ವನದ ಮಾತುಗಳನ್ನಾಡಿದರು. ಅದೇ ರೀತಿ ಸ್ಥಳೀಯ ಶಾಸಕ ಶ್ರೀ ಚನ್ನಬಸಪ್ಪನವರ ನೇತೃತ್ವದ ಬಿಜೆಪಿಯ ತಂಡ ಮನೆ ಮನೆಗಳನ್ನು ಸಂಪರ್ಕಿಸಿ ಅವರಲ್ಲಿ ಆತ್ಮ ವಿಶ್ವಾಸವನ್ನು ತುಂಬುವ ಕೆಲಸವನ್ನು ಮಾಡುವುದರ ಜೊತೆಗೆ, ಪರಿಸ್ಥಿತಿ ಕೈಮೀರದಂತೆ ತಾಳ್ಮೆಯಿಂದ ಹಿಂದೂ ಸಮಾಜವನ್ನು ಹಿಡಿದಿಡುವಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಿತು.

ಇವೆಲ್ಲವುಗಳ ಮಧ್ಯೆ ಜಿಲ್ಲಾ ಮಂತ್ರಿ ಶ್ರೀ ಮಧುಬಂಗಾರಪ್ಪನವರು ತಪ್ಪಿತಸ್ಥರನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ಖಡ್ಗಗಳನ್ನು ಹಿಡಿದಿದ್ದು ಮತ್ತು ಮತಾಂಧ ಟಿಪ್ಪೂ, ಔರಂಗಜೇಬನ ಕಟ್‌ಔಟ್‌ಗಳನ್ನು ಹಾಕಿದ್ದು ಮಹಾಪರಾಧವೇ ಅಲ್ಲವೆಂಬಂತೆ ನೀಡಿದ ಹೇಳಿಕೆಗಳು ಹಾಗೂ ಬೆಂಗಳೂರಿನಲ್ಲಿ ಕುಳಿತ ಇನ್ನೂ ಕೆಲವು ಕಾಂಗ್ರೆಸ್ ನಾಯಕರು ಆಡಿದ ಮಾತುಗಳು ಅವರಲ್ಲಿನ ಒಲೈಕೆ ರಾಜಕಾರಣದ ಮನಸ್ಥಿತಿಯ ಅನಾವರಣವೆಂದು ಸ್ಪಷ್ಟವಾಗಿ ಹೇಳಬಹುದು. **ದೇಶದೊಳಗೆ ಇದ್ದು ದೂರದ ಪಾಲೆಸ್ಟೈನ್ ಉಗ್ರಗಾಮಿಗಳನ್ನೇ ಬೆಂಬಲಿಸುವ ಮಾತುಗಳನ್ನುಆಡುವ ಕಾಂಗ್ರೆಸ್ ನಾಯಕರು ಶಿವಮೊಗ್ಗದಲ್ಲಿ, ಕೋಲಾರದಲ್ಲಿ, ಮೈಸೂರಿನಲ್ಲಿ ಸಮಾಜ ಒಡೆಯುವ, ಬೆಂಕಿ ಹಚ್ಚುವ ದೇಶ ವಿರೋಧಿ, ಧರ್ಮ ವಿರೋಧಿ ಮಾನಸಿಕತೆಯವರ ಬೆಂಬಲಕ್ಕೆ ನಿಲ್ಲುವುದರಲ್ಲಿ ವಿಶೇಷವೇನಿಲ್ಲ.**

## ಚರ್ಚೆಗೊಂದು ಸಾಲು...

**ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಹೆಚ್ಚಾದ ಮತಾಂಧ ಶಕ್ತಿಗಳ ವೈಭವೀಕರಣ**





# ಕೆನಡಾ

## ಭಯೋತ್ಪಾದಕರ ಸುರಕ್ಷಿತ ತಾಣ




ಪ್ರತಾಪ್ ಸಿಂಗ್ ಬಿಳಿಗೆರೆ
ಬಿಜೆಪಿ ಕಾರ್ಯಕರ್ತರು


**ಭಾರತ ಹೊರತು ಪಡಿಸಿದರೆ ಸಿಖ್ಖರು ಹೆಚ್ಚು ವಾಸಿಸುತ್ತಿರುವ ದೇಶ ಕೆನಡಾ. ಇಲ್ಲಿಯ ಜನಸಂಖ್ಯೆಯ ಸುಮಾರು 2.1% ಪ್ರತಿಶತ ಅಂದರೆ 8 ಲಕ್ಷ ಸಿಖ್ ಸಮುದಾಯವು ಕೆನಡಾದಲ್ಲಿ ವಾಸಿಸುತ್ತಿದೆ. ಅದಕ್ಕೆ ತನ್ನದೇ ಆದ ಇತಿಹಾಸವೂ ಇದೆ. ಕೆನಡಾದ ಪ್ರಮುಖ ಸರ್ಕಾರಿ ಹುದ್ದೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಿಖ್ ಸಮುದಾಯದವರಿದ್ದಾರೆ. 338 ಜನ ಸಂಸದರ ಕೆನಡಾ ಸಂಸತ್‌ನಲ್ಲಿ ಜಗಮಿತ್ ಸಿಂಗ್ ನೇತೃತ್ವದ ನ್ಯೂ ಡೆಮಾಕ್ರಟಿಕ್ ಪಾರ್ಟಿಯಿಂದ 18 ಮಂದಿ ಸಿಖ್ಖರು ಸಂಸದರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ಜಸ್ಟೀನ್ ಟ್ರುಡೊ ಸರ್ಕಾರಕ್ಕೆ ಬಹುಮತಕ್ಕೆ ಅಗತ್ಯ ಸಂಖ್ಯೆಯ ತುಸು ಕೊರತೆ ಇರುವ ಕಾರಣ ಜಗಮೀತ್ ಸಿಂಗ್ ನೇತೃತ್ವದ ಎನ್.ಡಿ.ಪಿ. ಬೆಂಬಲದೊಂದಿಗೆ ಟ್ರುಡೋ ಸರ್ಕಾರ ನಡೆಯುತ್ತಿದೆ. ಸರ್ಕಾರದಲ್ಲಿ ಎನ್.ಡಿ.ಪಿ. ಪಕ್ಷದ 4 ಮಂದಿ ಸಿಖ್ಖರು ಸಚಿವರಾಗಿದ್ದಾರೆ. ಹೀಗೆ ಸಿಖ್ಖರು ಕಡಿಮೆ ಸಂಖ್ಯೆಯಲ್ಲಿದ್ದರೂ ಸಂಘಟಿತರಾಗಿರುವ ಕಾರಣ ಕೆನಡಾದಲ್ಲಿ ತನ್ನದೇ ಆದ ಪ್ರಭಾವವನ್ನು ಹೊಂದಿದ್ದಾರೆ. ಇಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ನಂತರ 3ನೇ ಅಧಿಕೃತ ಭಾಷೆ ಪಂಜಾಬಿಯಾಗಿದೆ.**





**ಭಾರತ ಹೊರತು ಪಡಿಸಿ ಸಿಖ್ಖರು ಹೆಚ್ಚು ವಾಸಿಸುತ್ತಿರುವ ದೇಶ ಕೆನಡಾ.**

**ಭಾರತದ ಜನಸಂಖ್ಯೆಯ ಸುಮಾರು 2.1% ಪ್ರತಿಶತ ಅಂದರೆ 8 ಲಕ್ಷ**

**ಕೆನಡಾದ ಪ್ರಮುಖ ಸರ್ಕಾರಿ ಹುದ್ದೆಗಳಲ್ಲಿ ದೊಡ್ಡ ಪ್ರಮಾಣದಲ್ಲಿರುವ ಸಿಖ್ ಸಮುದಾಯ**

**338 ಜನ ಸಂಸದರ ಕೆನಡಾ ಸಂಸತ್‌ನಲ್ಲಿ ಜಗಮಿತ್ ಸಿಂಗ್ ನೇತೃತ್ವದ ನ್ಯೂ ಡೆಮಾಕ್ರಟಿಕ್ ಪಾರ್ಟಿಯಿಂದ 18 ಮಂದಿ ಸಿಖ್ಖರು ಸಂಸದರಾಗಿ ಆಯ್ಕೆ**

**ಜಗಮೀತ್ ಸಿಂಗ್ ನೇತೃತ್ವದ ಎನ್.ಡಿ.ಪಿ. ಬೆಂಬಲದೊಂದಿಗೆ ಟ್ರುಡೋ ಸರ್ಕಾರ ಜಸ್ಟೀನ್ ಟ್ರುಡೊ ಸರ್ಕಾರಕ್ಕೆ ಬಹುಮತ**

**ಕೆನಡಾ ಸರ್ಕಾರದಲ್ಲಿ ಎನ್.ಡಿ.ಪಿ. ಪಕ್ಷದ 4 ಮಂದಿ ಸಿಖ್ಖರು ಸಚಿವರು**

**ಕೆನಡಾದಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ನಂತರ 3ನೇ ಅಧಿಕೃತ ಭಾಷೆ ಪಂಜಾಬಿ**

ವರ್ತಮಾನದಲ್ಲಿ ಕೆನಡಾ ಭಯೋತ್ಪಾದಕರಿಗೆ ಅತ್ಯಂತ ಸುರಕ್ಷಿತ ತಾಣವಾಗಿದೆ. ಹೀಗೆಂದು ಭಾರತವಾಗಲೀ ಭಾರತದ ಮಾಧ್ಯಮಗಳಾಗಲೀ ಆರೋಪಿಸುತ್ತಿಲ್ಲ. ಜಾಗತಿಕ ಮಟ್ಟದಲ್ಲಿ ಬಹುತೇಕ ರಾಷ್ಟ್ರಗಳು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿವೆ. ಇತ್ತೀಚೆಗೆ ಅನೇಕ ರಾಷ್ಟ್ರಗಳು ಕೆನಡಾದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು ಕೆನಡಾದ ಮೇಲಿನ ಆರೋಪಕ್ಕೆ ಪುಷ್ಟಿ ನೀಡುತ್ತದೆ. ಕೆನಡಾ ಸರ್ಕಾರ ಮಾನವ ಹಕ್ಕುಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ನೆಪದಲ್ಲಿ ಭಯೋತ್ಪಾದಕರು ಮತ್ತು ಹಂತಕರನ್ನು ರಕ್ಷಿಸುತ್ತಿದೆ ಎಂದು ಬಾಂಗ್ಲಾದೇಶದ ವಿದೇಶಾಂಗ ಸಚಿವ ಎ.ಕೆ. ಅಬ್ದುಲ್ ಮೆಮೂನ್ ಹೇಳಿದ್ದಾರೆ. ಕೆನಡಾ ಕೊಲೆಗಾರರ ಕೇಂದ್ರವಾಗಿದೆ, ಅಪರಾಧಿಗಳಿಗೆ ರಕ್ಷಣೆಯನ್ನು ನೀಡುತ್ತಿದೆ, ಜಗತ್ತಿನ ಕೊಲೆಗಡುಕರು ಕೆನಡಾದಲ್ಲಿ ನೆಲೆಸಿ ಐಶಾರಾಮಿ ಜೀವನ ನಡೆಸುತ್ತಿದ್ದಾರೆ. ಬಾಂಗ್ಲಾದೇಶದ ಸಂಸ್ಥಾಪಕ ಶೇಖ್ ಮೆಜಬೂರ್ ರೆಹಮಾನರ ಹಂತಕರಲ್ಲೊಬ್ಬ ನೂರಾ ಚೌಧರಿ ಕೆನಡಾದಲ್ಲಿ ವಾಸವಾಗಿ ಐಶಾರಾಮಿ ಜೀವನ ನಡೆಸುತ್ತಿದ್ದು, ಆ ಅಪರಾಧಿಯನ್ನು ತನ್ನ ವಶಕ್ಕೆ ನೀಡುವಂತೆ ಬಾಂಗ್ಲಾದೇಶ ಎಷ್ಟು ಸಲ ಬೇಡಿಕೆ ಸಲ್ಲಿಸಿದರೂ ಕೆನಡಾ ಏನಾದರೊಂದು ಕಾರಣ ನೀಡಿ ಮುಂದೂಡುತ್ತಲೇ ಬಂದಿದೆ. ಒಟ್ಟಾರೆ ಕೆನಡಾ ಮಾನವ ಹಕ್ಕುಗಳ ದುರಪಯೋಗ ಮಾಡುತ್ತಿದೆ ಎಂದು ನೇರವಾಗಿ ಆಪಾದಿಸಿದ್ದಾರೆ. ಅದೇ ರೀತಿ ಕೆನಡಾ ಭಯೋತ್ಪಾದಕರಿಗೆ, ತೀವ್ರಗಾಮಿಗಳಿಗೆ ಮತ್ತು ಸಂಘಟಿತ ಅಪರಾಧಕ್ಕೆ ಸುರಕ್ಷಿತ ಸ್ವರ್ಗವಾಗಿದೆ ಎಂದು ಇತ್ತೀಚೆಗೆ ಶ್ರೀಲಂಕಾದ ವಿದೇಶಾಂಗ ಸಚಿವ ಅಲಿ ಸಾಬ್ರಿ ಹೇಳಿದ್ದಾರೆ.



ಕೆನಡಾದಲ್ಲಿನ ಬಲೂಚಿಸ್ಥಾನದ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ್ತಿ ಕರಿಮಾ ಬಲೂಚ್ 22 ಡಿಸೆಂಬರ್ 2020 ರಂದು ಕೆನಡಾದ ಟೊರಾಂಟೊದಲ್ಲಿ ಹತ್ಯೆಯಾದರು. ಇದರಲ್ಲಿ ಐ.ಎಸ್.ಐ ಕೈವಾಡರುವುದು ಜಗಜ್ಜಾಹೀರಾದರೂ ಜಸ್ಟಿನ್ ಟ್ರುಡೋ ನೇತೃತ್ವದ ಕೆನಡಾ ಸರ್ಕಾರ ಇದನ್ನು ಸಾಮಾನ್ಯ ಹತ್ಯೆ ಪ್ರಕರಣವೆಂದು ಪರಿಗಣಿಸಿತು. ಈಗ ಕೆನಡಾದಲ್ಲಿರುವ ಬಲೂಚಿ ಹ್ಯೂಮನ್ ರೈಟ್ ಕೌನ್ಸಿಲ್‌ನವರು ಸರ್ಕಾರ ಈ ದ್ವಿಮುಖ ನೀತಿಯನ್ನು ಪ್ರಶ್ನಿಸುತ್ತಿದ್ದಾರೆ.

ಭಾರತ ಮೂಲದ ಕುಖ್ಯಾತ ಖಲೀಸ್ಥಾನಿ ಭಯೋತ್ಪಾದಕ ಹರ್ದಿಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಯಾವುದೇ ಸಾಕ್ಷ್ಯಾಧಾರಗಳಿಲ್ಲದಿದ್ದರೂ, ಇವನ ಹತ್ಯೆಯಲ್ಲಿ ಭಾರತದ ಗುಪ್ತಚರ ಏಜೆಂಟ್‌ರ ಕೈವಾಡವಿರುವುದೆಂದು ಟ್ರುಡೋ ಸಂಸತ್‌ನಲ್ಲಿ ಹೇಳಿಕೆ ನೀಡಿ ಅಂತರಾಷ್ಟ್ರೀಯ ಗಮನ ಸೆಳೆದಿದ್ದರು. ಆದರೆ ಕರಿಮಾ ಬಲೂಚ್ ಹತ್ಯೆ ಪ್ರಕರಣವನ್ನು ಅಲ್ಲಿಯ ಸರ್ಕಾರ ಅದೊಂದು ಸಾಮಾನ್ಯ ಕೊಲೆ ಪ್ರಕರಣವೆಂದು ಪರಿಗಣಿಸಿತ್ತು. ಅದಕ್ಕೆ ನಿಜವಾದ ಕಾರಣ ಬಲೂಚಿಗಳು ಕೆನಡಾದಲ್ಲಿ ತುಂಬಾ ಕಡಿಮೆ ಸಂಖ್ಯೆಯಲ್ಲಿದ್ದಾರೆ ಮತ್ತು ಅವರದೇ ಆದ ಯಾವುದೇ ರಾಜಕೀಯ ಶಕ್ತಿಯಿಲ್ಲವೆಂಬುದು.

## ಭಾರತ ಬಿಟ್ಟರೆ ಸಿಖ್ಖರು ಇಲ್ಲಿ ಅತಿ ಹೆಚ್ಚು

ಭಾರತ ಹೊರತು ಪಡಿಸಿದರೆ ಸಿಖ್ಖರು ಹೆಚ್ಚು ವಾಸಿಸುತ್ತಿರುವ ದೇಶ ಕೆನಡಾ. ಇಲ್ಲಿಯ ಜನಸಂಖ್ಯೆಯ ಸುಮಾರು 2.1% ಪ್ರತಿಶತ ಅಂದರೆ 8 ಲಕ್ಷ ಸಿಖ್ ಸಮುದಾಯವು ಕೆನಡಾದಲ್ಲಿ ವಾಸಿಸುತ್ತಿದೆ. ಅದಕ್ಕೆ ತನ್ನದೇ ಆದ ಇತಿಹಾಸವೂ ಇದೆ. ಕೆನಡಾದ ಪ್ರಮುಖ ಸರ್ಕಾರಿ ಹುದ್ದೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಿಖ್ ಸಮುದಾಯದವರಿದ್ದಾರೆ. 338 ಜನ ಸಂಸದರ ಕೆನಡಾ ಸಂಸತ್‌ನಲ್ಲಿ ಜಗಮಿತ್ ಸಿಂಗ್ ನೇತೃತ್ವದ ನ್ಯೂ ಡೆಮಾಕ್ರಟಿಕ್ ಪಾರ್ಟಿಯಿಂದ 18 ಮಂದಿ ಸಿಖ್ಖರು ಸಂಸದರಾಗಿ ಆಯ್ಕೆಯಾಗಿದ್ದಾರೆ.

ಪ್ರಸ್ತುತ ಜಸ್ಟೀನ್ ಟ್ರುಡೊ ಸರ್ಕಾರಕ್ಕೆ ಬಹುಮತಕ್ಕೆ ಅಗತ್ಯ ಸಂಖ್ಯೆಯ ತುಸು ಕೊರತೆ ಇರುವ ಕಾರಣ ಜಗಮೀತ್ ಸಿಂಗ್ ನೇತೃತ್ವದ ಎನ್.ಡಿ.ಪಿ. ಬೆಂಬಲದೊಂದಿಗೆ ಟ್ರುಡೋ ಸರ್ಕಾರ ನಡೆಯುತ್ತಿದೆ. ಸರ್ಕಾರದಲ್ಲಿ ಎನ್.ಡಿ.ಪಿ. ಪಕ್ಷದ 4 ಮಂದಿ ಸಿಖ್ಖರು ಸಚಿವರಾಗಿದ್ದಾರೆ. ಹೀಗೆ ಸಿಖ್ಖರು ಕಡಿಮೆ ಸಂಖ್ಯೆಯಲ್ಲಿದ್ದರೂ ಸಂಘಟಿತರಾಗಿರುವ ಕಾರಣ ಕೆನಡಾದಲ್ಲಿ ತನ್ನದೇ ಆದ ಪ್ರಭಾವವನ್ನು ಹೊಂದಿದ್ದಾರೆ. ಇಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ನಂತರ 3ನೇ ಅಧಿಕೃತ ಭಾಷೆ ಪಂಜಾಬಿಯಾಗಿದೆ.

ಭಾರತದಲ್ಲಿ ಸುಮಾರು 2ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಸಿಖ್ ಸಮುದಾಯದ ಬಹುಪಾಲು ಭಾರತದ ಸಮರ್ಥಕರಾಗಿದ್ದು ಇಲ್ಲಿ ಖಲಿಸ್ಥಾನ್ ಹೆಸರಿನ ಪ್ರತ್ಯೇಕ ರಾಜ್ಯದ ಸಮರ್ಥಕರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅದೇ ರೀತಿ ಕೆನಡಾದಲ್ಲಿರುವ ಸಿಖ್ಖರೆಲ್ಲರೂ ಸಹ ಖಲೀಸ್ಥಾನ್ ಸಮರ್ಥಕರಲ್ಲ, ಆದರೆ ಇಲ್ಲಿ ಖಲಿಸ್ಥಾನ್ ಪ್ರತ್ಯೇಕತವಾದವನ್ನು ಬೆಂಬಲಿಸುವ ಸಿಖ್ಖರ ಒಂದು ದೊಡ್ಡ ಗುಂಪು ಇರುವುದು ಮಾತ್ರ ನಿಜವಾದ ಸಂಗತಿ. ಅಲ್ಲಿಯ ಸಿಖ್ ನಾಯಕ ಜಗಮಿತ್ ಸಿಂಗ್ ಅವರ ಪಕ್ಷ ಎನ್.ಡಿ.ಪಿ ಖಲಿಸ್ಥಾನಿಗಳ ಪರವಾಗಿದೆ.

## ಇಂದಿರಾ ಹತ್ಯೆಯ ವೈಭವೀಕರಣ






1984ರಲ್ಲಿ ಪಂಜಾಬ್‌ನ ಅಮೃತಸರದಲ್ಲಿ ನಡೆದ ಆಪರೇಷನ್ ಬ್ಲೂಸ್ಟಾರ್ ಕಾರ್ಯಾಚರಣೆಯ 39ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಳೆದ ಜೂನ್ 4 ರಂದು ಕೆನಡಾದ ಬ್ರೌನ್‌ಟನ್ ನಗರದಲ್ಲಿ ಖಲೀಸ್ಥಾನಿ ಬೆಂಬಲಿಗರು ಭಾರತದ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಯನ್ನು ಬಿಂಬಿಸುವ ಮತ್ತು ಅವರ ಹತ್ಯೆಯನ್ನು ವೈಭವೀಕರಿಸುವ ಅವರ ಸ್ತಬ್ದ ಚಿತ್ರವನ್ನು ಭಾರತ ವಿರೋಧಿ ಖಲಿಸ್ಥಾನ್ ಪರ ಘೋಷಣೆಗಳೊಂದಿಗೆ 5 ಕಿ.ಮೀ. ವರೆಗೆ ಮೆರವಣಿಗೆ ನಡೆಸಿದ್ದರು. ಖಲಿಸ್ಥಾನಿಗಳ ಮುಖವಾಣಿಯಂತಿರುವ ಅಲ್ಲಿಯ ಟೊರಾಂಟೋ ಮೂಲದ ಪಂಜಾಬಿ ವಾರಪತ್ರಿಕೆ 'ಸಾಂಜ್ ಸವೇರಾ' ತನ್ನ ಮುಖಪುಟದಲ್ಲಿ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಯ ಚಿತ್ರವನ್ನು ಮುದ್ರಿಸಿ ಪಾಪಿಯನ್ನು ಕೊಂದ ಹುತಾತ್ಮರನ್ನು ಗೌರವಿಸಿ ಎಂದು ಶೀರ್ಷಿಕೆಯನ್ನು ಬರೆದಿತ್ತು. ಕೆನಡಾದಲ್ಲಿ ಇದೊಂದು ಪ್ರತಿಷ್ಠಿತ ಪತ್ರಿಕೆಯಾಗಿದ್ದು ಕೆನಡಾ ಸರ್ಕಾರ ಇದಕ್ಕೆ ಜಾಹೀರಾತುಗಳನ್ನು ಸಹಾ ನೀಡುತ್ತದೆ.




## ಖಲೀಸ್ತಾನದ ಪರವಾಗಿ ಜನಮತ ಸಂಗ್ರಹ


ಸಿಖ್ ಪ್ರಾಬಲ್ಯವಿರುವ ಬ್ರೌನ್‌ಟೌನ್ ನಗರದಲ್ಲಿ ಸಿಖ್ ಪ್ರತ್ಯೇಕತವಾದಿ ಸಂಘಟನೆ ಸಿಖ್ ಫಾರ್ ಜಸ್ಟಿಸ್ ಖಲೀಸ್ಥಾನದ ಪರವಾಗಿ ಜನಮತ ಸಂಗ್ರಹ ನಡೆಸಿತ್ತು. ಒಂದು ಲಕ್ಷ ಸಿಖ್ಖರು ಖಲೀಸ್ಥಾನ ಪರ ಬೆಂಬಲ ಸೂಚಿಸಿದ್ದಾಗಿ ಹೇಳಿಕೊಂಡಿತ್ತು. ಇಂತಹ ಕೃತ್ಯಗಳನ್ನು ಹತ್ತಿಕ್ಕುವಂತೆ ಭಾರತ ಕೆನಡಾಕ್ಕೆ ಆಗ್ರಹಿಸಿತ್ತು ಜೊತೆಗೆ ಭಾರತ ಭಯೋತ್ಪಾದಕರೆಂದು ಗುರುತಿಸುವವರನ್ನು ಕೆನಡಾ ಕೂಡ ಭಯೋತ್ಪಾದಕರೆಂದು ಗುರುತಿಸಿ ಕ್ರಮ ಕೈಗೊಳ್ಳಬೇಕೆಂದು ತಾಕೀತು ಮಾಡಿತು. ಭಾರತದ ಆಗ್ರಹಕ್ಕೆ ಸ್ಪಂದಿಸದ ಕೆನಡಾ ಸರ್ಕಾರದ ನೀತಿಯನ್ನು ಖಂಡಿಸಿ ಭಾರತದ ವಿದೇಶಾಂಗ ಮಂತ್ರಿ, ಶ್ರೀ ಎಸ್.ಜಯಶಂಕರ್‌ರವರು ಇದಕ್ಕೆಲ್ಲಾ ಕಾರಣ ಸಿಖ್ಖರ ತುಷ್ಟೀಕರಣ, ವೋಟ್ ಬ್ಯಾಂಕ್ ರಾಜಕೀಯವಲ್ಲದೇ ಮತ್ತೇನೂ ಅಲ್ಲವೆಂದು ಪ್ರತ್ಯೇಕತಾವಾದಿಗಳಿಗೆ, ತೀವ್ರಗಾಮಿಗಳಿಗೆ ಮತ್ತು ಹಿಂಸೆಯನ್ನು ಪ್ರತಿಪಾದಿಸುವ ಮಂದಿಗೆ ಇಂಬು ನೀಡುತ್ತಿರುವುದು ಎರಡೂ ದೇಶಗಳ ಹಿತದೃಷ್ಟಿಯಿಂದ ಒಳಿತಲ್ಲವೆಂದು ಕಟುವಾಗಿ ಟೀಕಿಸಿದ್ದರು.

ಕೆನಡಾದ ಖಲಿಸ್ಥಾನ್ ವಾದಿಗಳು ಭಾರತದಲ್ಲಿನ ವಿಚ್ಛಿದ್ರಕಾರಿ ಶಕ್ತಿಗಳಿಗೆ ಎಲ್ಲಾ ರೀತಿಯ ನೆರವನ್ನು ನೀಡುತ್ತಿದ್ದಾರೆ (ಮಣಿಪುರದ ಹಿಂಸಾಚಾರಕ್ಕೆ ಅಲ್ಲಿಯ ಕುಕ್ಕಿ ಸಮುದಾಯದ ಕೆಲ ವಿಚ್ಛಿದ್ರಕಾರಿ ಶಕ್ತಿಗಳಿಗೆ ಮತ್ತು ದೆಹಲಿಯಲ್ಲಿ ನಡೆದ ರೈತ ಮಸೂದೆ ವಿರೋಧಿ ಚಳುವಳಿಗೆ ಎಲ್ಲಾ ರೀತಿಯ ಸಹಕಾರ ನೀಡಿರುವುದು ಗುಟ್ಟಾಗಿ




ಉಳಿದಿಲ್ಲ) ಈ ರೀತಿಯ ಸಮಸ್ಯೆಗಳು ಭಾರತಕ್ಕೆ ಮಗ್ಗುಲ ಮುಳ್ಳಾಗಿ ಕಾಡುತ್ತಿದೆ.

ಇದನ್ನು ಬಗ್ಗುಬಡಿಯಲು ಈಗಿನ ಭಾರತ ಸರ್ಕಾರ ಸಮರ್ಥವಾಗಿದ್ದು ಈಗಾಗಲೇ ರಾಜತಾಂತ್ರಿಕ ಪ್ರಕ್ರಿಯೆಗಳು ಪ್ರಾರಂಭವಾಗಿವೆ. ಇದೆಲ್ಲದರ ಮಧ್ಯೆ ಇನ್ನಿಲ್ಲದಂತೆ ಕಾಡುವ ಪ್ರಶ್ನೆಗಳೂ ಉದ್ಭವವಾಗುತ್ತಿವೆ. ಪಕ್ಕದಲ್ಲೇ ಇರುವ ಕೆನಡಾ ಸೇರಿದಂತೆ ಜಿ-7 ರಾಷ್ಟ್ರಗಳ ಹಿರಿಯಣ್ಣ ಅಮೇರಿಕಾ ದೇಶದ ಸರ್ಕಾರವು ಒಂದೊಮ್ಮೆ ಭಯೋತ್ಪಾದಕನೊಬ್ಬನನ್ನು ಜಾಗತಿಕ ಭಯೋತ್ಪಾದಕನೆಂದು ತನ್ನ ಕಪ್ಪು ಪಟ್ಟಿಗೆ ಸೇರಿಸಿದರೆ ಅಂತಹ ಭಯೋತ್ಪಾದಕನಿಗೆ ಕೆನಡಾ ಸರ್ಕಾರವು ಆಶ್ರಯ ನೀಡುತ್ತದೆಯೇ?, ಆತನಿಗೆ ತನ್ನ ದೇಶದ ನಾಗರೀಕತ್ವವನ್ನು ನೀಡುತ್ತದೆಯೇ?, ಆತನಿಗೆ ರಕ್ಷಣೆಯನ್ನು ನೀಡುತ್ತದೆಯೇ? ಇಲ್ಲವೆಂದಾದಲ್ಲಿ ಇದೆಲ್ಲದರ ಹಿಂದಿರುವ ಶಕ್ತಿ ಯಾವುದು? ಆ ಶಕ್ತಿಯೇ ಇದೆಲ್ಲದರ ಸೂತ್ರಧಾರನೇ? ಯೋಚಿಸಬೇಕಿದೆ...............



# ಕಾವೇರಿ ಕಷ್ಟಕ್ಕೆ ಬಿಜೆಪಿ ಸ್ಪಂದನೆ







**ರತನ್ ರಮೇಶ್ ಪೂಜಾರಿ**
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು, ಬಿಜೆಪಿ ಕರ್ನಾಟಕ


**ರಾಜ್ಯದ ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ನೀರು ಬಿಡುಗಡೆ ಮಾಡಿದ ದಿನದಿಂದಲೇ ಕಾವೇರಿ ಜಲಾನಯನ ಪ್ರದೇಶದ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ದೊಡ್ಡ ಮಟ್ಟದ ಹೋರಾಟವನ್ನು ಕೈಗೊಳ್ಳಲಾಯಿತು. ಸಂಸದರಾದ ಶ್ರೀ ಪಿಸಿ ಮೋಹನ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಅಶ್ವಥ್ ನಾರಾಯಣ್, ಜಿಲ್ಲಾಧ್ಯಕ್ಷರಾದ ಶ್ರೀ ಸಿ.ಪಿ. ಉಮೇಶ್ ಇನ್ನೂ ಹಲವು ಮುಖಂಡರು ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಎರಡನೇ ಬಾರಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಆರ್. ಅಶೋಕ್, ಡಾ. ಅಶ್ವಥ್ ನಾರಾಯಣ್ ರವರ ನೇತೃತ್ವದಲ್ಲಿ ಬೃಹತ್ ಹೋರಾಟ ನಡೆಸಲಾಯಿತು. ಮೂರನೇ ಬಾರಿಯ ಹೋರಾಟದಲ್ಲಿ ಡಾ. ಅಶ್ವಥ್ ನಾರಾಯಣ್, ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು ಬೃಹತ್ ಹೋರಾಟದಲ್ಲಿ ಪಾಲ್ಗೊಂಡರು. ನಾಲ್ಕನೇ ಬಾರಿಯ ಬೃಹತ್ ಪ್ರತಿಭಟನೆಯ ನೇತೃತ್ವವನ್ನು ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರಿ ಸಿ.ಟಿ. ರವಿರವರು ವಹಿಸಿದ್ದರು. ಮಂಡ್ಯ ಬಿಜೆಪಿ ರೈತ ಮೋರ್ಚಾ ವತಿಯಿಂದ ಕೆಆರ್‌ಎಸ್‌ಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.**







ಜೈ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ. ಜ್ಞಾನಪೀಠ ಕವಿ ಕುವೆಂಪುರವರು ಬರೆದ ಈ ಒಂದು ಸಣ್ಣ ವಾಕ್ಯ ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕವನ್ನು ಹೃದಯ ಮುಟ್ಟುವಂತೆ ವರ್ಣಿಸುತ್ತದೆ. ಕರ್ನಾಟಕದ ಜನರೆಂದರೆ ವಿಶಾಲ ಹೃದಯದವರು ಎಂದೇ ಪ್ರಸಿದ್ಧರು. ಉತ್ತರ ಕರ್ನಾಟಕದ ಜೋಳದ ರೊಟ್ಟಿ, ಮೈಸೂರು ಕರ್ನಾಟಕದ ರಾಗಿ ಮುದ್ದೆ, ಕರಾವಳಿ ಕರ್ನಾಟಕದ ಕುಚ್ಚಲಕ್ಕಿ ಅನ್ನದಂತ ಆಹಾರ ವೈವಿಧ್ಯ, ಸಾಹಿತ್ಯ ಕ್ಷೇತ್ರದ ಅನನ್ಯ ಸಾಧನೆಗಾಗಿ 8 ಜ್ಞಾನಪೀಠ, ಸಿಲಿಕಾನ್ ಸಿಟಿ ಎಂದೇ ವಿಶ್ವವಿಖ್ಯಾತ ಬೆಂಗಳೂರು ಸಿಟಿ, ಆರ್ಥಿಕತೆಯಲ್ಲಿ ದೇಶದಲ್ಲಿ ನಾಲ್ಕನೇ ಶ್ರೀಮಂತ ರಾಜ್ಯ ಎಂಬೆಲ್ಲ ಹೆಗ್ಗಳಿಕೆಯನ್ನು ಪಡೆದ ವೈವಿಧ್ಯಮಯ ರಾಜ್ಯ ಕರ್ನಾಟಕ. ಕರ್ನಾಟಕದ ಜೀವನಾಡಿಯಂತೆ ಹರಿಯುವ ಕಾವೇರಿ, ಕೃಷ್ಣ, ತುಂಗಭದ್ರಾ, ಮಲಪ್ರಭಾ, ಘಟಪ್ರಭಾ, ಶರಾವತಿ, ನೇತ್ರಾವತಿ, ಕಾಳಿ, ಭೀಮ, ಚಕ್ರ, ಯಗಚಿ, ಸೌಪರ್ಣಿಕಾ, ಶಿಂಶಾ, ಅಘನಾಶಿನಿ, ವರದಾ, ದಂಡವತಿ, ಕಬಿನಿ, ಅಗ್ರಣಿ ಇನ್ನೂ ಅನೇಕ ನದಿಗಳು ಕರ್ನಾಟಕದ ಜನರ ಜೀವನದ ದೊಡ್ಡ ಭಾಗವೇ ಆಗಿದೆ. ಆದ್ದರಿಂದಲೇ ಹಿರಿಯರು ನದಿಗಳನ್ನು ದೇವರ ಸಮಾನವಾಗಿ ಕಂಡಿದ್ದರು. ಈ ತಾಯಿಯು ನಕ್ಕರೆ, ಸಂತೋಷದಾ ಸಕ್ಕರೆ. ಮಮತೆಯ ಮಾತೆಗೆ, ಭಾಗ್ಯದಾ ಧಾತೆಗೆ, ಮಾಡುವೆ ಭಕ್ತಿಯ ವಂದನೆ ಎಂಬ ಸಾಲುಗಳನ್ನು ಕೇಳಿದರೇನೆ ಅರ್ಥವಾಗುತ್ತದೆ, ಕನ್ನಡಿಗರು ಅದೆಷ್ಟು ಭಕ್ತಿ ಪೂರ್ವಕವಾಗಿ ಕಾವೇರಿಯನ್ನು ಪೂಜಿಸುತ್ತಾರೆ, ಪ್ರೇಮಿಸುತ್ತಾರೆ ಎಂದು.

ಇತ್ತೀಚಿಗೆ ಕಾವೇರಿ ನದಿಯ ನೀರಿಗೆ ಸಂಬಂಧಪಟ್ಟಂತೆ ಕರ್ನಾಟಕದಲ್ಲಿ ಬಹಳ ಚರ್ಚೆ, ಪ್ರತಿಭಟನೆ, ಹೋರಾಟಗಳು ನಡೆಯುತ್ತಿವೆ. ಅವುಗಳು ಬಹಳ ನ್ಯಾಯಸಮ್ಮತವು ಕೂಡ ಆಗಿವೆ. ಉತ್ತರ ಭಾರತದ ನದಿಗಳು ಹಿಮನದಿಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದರೆ, ಕಾವೇರಿ ನದಿ ಮಳೆಯ ಮೇಲೆ ಅವಲಂಬಿತವಾಗಿದೆ. ಒಟ್ಟು 740 ಟಿಎಂಸಿ ನೀರಿನ ಸಾಮರ್ಥ್ಯದ ನದಿಯಾಗಿರುವ ಕಾವೇರಿ ನದಿಗೆ ಕರ್ನಾಟಕ ಅತಿ ಹೆಚ್ಚಿನ 425 ಟಿಎಂಸಿ ಅಡಿ ನೀರಿನ ಕೊಡುಗೆ ನೀಡಿದರೆ ತಮಿಳುನಾಡು ಕೇವಲ 252 ಟಿಎಂಸಿ ಫೀಟ್‌ನ ನೀರನ್ನು ಮಳೆಯ ಮೂಲಕ ಕೊಡುಗೆಯಾಗಿ ನೀಡುತ್ತದೆ. ಆದರೆ ಬಳಸಲು ಸಿಗುವ ನೀರಿನ ಪ್ರಮಾಣ ಮಾತ್ರ ಸಂಪೂರ್ಣ ವಿರುದ್ಧವಾಗಿದೆ. ಕರ್ನಾಟಕಕ್ಕೆ ಕೇವಲ 284.7 ಟಿಎಂಸಿ ನೀರು ಬಳಕೆಗೆ ಸಿಕ್ಕರೆ ತಮಿಳುನಾಡು 404.25 ಟಿಎಂಸಿ, ಕೇರಳ 30 ಟಿಎಂಸಿ, ಪಾಂಡಿಚೆರಿ 7 ಟಿಎಂಸಿ ನೀರನ್ನು ಬಳಸುವ ಅವಕಾಶ ಪಡೆಯುತ್ತವೆ. ಹಾಗಾದರೆ ಅತಿ ಹೆಚ್ಚು ನೀರನ್ನು ಕರ್ನಾಟಕ ಕೊಡುಗೆ ನೀಡಿದರೂ ಕೂಡ ಯಾಕೆ ಕರ್ನಾಟಕ ಅತಿ ಕಡಿಮೆ ನೀರನ್ನು ಬಳಸಲು ಅವಕಾಶ ಪಡೆಯುತ್ತದೆ ಎಂಬ ಪ್ರಶ್ನೆ ನಮ್ಮೆಲ್ಲರಲ್ಲಿ ಮೂಡುವುದು ಸಹಜ ತಾನೆ? ಐತಿಹಾಸಿಕವಾಗಿ ನೋಡುವುದಾದರೆ ಈ ಸಮಸ್ಯೆಯನ್ನು ಹುಟ್ಟು ಹಾಕಿದ್ದು ಬ್ರಿಟಿಷರು. ಆಗ ಕರ್ನಾಟಕ ಮೈಸೂರು ರಾಜ್ಯವಾಗಿದ್ದರೆ ತಮಿಳುನಾಡು ಮದ್ರಾಸ್ ರಾಜ್ಯವಾಗಿತ್ತು. ಮೈಸೂರ್ ರಾಜ್ಯವನ್ನು ರಾಜರು ಆಳುತ್ತಿದ್ದರೆ ಮದ್ರಾಸ್ ರಾಜ್ಯವನ್ನು ಬ್ರಿಟಿಷರು ಆಳುತ್ತಿದ್ದರು. 1910ರಲ್ಲಿ ಮೈಸೂರು ಕಾವೇರಿ ನದಿಗೆ ಅಡ್ಡಲಾಗಿ ಕನ್ನಂಬಾಡಿ ಕಟ್ಟೆಯನ್ನು ಕಟ್ಟುವ ಪ್ರಸ್ತಾಪವನ್ನು ಇಡುತ್ತದೆ. ಅದೇ ಸಮಯದಲ್ಲಿ ಮದ್ರಾಸ್ ಕಾವೇರಿ ನದಿಗೆ ಅಡ್ಡಲಾಗಿ ನೀರಾವರಿ ಯೋಜನೆಯ ಪ್ರಸ್ತಾಪವನ್ನಿಟ್ಟು ಅಣೆಕಟ್ಟು ಕಟ್ಟುವುದನ್ನು ವಿರೋಧಿಸುತ್ತದೆ. ನಂತರ ಮಧ್ಯ ಪ್ರವೇಶಿಸಿದ ಬ್ರಿಟಿಷ್ ಸರ್ಕಾರ 1924ರಲ್ಲಿ ಮುಂದಿನ 50 ವರ್ಷಗಳವರೆಗೆ ತಮಿಳುನಾಡು ಹಾಗೂ ಪುದುಚೇರಿ 75% ಕಾವೇರಿ ನೀರನ್ನು ಬಳಸಲಿ, 23% ಮೈಸೂರು ಹಾಗೂ ಉಳಿದ 2% ನೀರನ್ನು ಆಗಿನ ಟ್ರಾವೆಂಕೋರ್ ಬಳಸಲಿ ಎನ್ನುವಂತ ವಿಚಿತ್ರ ಒಪ್ಪಂದವನ್ನು ಜಾರಿಗೆ ತರುತ್ತದೆ. ಮದ್ರಾಸ್ ಬ್ರಿಟಿಷರ ಆಡಳಿತದಲ್ಲಿದ್ದ ಕಾರಣ ಮದ್ರಾಸ್ ಗೆ ಹೆಚ್ಚು ಮಹತ್ವ ನೀಡಿ ರಾಜರ ಆಡಳಿತದಲ್ಲಿದ್ದ ಮೈಸೂರಿಗೆ ಅನ್ಯಾಯ ಎಸಗುತ್ತಾರೆ. 1924ರ ಒಪ್ಪಂದ 1974 ರಲ್ಲಿ ಮುಕ್ತಾಯಗೊಳ್ಳುತ್ತದೆ. ಆದರೆ ಈ ಸಮಯದಲ್ಲಿ ತಮಿಳುನಾಡು 25 ಲಕ್ಷ ಹೆಕ್ಟೇರ್‌ಗಿಂತಲೂ ಹೆಚ್ಚು ಜಾಗದಲ್ಲಿ ಬೆಳೆ ಬೆಳೆಯುತ್ತಿದ್ದಿದ್ದರಿಂದ ಕಾವೇರಿ ನದಿಯ ಮೇಲೆ ಬಹಳಷ್ಟು ಅವಲಂಬಿತರಾಗಿದ್ದರು. ಕಾವೇರಿ ಕೊಳ್ಳದ ಭಾಗಗಳಲ್ಲಿ ಮಳೆಯ ಪ್ರಮಾಣ ಕೂಡ ಹಿಂದಿಗಿಂತ ಇಂದು ಬಹಳಷ್ಟು ಕಡಿಮೆಯಾಗಿದೆ. 1993ರಲ್ಲಿ 1502 ಮಿಲಿ ಮೀಟರ್‌ನಷ್ಟು ಮಳೆ ಪಡೆಯುತ್ತಿದ್ದ ಈ ಪ್ರದೇಶಗಳು 2002ರಲ್ಲಿ 241 ಮಿಲಿ ಮೀಟರ್ ನಷ್ಟು ಕಡಿಮೆ ಮಳೆ ಪಡೆದ ಉದಾಹರಣೆ ಇದ್ದು, ಈ ವರ್ಷ 2023ರಲ್ಲಿ ಕೂಡ ಅತೀ ಕಡಿಮೆ ಮಳೆ ಪಡೆದಿದೆ. ಆಗಸ್ಟ್ ತಿಂಗಳಲ್ಲಿ ಕಳೆದ 120 ವರ್ಷಗಳಲ್ಲಿ ಅತಿ ಕಡಿಮೆ ಮಳೆಯನ್ನ ಈ ಪ್ರದೇಶ ಪಡೆದಿದೆ

ಹಲವು ದಶಕಗಳ ವಿವಾದದ ನಂತರ ಜಾರಿಗೆ ಬಂದ ಕಾವೇರಿ ನೀರು ಹಂಚಿಕೆ ಟ್ರಿಬ್ಯೂನಲ್ ಹಾಗೂ ಫೆಬ್ರವರಿ 2018ರ ಸುಪ್ರೀಂ ಕೋರ್ಟ್ ತೀರ್ಪು ಸಾಮಾನ್ಯ ನೀರಿನ ವರ್ಷದ ಒಟ್ಟು 740 ಟಿಎಂಸಿ

ನೀರಿನಲ್ಲಿ ಕರ್ನಾಟಕಕ್ಕೆ 284.75ಟಿಎಂಸಿ, ತಮಿಳುನಾಡಿಗೆ 404.25 ಟಿಎಂಸಿ, ಕೇರಳಕ್ಕೆ 30 ಟಿಎಂಸಿ, ಪುದುಚೇರಿಗೆ 7 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿತ್ತು. ಉಳಿದ ಹತ್ತು ಟಿಎಂಸಿ ನೀರನ್ನು ಪರಿಸರ ಸಂರಕ್ಷಣೆಗೆ ಮೀಸಲಿಟ್ಟರೆ ಹಾಗೂ 4 ಟಿಎಂಸಿ ನೀರು ಸಮುದ್ರಕ್ಕೆ ಸೇರುತ್ತದೆ. ತಮಿಳುನಾಡಿಗೆ ಬಿಡಬೇಕಾದ ನೀರಿನಲ್ಲಿ 177.25 ಟಿಎಂಸಿ ನೀರನ್ನು ಕರ್ನಾಟಕ ತಮಿಳುನಾಡು ಗಡಿಭಾಗದ ಬಿಳಿಗುಂಡ್ಲುವಿನ ಇರುವಂತೆ ಖಚಿತಪಡಿಸಬೇಕು ಹಾಗೂ 123.14 ಟಿಎಂಸಿ ನೀರನ್ನು ದಕ್ಷಿಣ-ಪಶ್ಚಿಮ ಮಾನ್ಸೂನ್ ಮಾರುತದ ಸಮಯ ಜೂನ್ ಮತ್ತು ಸೆಪ್ಟೆಂಬರ್ ಮಧ್ಯೆ ಬಿಡುಗಡೆ ಮಾಡಬೇಕು. ಮೊದಲೇ ಹಂಚಿಕೆಯಲ್ಲಿ ತಾರತಮ್ಯ ಅನುಭವಿಸುತ್ತಿರುವ ಕರ್ನಾಟಕ ರಾಜ್ಯ ಮಳೆ ಸರಿಯಾಗಿ ಬರದಿದ್ದರೂ ಕೂಡ ತಮಿಳುನಾಡಿಗೆ ಪೂರ್ತಿ ಪ್ರಮಾಣದ ನೀರನ್ನು ನೀಡಬೇಕೆಂದರೆ ಹೇಗೆ ಸಾಧ್ಯ? ನಮ್ಮ ರಾಜ್ಯಕ್ಕೆ ಕುಡಿಯುವ ನೀರಿನ ತತ್ವಾರ ಉಂಟಾದರೂ, ಬೆಳೆ ಬೆಳೆಯಲು ಸರಿಯಾದ ಪ್ರಮಾಣದ ನೀರು ಸಿಗದಿದ್ದಾಗ ತಮಿಳುನಾಡಿಗೆ ಪೂರ್ತಿ ಪ್ರಮಾಣದ ನೀರು ಬಿಡಬೇಕು ಎಂದಾಗ ಎಲ್ಲಿಂದ ಬಿಡಬೇಕು? ಈ ವಿಚಾರವಾಗಿ ಕಳೆದ ತಿಂಗಳು ಕರ್ನಾಟಕದ ಜನರು, ವಿವಿಧ ಸಂಘಟನೆಗಳು ಬೀದಿಗಿಳಿದು ಪ್ರತಿಭಟನೆಗಿಳಿದಿದ್ದಕ್ಕೆ ರಾಜ್ಯ ಸಾಕ್ಷಿಯಾಗಿತ್ತು. ಕರ್ನಾಟಕದ ಭಾರತೀಯ ಜನತಾ ಪಕ್ಷ ಕೂಡ ಈ ಪ್ರತಿಭಟನೆಗೆ ಸಂಪೂರ್ಣ ಬೆಂಬಲ ಸೂಚಿಸಿ ಇಡೀ ಕರ್ನಾಟಕದಾತ್ಯಂತ ಹೋರಾಟಕ್ಕೆ ಇಳಿದಿತ್ತು. ರಾಜ್ಯದ ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ನೀರು ಬಿಡುಗಡೆ ಮಾಡಿದ ದಿನದಿಂದಲೇ ಕಾವೇರಿ ಜಲಾನಯನ ಪ್ರದೇಶದ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಬಿಜೆಪಿ ವತಿಯಿಂದ ದೊಡ್ಡ ಮಟ್ಟದ ಹೋರಾಟವನ್ನು ಕೈಗೊಳ್ಳಲಾಯಿತು. ಸಂಸದರಾದ ಶ್ರೀ ಪಿ.ಸಿ ಮೋಹನ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಅಶ್ವಥ್ ನಾರಾಯಣ್, ಜಿಲ್ಲಾಧ್ಯಕ್ಷರಾದ ಶ್ರೀ ಸಿಪಿ ಉಮೇಶ್ ಇನ್ನೂ ಹಲವು ಮುಖಂಡರು ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಎರಡನೇ ಬಾರಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಆರ್. ಅಶೋಕ್, ಡಾ. ಅಶ್ವಥ್ ನಾರಾಯಣ್ ರವರ ನೇತೃತ್ವದಲ್ಲಿ ಬೃಹತ್ ಹೋರಾಟ ನಡೆಸಲಾಯಿತು. ಮೂರನೇ ಬಾರಿಯ ಹೋರಾಟದಲ್ಲಿ ಡಾ. ಅಶ್ವಥ್ ನಾರಾಯಣ್, ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು ಬೃಹತ್ ಹೋರಾಟದಲ್ಲಿ ಪಾಲ್ಗೊಂಡರು. ನಾಲ್ಕನೇ ಬಾರಿಯ ಬೃಹತ್ ಪ್ರತಿಭಟನೆಯ ನೇತೃತ್ವವನ್ನು ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರಿ ಸಿ.ಟಿ. ರವಿರವರು ವಹಿಸಿದ್ದರು.

ಮಂಡ್ಯ ಬಿಜೆಪಿ ರೈತ ಮೋರ್ಚಾ ವತಿಯಿಂದ ಕೆಆರ್‌ಎಸ್‌ಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು. ಪ್ರತಿ ದಿನ ಕಾವೇರಿ ಹಿತರಕ್ಷಣಾ ಸಮಿತಿ ಸಭೆಗಳಲ್ಲಿ ಭಾಗವಹಿಸಲಾಗುತ್ತಿತ್ತು. ನೀರು ಬಿಡುಗಡೆ ವಿರೋಧಿಸಿ ಚಡ್ಡಿ ಮೆರವಣಿಗೆ ನಡೆಸಲಾಗಿತ್ತು. ಒಟ್ಟಿನಲ್ಲಿ ಬಿಜೆಪಿ ವತಿಯಿಂದ ಮಂಡ್ಯದಲ್ಲಿ ಮಂಡ್ಯದ ಜೀವನಾಡಿ ಕಾವೇರಿ ನದಿ ನೀರನ್ನು ಸಂಕಷ್ಟದ ಸಮಯದಲ್ಲಿ ತಮಿಳುನಾಡಿಗೆ ಬಿಡುಗಡೆ ಮಾಡುವ ಕಾಂಗ್ರೆಸ್ ಸರಕಾರದ ದೂರದೃಷ್ಟಿ ರಹಿತ ನಿರ್ಧಾರದ ವಿರುದ್ಧ ದೊಡ್ಡ ಮಟ್ಟದ ಹೋರಾಟ ನಡೆಯಿತು.

ಕಾವೇರಿ ಜಲಾನಯನ ಪ್ರದೇಶದ ಎಲ್ಲಾ ಜಿಲ್ಲೆಗಳು ಸೇರಿ ಕರ್ನಾಟಕದಾತ್ಯಂತ ಕಾವೇರಿ ನೀರು ಹಂಚಿಕೆಯ ವಿಚಾರದಲ್ಲಿ ಕರ್ನಾಟಕಕ್ಕಾಗಿರುವ ಅನ್ಯಾಯದ ವಿರುದ್ಧ ಭಾರತೀಯ ಜನತಾ ಪಕ್ಷ ದೊಡ್ಡ ಮಟ್ಟದ ಪ್ರತಿಭಟನೆ ಹಾಗೂ ಹೋರಾಟವನ್ನು ಹಮ್ಮಿಕೊಂಡಿತ್ತು.




## ವೈಚಾರಿಕ ಉಪನ್ಯಾಸ ಮಾಲೆ - ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಜಗನ್ನಾಥ ಭವನದ ಸಿಬ್ಬಂದಿ ವರ್ಗದವರಿಗೆ ಪ್ರತಿ ತಿಂಗಳ ಕೊನೆಯ ಮಂಗಳವಾರದಂದು ವೈಚಾರಿಕ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ಸೆಪ್ಟೆಂಬರ್ ತಿಂಗಳಿನಲ್ಲಿ ಲೇಖಕರು ಹಾಗೂ ಸಮೃದ್ಧ ಸಾಹಿತ್ಯ ಮುದ್ರಣದ ಮಾಲೀಕರಾದ ಶ್ರೀಯುತ ಹರ್ಷ ಅವರಿಂದ ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಸಂಪೂರ್ಣ ಜೀವನವನ್ನೇ ಮುಡಿಪಾಗಿಟ್ಟ ಮಹಾನ್ ವಾಗ್ಮಿ, ಲೇಖಕ, ಸಮಾಜ ಸೇವಕ ಹಾಗೂ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಅತಿ ದೊಡ್ಡ ಕ್ರಾಂತಿಕಾರಿ ಸ್ವಾತಂತ್ರ್ಯ ವೀರ ದಿ. ವಿನಾಯಕ ದಾಮೋದರ ಸಾವರ್ಕರ್ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಕಾರ್ಯಾಲಯ ನಿರ್ವಹಣಾ ಸಮಿತಿಯ ಸದಸ್ಯರು ಹಾಗೂ ಜಗನ್ನಾಥ ಭವನದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.






# ಕಾಂಗ್ರೆಸ್ ಪಕ್ಷದ ಇಬ್ಬಗೆಯ ನಿಲುವುಗಳು



ಹರೀಶ್ ಆತ್ರೇಯ
ಬಿಜೆಪಿ ಕಾರ್ಯಕರ್ತರು

**ಕಾಂ**ಗ್ರೆಸ್ ತನ್ನ ಅಧಿಕಾರವನ್ನು ಎಲ್ಲೆಲ್ಲಿ ಸ್ಥಾಪಿಸುತ್ತದೆಯೋ ಅಲ್ಲೆಲ್ಲಾ ತನ್ನ ಇಬ್ಬಗೆಯ ನೀತಿಯನ್ನು ಅನುಸರಿಸುತ್ತದೆ. ಓಲೈಕೆ ರಾಜಕಾರಣವನ್ನೇ ಕಸುಬಾಗಿಟ್ಟುಕೊಂಡ ಪಕ್ಷಕ್ಕೆ ಈ ನೀತಿ ಮತ್ತು ರೀತಿ ಹೊಸತೇನಲ್ಲ. ಪ್ರಸ್ತುತ ಕರ್ನಾಟಕದ ಪರಿಸ್ಥಿತಿಯನ್ನು ಅವಲೋಕಿಸಿದರೆ ಮೇ 13 ರಿಂದ ಇಲ್ಲಿಯವರೆಗೆ ಅಂದರೆ ಸುಮಾರು ಐದು ತಿಂಗಳಲ್ಲಿ ತನ್ನ ಧೋರಣೆಯನ್ನು ಪ್ರಜೆಗಳಿಗೆ ಮುಟ್ಟಿಸಿದೆ. ಮೊದಲನೆಯದಾಗಿ ತಾನೇ ಘೋಷಿಸಿದ ಭಾಗ್ಯಗಳ ಬಗೆಗೆ ನೋಡೋಣ.

ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಅನ್ನ ಭಾಗ್ಯ, ಶಕ್ತಿ ಮತ್ತು ಯುವನಿಧಿ ಎನ್ನುವ ಐದು ಬಗೆಯ ಉಚಿತ/ಹೊರೆಯೆನಿಸದ ಭಾಗ್ಯಗಳನ್ನು ನೀಡುವ ಭರವಸೆಯನ್ನು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿಕೊಂಡಿದ್ದರು. ಆದರೆ ಈ ಎಲ್ಲಾ ಭಾಗ್ಯಗಳಿಗೆ ಬೇಕಾಗುವ ನಿಧಿಯನ್ನು ಅವರು ಹೇಗೆ ಹೊಂದಿಸಿಕೊಳ್ಳುತ್ತಾರೆ ಎನ್ನುವುದರಲ್ಲಿ ಅಸ್ಪಷ್ಟತೆಯಿತ್ತು. ಈಗ ಆ ಭಾಗ್ಯಗಳು ನಿಧಾನವಾಗಿ ಕಸದಬುಟ್ಟಿ ಸೇರುತ್ತಿವೆ. ಅವರು ಹೇಳಿರುವ ಎಲ್ಲಾ ಉಚಿತ ಭಾಗ್ಯಗಳಿಗೆ ಹಣವನ್ನು ಹೊಂದಿಸುವಲ್ಲಿ ಸರ್ಕಾರ ಹೆಣಗಾಡುತ್ತಿದೆ. ಕ್ರಮೇಣ ಅವರ ಭಾಗ್ಯಗಳೂ ಸಹ ತೂಗಾಡುತ್ತಿವೆ. ಒಂದು ವರ್ಗವನ್ನು ಓಲೈಸುವ ಸಲುವಾಗಿಯೇ ಅವರು ಈ ಎಲ್ಲಾ ಭಾಗ್ಯಗಳನ್ನು ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿದ್ದರು ಎನ್ನುವುದು ತಿಳಿದ ವಿಷಯವೇ ಆಗಿದೆ. ಈ ಎಲ್ಲಾ ಸಂಭ್ರಮವನ್ನು ಆಚರಿಸಲಿಕ್ಕಾಗಿ ಕಾರ್ ಪೂಲಿಂಗ್ ಬ್ಯಾನ್ ಮಾಡಲಾಗಿದೆ ಮತ್ತು ರೋಡ್ ಟ್ಯಾಕ್ಸ್ ಹೆಚ್ಚಿಸಲಾಗಿದೆ. ಒಂದೆಡೆ ಉಚಿತ ಎನ್ನುತ್ತಾ ಮತ್ತೊಂದೆಡೆ ಕಿತ್ತುಕೊಳ್ಳುವುದು ಕಾಂಗ್ರೆಸ್‌ನ ಭಾಗ್ಯದ ಗುಟ್ಟು. ಟ್ರಾಫಿಕ್ ಕಿರಿಕಿರಿಯಿಂದ ಮುಕ್ತಿ ಪಡೆಯಲಿ ಆರಂಭವಾದ ಕಾರ್ ಪೂಲಿಂಗ್‌ನಿಂದ ರಸ್ತೆಗಿಳಿಸುವ ವಾಹನಗಳ ಸಂಖ್ಯೆ ಇಳಿಮುಖವಾದರೆ ಟ್ಯಾಕ್ಸ್ ಕಟ್ಟುವುದು ಇಳಿಕೆಯಾಗುತ್ತದೆಯಾದ್ದರಿಂದ ಎಲ್ಲರೂ ತಮ್ಮ ತಮ್ಮ ವಾಹನಗಳಲ್ಲಿಯೇ ಸಂಚರಿಸಿ ಟ್ಯಾಕ್ಸ್ ಕಟ್ಟುವಂತೆ ಮಾಡುವುದು ಇದರ ತಂತ್ರ.

ಜನಗಳು ಎಚ್ಚೆತ್ತಿದ್ದಾರೆ ಎನ್ನುವುದು ಕಾಂಗ್ರೆಸ್‌ಗೆ ತಿಳಿದಂತಿಲ್ಲ. ಇವರ ಎಲ್ಲಾ ತಂತ್ರಗಳು ಜನರಿಗೆ ಗೊತ್ತಿವೆ. ಹಾಗಾಗಿಯೇ ಬಿಟ್ಟಿ ಭಾಗ್ಯಗಳನ್ನು ಘೋಷಿಸಿದಾಗ ಭಾಗ್ಯಗಳನ್ನು ಗಮನದಲ್ಲಿರಿಸಿಕೊಂಡು ಅವನ್ನು ಅನುಷ್ಠಾನ ಗೊಳಿಸುವಂತೆ ಕೇಳುತ್ತಿದ್ದಾರೆ. ಅಧಿಕಾರಕ್ಕೆ ಬರುವುದಿಲ್ಲವೆಂಬ ಖಚಿತ ಮಾಹಿತಿಯಿಂದಲೋ ಏನೋ ಉಚಿತಗಳನ್ನು ಘೋಷಿಸಿದರು. ಆದರೆ ಹೇಗೋ ಗೆದ್ದುಬಿಟ್ಟರು ಈಗ ಜನರು ಅವರು ಪ್ರಣಾಳಿಕೆಯಲ್ಲಿ ಹೇಳಿದ್ದನ್ನೇ ಕೇಳುತ್ತಿದ್ದಾರೆ. ಸೋಷಿಯಲ್











ಹಿಂದೂಗಳ ಹೆಣ ಎತ್ತಲು ಯಾರೂ ಇರಬಾರದು

ಮೀಡಿಯಾ ಸುಲಭದ ತುತ್ತಲ್ಲ ಎಂದು ಕಾಂಗ್ರೆಸ್‌ಗೆ ಗೊತ್ತಾಗುತ್ತಿದೆ. ಇನ್ನು ಇವರ ಡಬಲ್ ಸ್ಟಾಂಡರ್ಡ್‌ನ ಮತ್ತೊಂದು ಉದಾಹರಣೆ, ಮತಾಂತರ ನಿಷೇಧ ಕಾಯ್ದೆಯನ್ನು ತೆಗೆಯುವುದು. ಭಾರತದ ಮೇಲೆ ಹಲವು ಸಮುದಾಯಗಳು ನಿರಂತರವಾಗಿ ದಾಳಿ ನಡೆಸಿ ಇಲ್ಲಿನ ಹಿಂದೂಗಳನ್ನು ಯಾವುದಾದರೂ ರೀತಿಯಲ್ಲಿ ಮತಾಂತರಿಸಿ ತಮ್ಮ ಸಮುದಾಯವನ್ನು ಅಂಕಿಗಳ ದೃಷ್ಟಿಯಿಂದ ಹೆಚ್ಚಿಸಿಕೊಳ್ಳುವ ಹುನ್ನಾರವನ್ನು ಮಾಡುತ್ತ ಬಂದಿವೆ. ಇವನ್ನು ನಿಯಂತ್ರಿಸುವ ಮತ್ತು ಅದರಿಂದಾಗುವ ಅಪಾಯವನ್ನು ಗಮನಿಸಿಯೇ ಮತಾಂತರ ನಿಷೇಧ ಕಾಯ್ದೆಯನ್ನು ಹಿಂದಿನ ಬಿಜೆಪಿ ಸರಕಾರ ಮಾಡಿತ್ತು. ಆದರೆ ಕೇವಲ ಅಲ್ಪ ಸಂಖ್ಯಾತರ ಓಲೈಕೆಗಾಗಿ ಒಂದು ಸಮುದಾಯನ್ನು ತುಳಿಯುವ ಮನಸ್ಥಿತಿಯಿಂದ ಈ ಕಾಯ್ದೆಯನ್ನು ತೆಗೆಯುವ ಕಾರ್ಯವಾಗಿದೆ.



ಕರ್ನಾಟಕ ಜನರ ಹಿತವನ್ನು ಕಾಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾದ ಸರ್ಕಾರವು ತನ್ನ ಡಬಲ್ ಸ್ಟಾಂಡರ್ಡ್‌ನಿಂದ ಮಾಡಿದ ಮತ್ತೊಂದು ಅಚಾತುರ್ಯವೆಂದರೆ ಪಠ್ಯವನ್ನು ಬದಲಿಸಿದ್ದು. ಜನಕ್ಕೆ ಸತ್ಯವು ತಿಳಿದುಹೋಗುತ್ತದೆ ಎಂಬ ಭಯದಿಂದಲೋ ಅಥವಾ ಒಂದು ಸಮುದಾಯದ ಓಲೈಕೆಗಾಗಿ ಅವರ ಪೂರ್ವಜರು ಮಾಡಿದ ದುರುಳತನ್ನು ಮುಚ್ಚುವುದಕ್ಕೆ ಸತ್ಯವನ್ನೇ ಮರೆಮಾಚುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. ಇಲ್ಲೂ ಸಹ ವೋಟ್ ಬ್ಯಾಂಕ್ ರಾಜಕಾರಣವೇ ಕಾಣುತ್ತದೆ. ಶಿವಮೊಗ್ಗದಲ್ಲಿ ನಡೆದ ಘಟನೆಯನ್ನು ನೆನೆಸಿಕೊಂಡರೆ ಸಾಕು ಇವರ ಓಲೈಕೆಯಿಂದ ಪುಂಡಾಟಿಕೆಯು ಹೇಗೆ ಬೆಳೆಯುತ್ತಿದೆ ಎನ್ನುವುದರ ಅರಿವಾಗುತ್ತದೆ.

ಗೋ ಹತ್ಯೆ ನಿಷೇಧ ಕಾಯ್ದೆಯನ್ನು ರದ್ದು ಮಾಡುವುದರ ಬಗೆಗೆ ಈಗಿನ ಸರಕಾರದ ನಿಲುವು ಸಹ ಡಬಲ್ ಸ್ಟಾಂಡರ್ಡ್ ನಿಲುವಾಗಿದೆ. ಹಿಂದೂಗಳ ಪಾಲಿಗೆ ಗೋವು ಬರಿಯ ಹಸುವಲ್ಲ, ಮಾತೆಯೆಂದು ಪೂಜಿಸುವ ದೈವ ಸ್ವರೂಪಿ. ಅದನ್ನು ಕದ್ದು ಮಾರುವ ಮತ್ತು ತಿಂದು ತೇಗಿ ಹಿಂದೂಗಳನ್ನು ಅವಹೇಳನ ಮಾಡುತ್ತಾ, 'ನಿಮ್ಮ ದೇವರನ್ನು ನಾಶ ಮಾಡುತ್ತೇವೆ' ಎಂಬಂತೆ ಆಡುವ ಸಮುದಾಯ ಮತ್ತು ಬುದ್ಧಿ ಜೀವಿಗಳ ಪರ ವಹಿಸಿ ದೈವವೆಂದು ಪೂಜಿಸುವ ಹಿಂದೂಗಳನ್ನು ಕಡೆಗಣಿಸುವ ಕೆಲಸ ಇಂದಿನ ಸರಕಾರದ್ದು.

ವಾಕ್ ಸ್ವಾತಂತ್ರ್ಯ ಎಲ್ಲರಿಗೂ ಇರುವಂತಹುದು ಮತ್ತು ಸಾಂವಿಧಾನಿಕ. ಆದರೆ ಇಂದಿನ ಸರಕಾರದಲ್ಲಿ ಸರಕಾರವನ್ನು ಟೀಕಿಸಿದರೆ ಜೈಲಿಗಟ್ಟುವ ಅಥವಾ ವ್ಯಕ್ತಿಗೆ ತೊಂದರೆಗೊಳಗಾಗುವಂತೆ ಮಾಡುವ ಕಾನೂನನ್ನು ಮಾಡಿದೆ. ಇದೇ ಸರಕಾರ ಹಿಂದೆ ಬಿಜೆಪಿ ಇದ್ದಾಗ ಮನಸೋ ಇಚ್ಛೆ ಟೀಕಿಸುತ್ತಾ ಸೋಷಿಯಲ್ ಮೀಡಿಯಾಗಳಲ್ಲಿ ತಮ್ಮ ಕಡೆಯ ವ್ಯಕ್ತಿಯಿಂದ ಮಾನಹಾನಿಯಾಗುವಂತೆ ಬರೆಯುವಂತೆ ಪ್ರೇರೇಪಿಸುತ್ತಿತ್ತು, ಈಗ ಅದೇ ಸರಕಾರ ತಾನು ಅಧಿಕಾರಕ್ಕೆ ಬಂದಾಗ ಸರಕಾರದ ವಿರುದ್ಧವಾಗಿ ಏನೂ ಬರೆಯದಂತೆ ನಿರ್ಬಂಧ ಹೇರುವ ಮತ್ತು ವಿಮರ್ಶಕನಿಗೆ ಹೆದರಿಕೆ ಹುಟ್ಟಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡುತ್ತಿದೆ. ಇದಲ್ಲವೇ ಡಬಲ್ ಸ್ಟಾಂಡರ್ಡ್.

ಲೋಕಾಯುಕ್ತವನ್ನು ನಿರ್ವೀರ್ಯವನ್ನಾಗಿ ಮಾಡಿದ ಕೀರ್ತಿ ಕಾಂಗ್ರೆಸ್ ಗೆ ಸಲ್ಲಬೇಕು. ಇಲ್ಲೂ ಸಹ ಕಾಂಗ್ರೆಸ್ ನ ಡಬಲ್ ಸ್ಟಾಂಡರ್ಡ್ ಗಮನಿಸಬಹುದು. ಎಲ್ಲರೂ ಸಮಾನರು ಎನ್ನುವ ಮತ್ತು ಪ್ರಜೆಗಳಿಗೆ ಪ್ರಶ್ನಿಸುವ ಹಕ್ಕನ್ನು ನೀಡುವ ಬಗೆಗೆ ಮಾತನಾಡುವ, ಸರ್ಕಾರದ ಲೋಪದೋಷಗಳನ್ನು ತಿಳಿಸುವ ವ್ಯವಸ್ಥೆಯನ್ನು ಪುರಸ್ಕರಿಸುತ್ತೇವೆ ಎನ್ನುವ ಕಾಂಗ್ರೆಸ್ ಲೋಕಾಯುಕ್ತವನ್ನೇ ದುರ್ಬಲ ಮಾಡಿದೆ. ಕೇವಲ 20 ಶೇಕಡಾ ಮಾತ್ರ ಕೆಲಸ ಮಾಡುವಂತೆ ಮಾಡಿರುವ ಸರ್ಕಾರದಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟುವ ಯಾವುದೇ ಶಕ್ತಿಯಿಲ್ಲ. ಜನರಿಗಾಗಿ ಸರ್ಕಾರ' ಎನ್ನುವುದು ಕೇವಲ ಮಾತಿನ ವೈಭವವಷ್ಟೆ. ಪುಂಡಾಟಿಕೆ ಮಾಡುವ ವ್ಯಕ್ತಿಯನ್ನು ವೈಭವೀಕರಿಸಿ ಮತ್ತು ಆತನ ಪರವಾಗಿಯೇ ನಿಂತು ಮಾತನಾಡುವ ಓಲೈಸುವ ಕೆಲಸವನ್ನು ಸರಕಾರ ಮಾಡುತ್ತದೆ ಎಂದಾದರೆ ಅದು ಜನತೆಗಾಗಿ ದುಡಿಯುವ ಸರಕಾರವಲ್ಲ, ಕೇವಲ ಒಂದು ಸಮುದಾಯಕ್ಕಾಗಿ ದುಡಿಯುವ ಸರಕಾರ.



# ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಕಾರ್ಯಕಾರಿಣಿ

(ವರದಿ)



**ರಜನಿ ಪೈ**
ರಾಜ್ಯ ಕಾರ್ಯಾಲಯ ಕಾರ್ಯದರ್ಶಿ
ಮಹಿಳಾ ಮೋರ್ಚಾ

**ಬಿ**ಜೆಪಿ ರಾಜ್ಯ ಮಹಿಳಾ ಮೋರ್ಚಾ ಕಾರ್ಯಕಾರಿಣಿ ಸಭೆಯನ್ನು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕಾರಿಣಿಯು ತಾಯಿ ಭಾರತಿಗೆ ವಂದೇ ಮಾತರಂ ಗೀತೆಯೊಂದಿಗೆ ವಂದಿಸುವ ಮೂಲಕ ಪ್ರಾರಂಭವಾಯಿತು. ಕಾರ್ಯಕಾರಿಣಿಯನ್ನು ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಶ್ರೀಮತಿ ಗೀತಾ ವಿವೇಕಾನಂದ, ರಾಜ್ಯ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಚಂದಮ್ಮ ಪಾಟೀಲ್, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು ಹಾಗೂ ಕರ್ನಾಟಕ ರಾಜ್ಯ ಪ್ರಭಾರಿಗಳಾದ ಶ್ರೀಮತಿ ಆಕುಲ ವಿಜಯ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು ಹಾಗೂ ಕರ್ನಾಟಕ ರಾಜ್ಯ ಸಹ ಪ್ರಭಾರಿಗಳಾದ ಶ್ರೀಮತಿ ಅಶ್ವಿನಿ ಎಂ.ಎಲ್. ಅವರು ಉಪಸ್ಥಿತರಿದ್ದರು.

ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀಮತಿ ಗೀತಾ ವಿವೇಕಾನಂದರವರು ಪ್ರಾಸ್ತಾವಿಕವಾಗಿ ಮಾತನಾಡಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರು ಯಾವ ರೀತಿ ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು. ಕಳೆದ ವಿಧಾನಸಭಾ ಚುನಾವಣೆಯ ಫಲಿತಾಂಶದಿಂದ ಹತಾಶರಾಗದೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ವಿಜಯ ಸಾಧಿಸುವ ಗುರಿಯೊಂದಿಗೆ ಮುನ್ನಡೆಯಬೇಕು ಎಂದು ಹೇಳಿದರು. ಕೇಂದ್ರ ಸರ್ಕಾರ ಮಹಿಳೆಯರಿಗಾಗಿ ನೀಡಿರುವಂತಹ ಯೋಜನೆಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಆಕುಲ ವಿಜಯ ರವರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರ ಪಾತ್ರ ಏನು ಎಂಬುದನ್ನು ವಿವರಿಸಿದರು. ರಾಜ್ಯ





ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ.ರಾಜೇಶ್ ರವರು ಮುಖ್ಯ ಅತಿಥಿಗಳ ಭಾಷಣದಲ್ಲಿ ಮಹಿಳೆಯರಿಗೆ ಉತ್ಸಾಹ ತುಂಬುವ ಮಾತುಗಳನ್ನಾಡಿ ಜಿಲ್ಲಾಧ್ಯಕ್ಷರುಗಳು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

ಮುಂದಿನ ಅವಧಿಯಲ್ಲಿ ಮುಂಬರುವ ಲೋಕಸಭಾ ಚುನಾವಣೆಯ ದೃಷ್ಟಿಯಿಂದ ಕೈಗೊಳ್ಳಬೇಕಾದ ಕಾರ್ಯಗಳನ್ನು ರಾಷ್ಟ್ರೀಯ ಕಾರ್ಯಕಾರಣಿ ಸದಸ್ಯರಾದ ಶ್ರೀಮತಿ ಎಂ.ಎಲ್.ಅಶ್ವಿನಿ ರವರು ಚರ್ಚಿಸಿದರು.

ಮಹಿಳಾ ಮೀಸಲಾತಿ ಅಭಿನಂದನೆ ವಿಷಯ ಕುರಿತು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ ಕು. ಲಲಿತ ಅನಪುರ ಅವರು ನಿರ್ಣಯವನ್ನು ಮಂಡಿಸಿದರು, ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷರಾದ ಶ್ರೀಮತಿ ಶರಣಮ್ಮ ಕಾಮರೆಡ್ಡಿ ರವರು ನಿರ್ಣಯವನ್ನು ಅನುಮೋದಿಸಿದರು. ಕಾವೇರಿ ವಿವಾದ ವಿಷಯ ಕುರಿತು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ವಿಜಯಲಕ್ಷ್ಮೀ ಕರೂರು ರವರು ಮಂಡಿಸಿದರು, ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಕಾರ್ಯದರ್ಶಿಗಳಾದ ಡಾ. ಪದ್ಮಾ ರವರು ನಿರ್ಣಯವನ್ನು ಅನುಮೋದಿಸಿದರು.



ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸಾಮಾಜಿಕ ಜಾಲತಾಣದ ಪ್ರಾಮುಖ್ಯತೆ ಹಾಗೂ ಮಹಿಳೆಯರ ಕಾರ್ಯಚಟುವಟಿಕೆಗಳ ಕುರಿತು ಬಿಜೆಪಿ ರಾಜ್ಯ ಸಾಮಾಜಿಕ ಜಾಲತಾಣದ ಸಹ ಸಂಚಾಲಕರಾದ ಶ್ರೀ ನರೇಂದ್ರ ಮೂರ್ತಿ ಅವರು ಮಾಹಿತಿ ನೀಡಿದರು.



ಸಮಾರೋಪ ಸಮಾರಂಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಮಹಿಳಾ ಮೋರ್ಚಾ ಉಸ್ತುವಾರಿಗಳಾದ ಶ್ರೀ ಅಶ್ವಥ್ ನಾರಾಯಣ್ ರವರು ಕೇಂದ್ರ ಸರ್ಕಾರ ಮಹಿಳೆಯರಿಗೆ ನೀಡಿರುವ ಸವಲತ್ತುಗಳು ಹಾಗೂ ಯೋಜನೆಗಳನ್ನು ಮನೆಮನೆಗೆ ತಲುಪಿಸಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ಶ್ರೀ ಮೋದಿಯವರು ಮತ್ತೆ ಅಧಿಕಾರಕ್ಕೆ ಬರಲು ಮಹಿಳಾ ಮೋರ್ಚಾ ಯಾವ ರೀತಿ ಶ್ರಮಿಸಬೇಕು ಎಂಬುದನ್ನು ಸವಿಸ್ತಾರವಾಗಿ ತಿಳಿಸಿದರು. ಸಮೂಹ ರಾಷ್ಟ್ರಗೀತೆಯೊಂದಿಗೆ ಕಾರ್ಯಕಾರಿಣಿ ಸಭೆಯು ಸಂಪನ್ನವಾಯಿತು.

BJMM

## ರಾಷ್ಟ್ರೀಯ ಮಹಿಳಾ ಮೋರ್ಚಾ ವತಿಯಿಂದ ಮುಂಬರುವ ಲೋಕಸಭಾ ಚುನಾವಣೆಗೆ ಯೋಜಿತವಾದ ವಿಶೇಷ ಕಾರ್ಯಕ್ರಮಗಳು

- ಯುವತಿ ಸಮ್ಮೇಳನ
- ಸರ್ಕಾರೇತರ ಸಂಸ್ಥೆಗಳ ಸಂಪರ್ಕ
- ಸ್ಮಾರ್ಟ್ ಸಿಟಿಗಳಲ್ಲಿ ಸಾಧಕ ಗಣ್ಯ ಮಹಿಳೆಯರ ಸಮ್ಮೇಳನ
- ಮಹಿಳಾ ಆಟಗಾರ್ತಿಯರ ಸಂಪರ್ಕ
- ಮಂಗಳಮುಖಿಯರ ಸಂಪರ್ಕ
- ಮಹಿಳಾ ಪ್ರಯಾಣಿಕರ ಸಂಪರ್ಕ
- ಲೇಖಕಿಯರ ಮತ್ತು ಪತ್ರಕರ್ತೆಯರ ಸಂಪರ್ಕ
- ಮನೆ ಮನೆ ಸಂಪರ್ಕ
- ಕಮಲ ಮಿತ್ರ ಅಭಿಯಾನ
- ಫಲಾನುಭವಿಗಳೊಂದಿಗೆ ಸೆಲ್ಫಿ
- ನಮೋ ಆ್ಯಪ್ ಮತ್ತು ಸರಳ ಆ್ಯಪ್ ಡೌನ್‌ಲೋಡ್



# ಪಂ. ದೀನದಯಾಳ ಉಪಾಧ್ಯಾಯರ ಜನ್ಮದಿನ

**ಬೆಂಗಳೂರು :** ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪಂ. ದೀನದಯಾಳ ಉಪಾಧ್ಯಾಯರ ಜನ್ಮದಿನವನ್ನು ಆಚರಿಸಲಾಯಿತು. ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಟಿ. ರವಿ ಅವರು ಹಾಗೂ ಗಣ್ಯರು ಪಂಡಿತ್‌ಜಿ ಅವರಿಗೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀ ಸಿ.ಟಿ. ರವಿ ಅವರು ಮಾತನಾಡಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದ್ವಿತೀಯ ಸರಸಂಘಚಾಲಕರಾದ ಪರಮಪೂಜ್ಯ ಗುರೂಜಿ ಅವರು ಪಂ. ದೀನದಯಾಳ್ ಉಪಾಧ್ಯಾಯರನ್ನು ಜನಸಂಘದ ಕಾರ್ಯದರ್ಶಿಯಾಗಿ ಕಳುಹಿಸಿಕೊಟ್ಟರು. ಎರಡು ವರ್ಷದ ನಂತರ ಗುರೂಜಿಯವರನ್ನು ಭೇಟಿ ಮಾಡಿದ ದೀನದಯಾಳರು ದೇಶದಲ್ಲಿ ಈಗಿನ ರಾಜಕೀಯ ಬೆಳವಣಿಗೆಯನ್ನು ನೋಡಿದಾಗ, ಅದೇಕೋ ರಾಜಕೀಯ ಹಿಡಿಸುತ್ತಿಲ್ಲ ಎಂದು ಹೇಳಿದಾಗ ಗುರೂಜಿ ಅವರು ರಾಜಕೀಯ ಕ್ಷೇತ್ರ ಯಾವತ್ತು ನಿನಗೆ ಹಿಡಿಸುತ್ತದೆಯೋ ಆಗ ನಿನ್ನನ್ನು ವಾಪಸ್ ಕರೆಸಿಕೊಳ್ಳುತ್ತೇನೆ. ನಿನಗೆ ಎಲ್ಲಿಯವರೆಗೆ ಅದು ಹಿಡಿಸುವುದಿಲ್ಲವೋ ಅಲ್ಲಿಯವರೆಗೆ ಅದನ್ನು ಶುದ್ಧೀಕರಿಸಲು ಪ್ರಯತ್ನ ಮಾಡಬೇಕು ಎಂದು ಹೇಳಿದರು.

ದೀನದಯಾಳರ ಆದರ್ಶ, ಪ್ರೇರಣೆ ಇಂದಿಗೂ ನಮ್ಮೆಲ್ಲರಿಗೆ ಸ್ಫೂರ್ತಿಯಾಗಿದೆ. ಜನಸಂಘ ಈಗ ಭಾರತೀಯ ಜನತಾ ಪಕ್ಷವಾಗಿ ಬದಲಾವಣೆಯಾಗಿದೆ. ಜನಸಂಘ ಹುಟ್ಟಿದಾಗ ಇದ್ದ ವಿಚಾರಧಾರೆಗಳನ್ನೇ ಇಟ್ಟುಕೊಂಡು ಬಿಜೆಪಿ ಸಾಗುತ್ತಿರುವುದಕ್ಕೆ ಪಂ. ದೀನದಯಾಳರು ಹಾಕಿಕೊಟ್ಟ ಮಾರ್ಗದರ್ಶಕ ಸೂತ್ರಗಳೇ ಕಾರಣ. ಏಕಾತ್ಮ ಮಾನವತಾವಾದ ಹಾಗೂ ಅಂತ್ಯೋದಯ ಪರಿಕಲ್ಪನೆಗಳು ಬಿಜೆಪಿಯ ಪ್ರಮುಖ ವಿಚಾರಧಾರೆ ಆಗಿವೆ. ಅಂತ್ಯೋದಯ ಸಿದ್ಧಾಂತವನ್ನು ಜಾರಿಗೆ ತರುವ ಅವಕಾಶ ಸಿಕ್ಕಾಗೆಲ್ಲ ಅವುಗಳ ಅನುಷ್ಠಾನ ಮಾಡುವ ಬದ್ಧತೆಯನ್ನು ಬಿಜೆಪಿ ಮಾಡಿದೆ. ಬಿಜೆಪಿಯು 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ಮೂಲಮಂತ್ರದೊಂದಿಗೆ ಅಂತ್ಯೋದಯ ಕಾರ್ಯಾನುಷ್ಠಾನ ಮಾಡುತ್ತಿದೆ. ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತನ್ನನ್ನು ತಾನು ಸಮರ್ಪಿಸಿಕೊಂಡು, ಅಂತ್ಯೋದಯದ ಕಲ್ಪನೆ, ಏಕಾತ್ಮ ಮಾನವತಾವಾದ ಸಿದ್ಧಾಂತ ನೀಡಿದ ತತ್ವಜ್ಞಾನಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರಿಗೆ ಕೋಟಿ ಕೋಟಿ ನಮನಗಳು ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿದ್ದರಾಜು, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಜಗದೀಶ್ ಹಿರೇಮನಿ, ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು ಹಾಗೂ ಕಾರ್ಯಾಲಯ ಸಿಬ್ಬಂದಿಯವರು ಉಪಸ್ಥಿತರಿದ್ದರು.

**ಧಾರವಾಡ :** ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಭಾರತೀಯ ಪರಂಪರೆಯ ಪ್ರತಿಪಾದಕ, ಪ್ರಖರ ವಾಗ್ಮಿ, ಸಂಘಟನಾ ಚತುರ, ಅಂತ್ಯೋದಯ ಪರಿಕಲ್ಪನೆಯ ಹರಿಕಾರ ಪಂ. ದೀನದಯಾಳ ಉಪಾಧ್ಯಾಯರ ಜಯಂತಿಯನ್ನು ಆಚರಿಸಲಾಯಿತು.



ಈ ಸಂದರ್ಭದಲ್ಲಿ ಧಾರವಾಡ ಮಹಾನಗರ ಜಿಲ್ಲಾಧ್ಯಕ್ಷರಾದ ಶ್ರೀ ಸಂಜಯ್ ಕಪಟ್‌ಕರ್, ಪಾಲಿಕೆ ಸದಸ್ಯರಾದ ಶ್ರೀ ವಿಜಯಾನಂದ ಶೆಟ್ಟಿ, ಶ್ರೀ ಶಂಕರ ಶೇಳಕೆ, ಮುಖಂಡರಾದ

ಶ್ರೀ ಮೋಹನ ರಾಮದುರ್ಗ, ಶ್ರೀ ಅಮಿತ್ ಪಾಟೀಲ್, ಶ್ರೀ ಶ್ರೀನಿವಾಸ ಕೊಟ್ಯನ್, ಶ್ರೀ ಬಸವರಾಜ ರುದ್ರಾಪುರ, ಶ್ರೀ ಶಿವಾಜಿ ಶಿಂದೆ, ಶ್ರೀ ಪವನ ತಿಟೆ, ಶ್ರೀ ಮಂಜುನಾಥ ಹೆಬಸೂರ, ಶ್ರೀ ರಮೇಶ್ ದೊಡ್ಡವಾಡ, ಶ್ರೀ ಚೇತನ ಮರಗಲ್, ಶ್ರೀ ಮಂಜುನಾಥ ಚುಳಪ್ಪನವರ, ಶ್ರೀ ಕರೆಪ್ಪ ಸುಣಗಾರ, ಶ್ರೀಮತಿ ರೂಪ ಚೌದರಿ ಹಾಗೂ ಇತರರು ಉಪಸ್ಥಿತರಿದ್ದರು.

**ಹಡಗಲಿ:** ಹಡಗಲಿ ಮಂಡಲ ಕಾರ್ಯಾಲಯದಲ್ಲಿ ಪಂ. ದೀನದಯಾಳ್ ಉಪಾಧ್ಯಾಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಪಂಡಿತ್‌ಜೀ ಅವರ ಜನ್ಮದಿನವನ್ನು ಆಚರಿಸಲಾಯಿತು.



ಈ ಸಂದರ್ಭದಲ್ಲಿ ವಿಭಾಗ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹೆಚ್. ಪೂಜಪ್ಪ, ಮಂಡಲ ಅಧ್ಯಕ್ಷರಾದ ಶ್ರೀ ಸಂಜೀವರೆಡ್ಡಿ, ಜಿಲ್ಲಾ ಹಿಂದುಳಿದ ಮೋರ್ಚಾ ಅಧ್ಯಕ್ಷರಾದ ಶ್ರೀ ಇ.ಟಿ. ಲಿಂಗರಾಜ್, ಮುಖಂಡರಾದ ಶ್ರೀ ಎಂ. ಪರಮೇಶಪ್ಪ, ಶ್ರೀ ರವಿಕುಮಾರ್, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜೆ. ಪರಶುರಾಮ್ ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಹಾವೇರಿ :** ನಗರ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಪಂ. ದೀನದಯಾಳ ಉಪಾಧ್ಯಾಯರ ಜನ್ಮ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ದರಾಜ ಕಲಕೋಟಿಯವರು ಮಾತನಾಡಿ ಒಂದು ಹೊತ್ತು ಊಟ ಮಾಡಿ, ಅನೇಕ ದಿನ ರಾತ್ರಿ ಕಡಲೇಪುರಿ ತಿಂದು, ನೀರು ಕುಡಿದು ನಿರಂತರವಾಗಿ ಸಂಘದ ಶಿಬಿರ, ಕಾರ್ಯಕಾರಿಣಿಯಲ್ಲಿ ಪಾಲ್ಗೊಂಡು ದೇಶದ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಿದ್ದ ಪಂಡಿತ್ ದೀನದಾಯಾಳರು ಬದುಕಿದ್ದು ಕೇವಲ 52 ವರ್ಷ ಮಾತ್ರ. ಆದರೆ ಅವರ ಆಚಾರ ವಿಚಾರಗಳಿಂದ ಲಕ್ಷಾಂತರ ಜನವರು ಪ್ರಭಾವಿತರಾದರು. ದೀನದಯಾಳಜಿಯವರು ಕೈಗೊಂಡ ಕಾರ್ಯ ವ್ಯಕ್ತಿ ನಿಷ್ಠವಾಗಿರಲಿಲ್ಲ ಬದಲಾಗಿ ತತ್ವನಿಷ್ಠವಾಗಿತ್ತು. ಆದರ್ಶಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ತಾವು ಆದರ್ಶಗಳಿಗೆ ತಕ್ಕಂತೆ ಜೀವಿಸಿ, ತತ್ವ ಸಿದ್ಧಾಂತಗಳಿಗಾಗಿ ಜೀವಿಸುವುದನ್ನು ಕಲಿಸಿಕೊಟ್ಟ ಪಂಡಿತ್ ದೀನದಯಾಳರನ್ನು ಹಾಗೂ ಅವರ ಸಿದ್ಧಾಂತವನ್ನು ಪ್ರತಿಯೊಬ್ಬರೂ ಪ್ರತಿಪಾದಿಸಬೇಕು ಎಂದು ಹೇಳಿದರು.




ಹಾವೇರಿ ವಿಧಾನಸಭಾ ಕ್ಷೇತ್ರದ ಮುಖಂಡರಾದ ಶ್ರೀ ಗವಿಸಿದ್ದಪ್ಪ ದ್ಯಾಮಣ್ಣನವರ ಮಾತನಾಡಿ ಪಂ. ದೀನದಯಾಳಜಿ ಉಪಾಧ್ಯಾಯರು ಪ್ರತಿಪಾಸಿದ ರಾಜಕೀಯ ಜೀವನ ದರ್ಶನವು ಏಕಾತ್ಮ ಮಾನವತಾವಾದ ಎಂಬ ಅವರ ಚಿಕ್ಕ ಗ್ರಂಥದಲ್ಲಿ ಪ್ರಕಟಗೊಂಡಿದೆ. ಭಾರತವು ಈ ಜೀವನದರ್ಶವನ್ನು ಆಳವಡಿಸಿಕೊಂಡು ಒಂದು ಸಮರ್ಥ ರಾಷ್ಟ್ರವಾದರೆ ಇಡೀ ವಿಶ್ವಕ್ಕೆ ಸುಖಶಾಂತಿಯ ದಾರಿಯನ್ನು ತೋರುವ ತನ್ನ ಶ್ರೇಷ್ಠ ಜೀವಿತಕಾರ್ಯವನ್ನು ನಿರ್ವಹಿಸಬಲ್ಲದೆಂಬ ಆತ್ಮವಿಶ್ವಾಸವನ್ನು ಪಂ. ದೀನದಯಾಳರು ಹೊಂದಿದ್ದರು ಎಂದು ಹೇಳಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ರುದ್ರೇಶ ಚಿನ್ನಣ್ಣನವರ ಮಾತನಾಡಿ ಪಂ. ದೀನದಯಾಳಜಿ ಉಪಾಧ್ಯಾಯರು ರಾಜಕೀಯ ಮುಖಂಡರು ಎನ್ನುವುದಕಿಂತ ಹೆಚ್ಚಾಗಿ ಓರ್ವ ತತ್ವಜ್ಞಾನಿ, ಮೇಧಾವಿ, ಅರ್ಥಶಾಸ್ತ್ರಜ್ಞ, ಕುಶಲ ಸಂಘಟಕ, ಪ್ರಭಾವಿ ವಕ್ತಾರ ಹಾಗೂ ಸಮರ್ಥ ಲೇಖಕ, ಅವರೊಬ್ಬ ಆದರ್ಶ ರಾಷ್ಟ್ರಸೇವಕ. ಜೀವನದ ಸರ್ವಸ್ವವನ್ನೂ ಸಮರ್ಪಿಸಿಕೊಂಡ ತಾಯ್ನೆಲದ ಉಪಾಸಕ, ಸ್ಪಟಿಕ ಶುಭ್ರ ಚಾರಿತ್ರ್ಯವುಳ್ಳ ಭಾರತಾಂಬೆಯ ಅನನ್ಯ ಆರಾಧಜ. ದೇಶ ಸೇವೆಗೆ ಬದ್ದರಾದ ಎಲ್ಲ ಪಕ್ಷ-ಪಂಗಡಗಳವರಿಗೂ ಅವರ ಜೀವರ ಮಾರ್ಗದರ್ಶಕ, ರಾಷ್ಟ್ರಸೇವೆಗೆ ಬದ್ದರಾದ ಯುವಜನಕ್ಕೆ ಅವರ ಮೇರು ಸದೃಶ ವ್ಯಕ್ತಿತ್ವದ ಮೇಲ್ಪಂಕ್ತಿ ಅವಶ್ಯಕ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ಸೌಭಾಗ್ಯಮ್ಮ ಹಿರೇಮಠ, ಜಿಲ್ಲಾ ಕಾರ್ಯದರ್ಶಿ ಡಾ. ಸಂತೋಷ ಆಲದಕಟ್ಟಿ, ಶ್ರೀಮತಿ ಲತಾ ಬಡ್ನಿಮಠ, ಜಿಲ್ಲಾ ವಕ್ತಾರರಾದ ಶ್ರೀ ಪ್ರಭು ಹಿಟ್ನಳ್ಳಿ, ಜಿಲ್ಲಾ ಓಬಿಸಿ ಮೋರ್ಚಾ ಅಧ್ಯಕ್ಷರಾದ ಶ್ರೀ ನೀಲಪ್ಪ ಚಾವಡಿ, ಜಿಲ್ಲಾ ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀ ಮಂಜುನಾಥ ಹುಲಗೂರ, ಜಿಲ್ಲಾ ಓಬಿಸಿ ಮೋರ್ಚಾ ಕಾರ್ಯದರ್ಶಿ ಶ್ರೀ ಗುಡ್ಡಪ್ಪ ಭರಡಿ, ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶ್ರೀ ವಿಜಯಕುಮಾರ ಚಿನ್ನಿಕಟ್ಟಿ, ಶ್ರೀಮತಿ ಚನ್ನಮ್ಮ ಬ್ಯಾಡಗಿ, ಶ್ರೀಮತಿ ಪೂರ್ಣಿಮಾ ಎಸ್. ಶಿವಯೋಗಿ ಹುಲಿಕಂತಿಮಠ, ಶ್ರೀ ಜಗದೀಶ ಕನವಳ್ಳಿ, ಶ್ರೀ ವಿಜಯಕುಮಾರ ಕುಡ್ಲಪ್ಪನವರ, ಶ್ರೀ ಅಡಿವಯ್ಯ ಯಲುಗಿಮಠ, ಶ್ರೀ ರಾಜು ದೊಡ್ಡಮನಿ ಮತ್ತು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಮಧುಗಿರಿ :** ಪಂ. ದೀನದಯಾಳ ಉಪಾಧ್ಯಾಯರ ಜನ್ಮದಿನವನ್ನು ಜಿಲ್ಲಾ ಕಾರ್ಯಾಲಯದಲ್ಲಿ ಆಚರಿಸಲಾಯಿತು. ಜಿಲ್ಲಾಧ್ಯಕ್ಷರಾದ ಶ್ರೀ ಬಿ.ಕೆ. ಮಂಜುನಾಥ್, ಮಧುಗಿರಿ ಮಂಡಲ ಅಧ್ಯಕ್ಷರಾದ ಶ್ರೀ ಪಿ.ಎಲ್. ನರಸಿಂಹಮೂರ್ತಿ, ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀ ನಾಗೇಂದ್ರಪ್ಪ, ಶ್ರೀ ಸೀತಾರಾಮು, ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷರಾದ ಶ್ರೀ ನಾಗರಾಜಪ್ಪ, ಜಿಲ್ಲಾ ಅಲ್ಪ ಸಂಖ್ಯಾತ ಮೋರ್ಚಾ ಅಧ್ಯಕ್ಷರಾದ ಶ್ರೀ ಇಮ್ತಿಯಾಜ್ ಪಾಷಾ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷರಾದ ಶ್ರೀಮತಿ ಲತಾ ಪ್ರದೀಪ್, ಮಂಡಲ ಯುವ ಮೋರ್ಚಾ ಅಧ್ಯಕ್ಷರಾದ ಶ್ರೀ ಕಾರ್ತಿಕ್ ಆರಾಧ್ಯ, ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷರಾದ ಶ್ರೀಮತಿ ರತ್ನ ವೆಂಕಟಪ್ಪ ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಪಡುಬಿದ್ರಿ:** ಅಪ್ರತಿಮ ಸಂಘಟಕ, ರಾಷ್ಟ್ರವಾದಿ ದಾರ್ಶನಿಕ, ಅಂತ್ಯೋದಯ ಪರಿಕಲ್ಪನೆಯ ಹರಿಕಾರರಾದ ಪಂ. ದೀನ ದಯಾಳ ಉಪಾಧ್ಯಾಯರ ಜನ್ಮ ದಿನಾಚರಣೆ ಕಾರ್ಯಕ್ರಮವು ಬಿಜೆಪಿ ಪಡುಬಿದ್ರಿ ಮಹಾಶಕ್ತಿ ಕೇಂದ್ರದ ವತಿಯಿಂದ ಪಡುಬಿದ್ರಿ ಶಕ್ತಿ ಕೇಂದ್ರದ ಅಧ್ಯಕ್ಷ ಶ್ರೀ ಶಿವಪ್ರಸಾದ್ ಎಲ್ಲದಡಿ ಅವರ ನಿವಾಸದಲ್ಲಿ ನಡೆಯಿತು.

ಸಂಸದೆ ಕು. ಶೋಭಾ ಕರಂದ್ಲಾಜೆ, ಕಾಪು ಕ್ಷೇತ್ರದ ಶಾಸಕರಾದ ಶ್ರೀ ಗುರ್ಮೆ ಸುರೇಶ್ ಶೆಟ್ಟಿ ಅವರು ಭಾಗವಹಿಸಿ ಪಂಡಿತ್ ದೀನದಯಾಳ್ ಉಪಾಧ್ಯಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು.



ಈ ಸಂದರ್ಭದಲ್ಲಿ ಕಾಪು ಮಂಡಲ ಬಿಜೆಪಿ ಅಧ್ಯಕ್ಷ ಶ್ರೀ ಶ್ರೀಕಾಂತ್ ನಾಯಕ್, ಉಡುಪಿ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ಪ್ರಕಾಶ್ ಶೆಟ್ಟಿ ಪಾದೆಬೆಟ್ಟು, ಶ್ರೀಮತಿ ಗೀತಾಂಜಲಿ , ಶ್ರೀಮತಿ ಎಂ. ಸುವರ್ಣ, ಪ್ರಧಾನ ಕಾರ್ಯದರ್ಶಿ ಶ್ರೀ ಕುತ್ಯಾರು ನವೀನ್ ಶೆಟ್ಟಿ, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಿಲ್ಪಾ ಜಿ. ಸುವರ್ಣ, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ಶ್ರೀಮತಿ ವೀಣಾ ಶೆಟ್ಟಿ, ಕಾಪು ಮಂಡಲ ಮಹಿಳಾ ಮೋರ್ಚಾದ ಅಧ್ಯಕ್ಷೆ ಶ್ರೀಮತಿ ಸುಮಾ ಶೆಟ್ಟಿ, ಉಡುಪಿ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ಶ್ರೀಮತಿ ಶೀಲಾ ಕೆ. ಶೆಟ್ಟಿ, ಪಡುಬಿದ್ರಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಶ್ರೀ ಶಿವಪ್ರಸಾದ್ ಎಲ್ಲದಡಿ, ಬೂತ್ ಸಂಖ್ಯೆ 180 ರ ಅಧ್ಯಕ್ಷ ಸೀರಜ್ ಹಾಗೂ ಭಾರತೀಯ ಜನತಾ ಪಾರ್ಟಿಯ ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.

**ಶಿವಮೊಗ್ಗ :** ಶಿವಮೊಗ್ಗ ನಗರದ 1 ನೇ ಮಹಾಶಕ್ತಿಕೇಂದ್ರದಲ್ಲಿ ಮಹಾನಗರಪಾಲಿಕೆ ಸದಸ್ಯರಾದ ಎಸ್.ಎನ್.ಚನ್ನಬಸಪ್ಪ ಇವರ ಕಾರ್ಯಾಲಯದಲ್ಲಿ ಪಂಡಿತ ದೀನದಯಾಳ ಉಪಾಧ್ಯಾಯರವರ ಜನ್ಮ ಜಯಂತಿಯನ್ನು ಭಾರತಮಾತೆ ಮತ್ತು ಪಂ. ದೀನದಯಾಳ ಉಪಾಧ್ಯಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಆಚರಿಸಲಾಯಿತು.



ಈ ಸಂದರ್ಭದಲ್ಲಿ ಮಹಾಶಕ್ತಿಕೇಂದ್ರದದ ಸಮಿತಿಯ ಸದಸ್ಯರು ಸೇರಿದಂತೆ ಪ್ರಮುಖರಾದ ಶ್ರೀ ಸಿ.ಹೆಚ್. ಮಾಲತೇಶ್, ಶ್ರೀ ಕೆ.ಟಿ. ಶ್ರೀನಿವಾಸ ರಾವ್, ಶ್ರೀ ದಿನೇಶ್ ಎನ್.ಎಲ್., ಶ್ರೀ ರುದ್ರಪ್ಪ, ಶ್ರೀ ನಂಜುಂಡಪ್ಪ, ಶ್ರೀ ಮಲ್ಲಿಕಾರ್ಜುನ, ಶ್ರೀ ಮಂಜುನಾಥ್ ಹಾಗೂ ಶ್ರೀ ನಾಯಕ್ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಸಾಗರ ನಗರ ಮಂಡಲ :** ಸಾಗರ ನಗರ ಮಂಡಲದ 6ನೇ ವಾರ್ಡಿನಲ್ಲಿ ಅಪ್ರತಿಮ ಸಂಘಟಕ, ರಾಷ್ಟ್ರವಾದಿ ದಾರ್ಶನಿಕ ಮಾರ್ಗದರ್ಶಕರಾದ ಪಂ. ದೀನದಯಾಳ್ ಉಪಾಧ್ಯಾಯ ಅವರ ಜನ್ಮ ದಿನಾಚರಣೆಯನ್ನು ಆಚರಿಸಿಲಾಯಿತು.



ಇದೇ ಸಂದರ್ಭದಲ್ಲಿ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು. ಕಾರ್ಯಕ್ರಮದಲ್ಲಿ ನಗರ ಬಿಜೆಪಿ ಉಪಾಧ್ಯಕ್ಷ ಶ್ರೀ ಕುಮಾರ್ , ಶಕ್ತಿಕೇಂದ್ರ ಪ್ರಮುಖರಾದ ಶ್ರೀ ದೀಪಕ್ ಮಾರೂರು, ರೈತ ಮೋರ್ಚಾದ ಪ್ರಧಾನಕಾರ್ಯದರ್ಶಿ ಶ್ರೀ ಮಂಜುನಾಥ್ ಭಟ್, ಬಿಜೆಪಿ ಯುವಮೋರ್ಚಾ ಸದಸ್ಯರಾದ ಶ್ರೀ ಸಂತೋಷ್ , ಶ್ರೀಮತಿ ಭಾರತೀ, ಶ್ರೀ ಕೆ,ರಾಘವೇಂದ್ರ, ಶ್ರೀಮತಿ ಶಾಮಿಲಿ, ಶ್ರೀ ಸುದೀರ್ ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ‘ಮಾಸದ ಮಾಧುರ್ಯ’ 78ನೇ ಕಾರ್ಯಕ್ರಮದಲ್ಲಿ

# ‘ಶರಸೇತು ಬಂಧನ’ ಹಾಗೂ ‘ಗಾನ ನಾಟ್ಯ ವೈಭವ’



ಬಡುಗು ತಿಟ್ಟಿನ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ‘ಶರಸೇತು ಬಂಧನ’ ಮತ್ತು ‘ಗಾನ ನಾಟ್ಯ ವೈಭವ’ ಯಕ್ಷಗಾನ ಪ್ರಸಂಗವನ್ನು ದಿ. 01-10-2023ರಂದು ಬೆಂಗಳೂರು ಮಲ್ಲೇಶ್ವರ, ಜಗನ್ನಾಥ ಭವನದ ಮಂಥನ ಸಭಾಂಗಣದಲ್ಲಿ ಆಯೋಜಿಸಲ್ಪಟ್ಟಿತ್ತು. ವಿಧಾನ ಪರಿಷತ್ ಸದಸ್ಯರು, ಮಾಜಿ ಮಂತ್ರಿಗಳೂ ಆದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿಯವರ ನೇತೃತ್ವದಲ್ಲಿ ಕಿಕ್ಕಿರಿದು ತುಂಬಿದ ಸಭಾ ಮಂಟಪದಲ್ಲಿ ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು.

ಮುಖ್ಯವಾಗಿ ಯಕ್ಷಗಾನ ಪ್ರಿಯರಾದ ಹಾಗೂ ಸ್ವತಃ ಕಲಾವಿದರಾದ ಬೈಂದೂರು, ದಕ್ಷಿಣ ಕನ್ನಡ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ 85 ವರ್ಷದ ಶ್ರೀ ಲಕ್ಷ್ಮೀನಾರಾಯಣ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಭಾರತ ಮಾತೆಗೆ ಪುಷ್ಪಾರ್ಚನೆ ನಂತರ ಮಾತನಾಡಿದ ಶ್ರೀ ಲಕ್ಷ್ಮೀ ನಾರಾಯಣ ಅವರು ನನ್ನಂತವನಿಗೂ ಹೊಸ ಹುರುಪನ್ನು ಕೊಡುವ ಶಕ್ತಿಯನ್ನು ಯಕ್ಷಗಾನ ಕಲಿಸಿದೆ. ಇದೊಂದು ಪರಿಪೂರ್ಣ ಕಲಾಪ್ರಕಾರ. ಈ ಕಲೆ ತನ್ನ ಮೂಲ ಸ್ವರೂಪವನ್ನು ಹಾಳು ಮಾಡಿಕೊಳ್ಳದೆ ಮುಂದುವರಿಯಬೇಕು. ಇಂದು ಹೊಸ ಹೊಸ ಯುವ ಪ್ರತಿಭೆಗಳು ನಾಡಿನಾದ್ಯಂತ ವಿಜೃಂಭಿಸುತ್ತಿರುವುದು ಸಂತೋಷದ ಸಂಗತಿ ಎಂದು ಹೇಳಿದರು. ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಹಾಗೂ ಶ್ರೀ ಛಲವಾದಿ ನಾರಾಯಣ ಸ್ವಾಮಿ ಅವರು ಮುಖ್ಯ ಅತಿಥಿಯವರನ್ನು ಸನ್ಮಾನಿಸಿದರು.

ಹಿಮ್ಮೇಳದಲ್ಲಿ ಶ್ರೀ ರಾಮಕೃಷ್ಣ ಹೆಗಡೆ ಹಿಲ್ಲೂರು ಹಾಗೂ ಶ್ರೀ ಪ್ರಸನ್ನ ಭಟ್ ಬಾಳ್ಕರ್ ಅವರುಗಳ ಶ್ರೀಮಂತ ಕಂಠದ ಭಾಗವತಿಕೆಯಲ್ಲಿ ಅತ್ಯಂತ ಸಮರ್ಥವಾಗಿ ಹನುಮಂತನ ಪಾತ್ರವನ್ನು ಶ್ರೀ ಗಣಪತಿ ನಾಯ್ಕ ಕುಮಟಾ ಅವರು ಪ್ರಸ್ತುತ ಪಡಿಸಿದರು.



ಅರ್ಜುನನ ಪಾತ್ರದಲ್ಲಿ ಶ್ರೀ ಈಶ್ವರ ನಾಯ್ಕ ಮಂಕಿ, ಬ್ರಾಹ್ಮಣನ ಪಾತ್ರದಲ್ಲಿ ಶ್ರೀ ರಮೇಶ ಭಂಡಾರಿ, ಶ್ರೀರಾಮನ ಪಾತ್ರದಲ್ಲಿ ಶ್ರೀ ಕಾರ್ತಿಕ್ ಕಣ್ಣಿ ಅವರು ಆಗಮಿಸಿದ್ದ ಕಲಾಸಕ್ತರ ಮನಸೂರೆಗೊಂಡರು.

‘ಗಾನ ನಾಟ್ಯ ವೈಭವ’ ಕಾರ್ಯಕ್ರಮವು ನಿಜವಾಗಿಯೂ ರಂಜನೀಯವಾಗಿತ್ತು. ಶ್ರೀ ಶಂಕರ ಹೆಗಡೆ ನೀಲ್ಕೂಡ್, ಶ್ರೀ ಪ್ರಸನ್ನ ಶೆಟ್ಟಿಗಾರ್ ಮಂದರ್ತಿ, ಶ್ರೀ ಸಂತೋಷ ಹಿರಿಯಾಣ ಇವರೆಲ್ಲರ ಕಲಾ ಪ್ರತಿಭೆಯ ಅನಾವರಣವಾಯಿತು. ಶ್ರೀ ಶ್ರೀನಿವಾಸ ಪ್ರಭು, ಶ್ರೀ ಸುಜನಕುಮಾರ ಹಾಲಾಡಿ ಚಂಡೆಯಲ್ಲಿ ಶ್ರೀ ಪರಮೇಶ್ವರ ಭಂಡಾರಿ ಕರ್ಕಿ, ಶ್ರೀ ನಾಗರಾಜ ಭಂಡಾರಿ ಹಿರೇಬೈಲ್ ಮದ್ದಲೆಯಲ್ಲಿದ್ದರು.

ಕಾರ್ಯಕ್ರಮ ಸಂಪನ್ನಗೊಳ್ಳುವವರೆಗೂ ಆಗಮಿಸಿದ್ದ ಎಲ್ಲಾ ಕಲಾಭಿಮಾನಿಗಳೂ ಕಲಾವಿದರನ್ನು ಪ್ರೋತ್ಸಾಹಿಸಿದರು. ಶ್ರೀ ಅ. ದೇವೇಗೌಡ, ವಿಧಾನ ಪರಿಷತ್ ಸದಸ್ಯರು, ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆ, ಕಾರ್ಯಾಲಯದ ಲೆಕ್ಕ-ಪತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಮೂಡಲಗಿರಿರವರು ಹಾಗೂ ಅವರ ಕುಟುಂಬದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# 105 ಮನ್ ಕಿ ಬಾತ್

# ಚಂದ್ರಯಾನ, ಜಿ-20 ನಂತರ ಭಾರತದಲ್ಲಿ ಸಂತಸ ಇಮ್ಮಡಿ

ಪ್ರಧಾನಿ ನರೇಂದ್ರ ಮೋದಿ ಅವರು 105ನೇ ಸಂಚಿಕೆಯ 'ಮನ್ ಕಿ ಬಾತ್'ನಲ್ಲಿ ಕರ್ನಾಟಕದ ಹೊಯ್ಸಳ ಶೈಲಿಯ 3 ಶಿಲ್ಪಕಲಾ ದೇಗುಲಗಳು, ಇಸ್ರೋ ಸಾಧನೆ, ಜಿ-20 ಯಶಸ್ಸು, ಭಾರತದ ನಾಯಕತ್ವ, ಭಾರತ- ಮಧ್ಯ ಪ್ರಾಚ್ಯ- ಯುರೋಪ್ ಕಾರಿಡಾರ್, ಪುಸ್ತಕಗಳ ಮಹತ್ವ ಪ್ರಸ್ತಾಪಿಸಿ ಭಾರತದಲ್ಲಿ ತಯಾರಾದ ಉತ್ಪನ್ನಗಳನ್ನೇ ಹೆಚ್ಚು ಖರೀದಿಸಬೇಕೆಂದು ಕರೆ ನೀಡಿದರು.

ಚಂದ್ರಯಾನ-3 ಉಡಾವಣೆ ಪ್ರಕ್ರಿಯೆಯನ್ನು 80 ಲಕ್ಷಕ್ಕೂ ಹೆಚ್ಚು ಜನರು ಇಸ್ರೋದ ಯೂಟ್ಯೂಬ್ ಲೈವ್ ಚಾನೆಲ್‌ನಲ್ಲಿ ನೇರ ವೀಕ್ಷಿಸಿದ್ದು, ಹೊಸ ದಾಖಲೆಯಾಗಿದೆ. ಲ್ಯಾಂಡರ್ ಚಂದ್ರನ ಮೇಲೆ ಇಳಿಯುವ ಕ್ಷಣವನ್ನಂತೂ ಕೋಟಿಗಟ್ಟಲೆ ಜನರು ವಿವಿಧ ಮಾಧ್ಯಮಗಳ ಮೂಲಕ ಏಕಕಾಲದಲ್ಲಿ ವೀಕ್ಷಿಸಿ ಪ್ರತೀ ಕ್ಷಣವನ್ನು ಸಂಭ್ರಮಿಸಿದ್ದಾರೆ. ಚಂದ್ರಯಾನ ಯೋಜನೆಗೆ ಭಾರತೀಯರು ಎಷ್ಟು ತೀವ್ರವಾಗಿ ಜೋಡಿಸಿಕೊಂಡಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ ಎಂದು ಹೇಳಿದರು.

ಜಿ-20 ಶೃಂಗಸಭೆ ಯಶಸ್ಸು ಕೂಡಾ ಪ್ರತಿ ಭಾರತೀಯನ ಸಂತಸವನ್ನು ಇಮ್ಮಡಿಗೊಳಿಸಿದೆ. ಶೃಂಗಸಭೆ ಸಂದರ್ಭದಲ್ಲಿ ದೆಹಲಿಯ ಭಾರತ ಮಂಟಪಂ ಸೆಲೆಬ್ರಿಟಿಯಂತಾಗಿತ್ತು. ಜನರು ಅಲ್ಲಿ ಈಗಲೂ ಸೆಲ್ಫಿ ತೆಗೆದುಕೊಳ್ಳುತ್ತಿದ್ದಾರೆ ಹಾಗೂ ಹೆಮ್ಮೆಯಿಂದ ಆತ್ಮೀಯರೊಂದಿಗೆ ಹಂಚಿಕೊಳ್ಳುತ್ತಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಆಫ್ರಿಕಾ ಒಕ್ಕೂಟವನ್ನು ಜಿ-20 ಒಕ್ಕೂಟದ ಪೂರ್ಣ ಸದಸ್ಯನಾಗಿ ಮಾಡುವುದಕ್ಕೆ ಭಾರತ ಬಹಳ ಮುತುವರ್ಜಿವಹಿಸುವ ಮೂಲಕ ನಾಯಕತ್ವದ ಗರಿಮೆಯನ್ನು ಸಾಬೀತುಪಡಿಸಿದೆ ಎಂದು ಸಂತೋಷ ವ್ಯಕ್ತಪಡಿಸಿದರು.

ಭಾರತ-ಮಧ್ಯಪ್ರಾಚ್ಯ-ಯುರೋಪ್ ಸಂಪರ್ಕಿಸುವ 'ಆರ್ಥಿಕ ಕಾರಿಡಾರ್' ನೂರಾರು ವರ್ಷಗಳವರೆಗೆ ವಿಶ್ವ ವ್ಯಾಪಾರದ ಆಧಾರವಾಗಲಿದೆ.

ಐಐಟಿ, ಎನ್‌ಐಟಿ ಮತ್ತು ವೈದ್ಯಕೀಯ ಕಾಲೇಜುಗಳಂತಹ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳು ಜಿ-20 ವಿವಿ ಕನೆಕ್ಟ್ ಕಾರ್ಯಕ್ರಮದಲ್ಲಿ ಭಾಗವಹಿಸಲಿವೆ. ಈ ಕಾರ್ಯಕ್ರಮದಲ್ಲಿ ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಕರೆ ನೀಡಿದ್ದಾರೆ.

ಕರ್ನಾಟಕದ ಹೊಯ್ಸಳ ದೇವಾಲಯಗಳು, ಗುರುದೇವ್ ರವೀಂದ್ರನಾಥ ಠಾಗೋರ ಶಾಂತಿನಿಕೇತನ ವಿಶ್ವ ಪರಂಪರೆ ತಾಣಗಳೆಂದು ಘೋಷಿಸಲಾಗಿದೆ. ಇದು ದೇಶಕ್ಕೆ ಅಪಾರ ಹೆಮ್ಮೆಯ ವಿಷಯವಾಗಿದೆ. ವಿಶ್ವ ಪ್ರವಾಸೋದ್ಯಮ ದಿನವಾದ ಸೆಪ್ಟೆಂಬರ್ 27 ರಂದು ಭಾರತದೆಡೆಗಿನ ಪ್ರವಾಸಿ ಪ್ರಿಯರ ಆಕರ್ಷಣೆ ಇನ್ನಷ್ಟು ಹೆಚ್ಚಾಗಲಿದ್ದು ಜಿ-20 ಸಂದರ್ಭದಲ್ಲಿ ಲಕ್ಷಕ್ಕೂ ಹೆಚ್ಚು ಪ್ರತಿನಿಧಿಗಳು ಭಾರತಕ್ಕೆ ಭೇಟಿ ನೀಡಿ ಭಾರತದ ವೈವಿಧ್ಯತೆ, ವಿಭಿನ್ನ ಸಂಪ್ರದಾಯ, ವಿವಿಧ ರೀತಿಯ ಪಾಕಪದ್ಧತಿ ಮತ್ತು ಪರಂಪರೆಗಳ ಪರಿಚಯವನ್ನು ತಮ್ಮ ದೇಶಗಳಿಗೆ ಕೊಂಡೊಯ್ದಿದ್ದಾರೆ ಎಂದು ಶ್ಲಾಘಿಸಿದರು.

ಉತ್ತರಾಖಂಡದ 'ಘೋಡಾ ಗ್ರಂಥಾಲಯ'ದ ಪ್ರಯತ್ನವನ್ನು ಉಲ್ಲೇಖಿಸಿ ಈ ಗ್ರಂಥಾಲಯದ ದೊಡ್ಡ ವೈಶಿಷ್ಟ್ಯವೆಂದರೆ ದೂರದ ಪ್ರದೇಶಗಳ ಮಕ್ಕಳನ್ನು ತಲುಪುವುದು ಪ್ರಶಂಸಾರ್ಹ ಎಂದು ತಿಳಿಸಿದರು. ಇದರ ಸೇವೆ ಪೂರ್ಣ ಉಚಿತವಾಗಿದ್ದು, ಈವರೆಗೆ ನೈನಿತಾಲ್‌ನ 12 ಹಳ್ಳಿಗಳು ಸಹ ಈ ಸೌಲಭ್ಯವನ್ನು ಪಡೆದುಕೊಳ್ಳುತ್ತಿವೆ ಎಂದು ತಿಳಿಸಿದರು. ಇಂದಿನ ಯುಗ ಡಿಜಿಟಲ್ ತಂತ್ರಜ್ಞಾನ ಮತ್ತು ಇ-ಪುಸ್ತಕದ್ದಾಗಿದೆ ಎಂಬುದು ನಿಜ. ಆದರೆ ಪುಸ್ತಕಗಳು ಸದಾ ನಮ್ಮ ಜೀವನದಲ್ಲಿ ಉತ್ತಮ ಸ್ನೇಹಿತನ ಪಾತ್ರ ನಿರ್ವಹಿಸುತ್ತವೆ. ಆದ್ದರಿಂದ ಪುಸ್ತಕಗಳನ್ನು ಓದುವಂತೆ ಮಕ್ಕಳಿಗೆ ಪೋಷಕರು ಪ್ರೇರೇಪಿಸಬೇಕು ಎಂದು ಹೇಳಿದರು.

ಹಬ್ಬದ ಸಂದರ್ಭಗಳಲ್ಲಿ 'ಭಾರತದಲ್ಲೇ ತಯಾರಾದ' ಉತ್ಪನ್ನಗಳನ್ನು ಮಾತ್ರ ಖರೀದಿಸಿ, ಬಳಸಿ ಮತ್ತು ಉಡುಗೊರೆ ನೀಡಬೇಕೆಂದು ಕರೆ ನೀಡಿದರು.

ವನ್ಯ ಮೃಗಗಳ ಕುರಿತು ಮಾತನಾಡುತ್ತಾ ಕೆಲವು ವರ್ಷಗಳಲ್ಲಿ ಭಾರತದಲ್ಲಿ ಸಿಂಹ, ಹುಲಿ, ಚಿರತೆ ಮತ್ತು ಆನೆಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿದೆ ಎಂದು ತಿಳಿಸಿದರು.

# ಇಸ್ರೇಲ್ ಕದನದ ಪ್ರೇರಣಾದಾಯಿ ಸಂಗತಿಗಳು



ಹಮಾಸ್ ದಾಳಿಯ ನಡುವೆಯೂ ಇಸ್ರೇಲಿನಿಂದ
ಭಾರತಕ್ಕೆ ಬರಲು ಒಪ್ಪದ ನರ್ಸ್ ಪ್ರಮಿಳಾ ಪ್ರಭು
ಅನ್ನ ಕೊಟ್ಟ ದೇಶದ ಸಂಕಷ್ಟದ ಸಮಯದಲ್ಲಿ ಅದರ ಋಣ
ತೀರಿಸಲು ಅಲ್ಲಿಯೇ ಉಳಿದು ಸೇವೆ ಮಾಡಲು ನಿರ್ಧಾರ
ಇದೇ ಭಾರತೀಯರ ಡಿಎನ್ಎ,
ನಂಬಿಕೆಗೆ ಇನ್ನೊಂದು ಹೆಸರು ಭಾರತ




ಇಸ್ರೇಲ್ ಯುದ್ಧ ಭೂಮಿಯಲ್ಲಿ ಇಸ್ರೇಲ್‌ನ ನಿಕಟಪೂರ್ವ ಪ್ರಧಾನಿ ನೆಫ್ತಾಲಿ ಬೆನೆಟ್



ಇಸ್ರೇಲ್ ಸೈನ್ಯದಲ್ಲಿ ಕಮಾಂಡೋಗಳಾಗಿ ಗುಜರಾತಿ ಸಹೋದರಿಯರು ರಿಯಾ ಹಾಗೂ ನಿಶಾ!
ನನ್ನ ಹಿರಿಮಗಳು ನಿಶಾ ದಿನದ 18 ಗಂಟೆ ಸೈನ್ಯದಲ್ಲಿ ಕೆಲಸ ಮಾಡುತ್ತಾಳೆ.
ಇಸ್ರೇಲಿಗಳನ್ನು ರಕ್ಷಿಸುತ್ತಿರುವ ಮಗಳ ಬಗ್ಗೆ ನನಗೆ ತುಂಬಾ ಹೆಮ್ಮೆಯಿದೆ ಎಂದು
ತಂದೆ ಜೀವಭಾಯಿ ಮೂಲ್ಯಾಸಿಯ ಹೆಮ್ಮೆ



95ರ ಹರೆಯದ ಎಜ್ರಾ ಯಾಚಿನ್ ಇಸ್ರೇನ್‌ನ ಐಡಿಎಫ್‌ನ
ಅತ್ಯಂತ ಹಳೆಯ ಮೀಸಲು ದಳದ ಸೈನಿಕ. ಆತನನ್ನು
ಪ್ರಸ್ತುತ ಸೈನಿಕರೊಂದಿಗೆ ಮಾತನಾಡಿ, ಅವರ
ಆತ್ಮಸ್ಥೈರ್ಯವನ್ನು ಹೆಚ್ಚಿಸಲು ಮೀಸಲು ಪ್ರದೇಶಕ್ಕೆ
ನಿಯೋಜಿಸಲಾಗಿದೆ. ಗಲಭೆಗಳು ಮತ್ತು ಗೊಂದಲಗಳ
ದೃಶ್ಯಗಳಿಂದ ಗುರುತಿಸಲ್ಪಟ್ಟಂತಹ ಜೆರುಸ್ಲೇಮ್‌ನಲ್ಲಿ
ಅವರು ತಮ್ಮ ಕಠಿಣವಾದ ಬಾಲ್ಯವನ್ನು
ಸಹಿಸಿಕೊಂಡಿದ್ದರೂ ಅವರು ಮತ್ತು ಅವರ ಸ್ನೇಹಿತರು
ಇಸ್ರೇಲ್ ರಾಷ್ಟ್ರವನ್ನು ಸ್ಥಾಪಿಸುವಲ್ಲಿ ಪಾತ್ರ ವಹಿಸಿದ್ದಾರೆ.



ನನ್ನನ್ನು ನನ್ನ ದೇಶ ಇಸ್ರೇಲ್‌ಗೆ
ಇಂತಹ ಸಂದಿಗ್ಧತೆಯಲ್ಲಿ ಸೇವೆ
ಸಲ್ಲಿಸಿ, ಗೆಲ್ಲಿಸಲು
ನಿಯೋಜಿಸಲಾಗಿದೆ. ಹಾಗಾಗಿ ನಾನು
ನನ್ನ ಅರ್ಧಾಂಗಿ
(ಭಾರತೀಯ)ಯಿಂದ ತುಸುಕಾಲ
ದೂರಾಗುತ್ತಾ ಇದ್ದೇನೆ. ಅವಳು
ನನ್ನನ್ನು ದೇವರ ಆಶೀರ್ವಾದ ಮತ್ತು
ರಕ್ಷಣೆಯ ನಂಬಿಕೆಯ ಮೇರೆಗೆ
ಬೀಳ್ಕೊಡುತ್ತಿದ್ದಾ।ಎ ಇನ್ನುಮುಂದೆ
ಅವಳೇ ನನ್ನ ಸಾಮಾಜಿಕ
ಜಾಲತಾಣದ ಜವಾಬ್ದಾರಿ ಹೊತ್ತು
ನೆಡೆಸುತ್ತಾಳೆ. ಅವಳಿಗೆ ನಿಮ್ಮ ಪ್ರೀತಿ
ಹಾಗೂ ಅಕ್ಕರೆ ಇರಲಿ!!

– ಹೆನನ್ಯಾ ನೆಫ್ತಾಲಿ



ಕಾಲೇ ವರ್ಷಂತು ಪರ್ಜನ್ಯಃ



# ಮಾನವೀಯತೆ ಮತ್ತು ತಾಳ್ಮೆ

**ಈ** ರೀತಿ ಫೋಟೋಗಳು ಭಾರತೀಯರನ್ನು ಮರುಳು ಮಾಡಲು ಬೇಕಾದಷ್ಟಿವೆ. ಮಾನವೀಯತೆಯಿಂದ ಆಶ್ರಯಕೊಡಲು ಮುಂದಾಗಿರುವುದು ಶತಮಾನಗಳಿಂದ ನಡೆಯುತ್ತಿರುವ ಒಂದು ಷಡ್ಯಂತ್ರ. ಎಲ್ಲಾ ಸಮಯದಲ್ಲಿ ಮಾನವೀಯತೆ,ತಾಳ್ಮೆ ದೇಶಕ್ಕೆ ಮಾರಕ. ಹಿಂದೆ ಅಲ್ಲಾವುದ್ದೀನ್ ಖಿಲ್ಜಿಯಿಂದ ಮಾನ ಉಳಿಸಿಕೊಳ್ಳಲು 14 ಸಾವಿರ ರಜಪೂತ ಮಹಿಳೆಯರು ಸತಿಸಹಗಮನ ಮಾಡಿಕೊಂಡದ್ದು,10ವರ್ಷದ ಬ್ರಾಹ್ಮಣ ಬಾಲಕಿಯನ್ನು ಆಸ್ಥಾನದಲ್ಲಿ ಎಲ್ಲರೆದುರು ಅತ್ಯಾಚಾರ ಮಾಡಿದ್ದು ಶಹಾಜನ್, ಪೃಥ್ವಿರಾಜನ ಆಸ್ಥಾನಕ್ಕೆ ಸೂಫಿ ವೇಷಧಾರಿಯಾಗಿ ಬಂದು ಪೃಥ್ವಿರಾಜನನ್ನು ಸೋಲಿಸಿ ಅವನ ಹೆಂಡತಿ ಸಂಯೋಗೀತಾಳನ್ನು ಅತ್ಯಾಚಾರ ಮಾಡಿದ್ದು ಮೊಯಿದುದ್ದೀನ್ ಛಿಸ್ತಿ, ಇಸ್ಲಾಂ ಧರ್ಮ ಸ್ವೀಕರಿಸದ ಕಾರಣಕ್ಕೆ ಶಿವಾಜಿಯ ಮಗ ಸಂಬಾಜಿಯ ನಾಲಗೆ ಕತ್ತರಿಸಿ ಬಿಸಿ ಕಬ್ಬಿಣದ ಸಲಾಕೆಯಿಂದ ಕಣ್ಣು ಕಿತ್ತುಹಾಕಿಸಿದ್ದು ಔರಂಗಜೇಬ್, 70ರ ಹರೆಯದ ಹೆಮುವಿನ ತಂದೆಯನ್ನು ಧರ್ಮಪರಿವರ್ತನೆ ಮಾಡಲಾಗದಾಗ ಅವನ ರುಂಡದಿಂದ ಚೆಂಡಾಟ ಆಡಿದ್ದು ಅಕ್ಬರ್, ಸಿಖ್ಖರ ಗುರುಗೋವಿಂದ್ ಸಿಂಗರ 5 ಮತ್ತು 7 ವರ್ಷ ಪ್ರಾಯದ ಎರಡು ಮಕ್ಕಳನ್ನು ಜೀವಂತ ಸಮಾಧಿ ಮಾಡಿದ್ದು ಬಾಜಿಖಾನ್, ಜ್ವಾಲಾಮುಖಿ ಮಂದಿರದಲ್ಲಿ ದುರ್ಗೆಯ ಪ್ರತಿಮೆ ಕೆಡವಿ ದನದ ಮಾಂಸ ಗರ್ಭಗುಡಿಯಲ್ಲಿ ಹಾಕಿದ್ದು, ಟಿಪ್ಪು ಸುಲ್ತಾನ್ ಮೋಸದಿಂದ ಅಧಿಕಾರ ಪಡೆದು ಬಲತ್ಕಾರದಲ್ಲಿ ಹಿಂದೂಗಳನ್ನು ಇಸ್ಲಾಂ ಧರ್ಮಕ್ಕೆ ಪರಿವರ್ತಿಸಿದ್ದು, ಪ್ರಭು ಶ್ರೀರಾಮಚಂದ್ರನ ಜನ್ಮಭೂಮಿ ಅಯೋಧ್ಯೆಯಲ್ಲಿನ ರಾಮ ಮಂದಿರ ಕೆಡವಿ ಬಾಬರ್ ಮಸೀದಿ ಕಟ್ಟಿದಾಗ, ರಾಮಸೇತುವನ್ನು ಕೆಡವಲು ಕಾಂಗ್ರೆಸ್ ಸರ್ಕಾರ ಕಮಿಟಿ ಮಾಡಿದಾಗ,ರಸ್ತೆಯ ಬದಿಯಲ್ಲಿ ಮುತ್ತು ರತ್ನ ವಜ್ರ ಚಿನ್ನ ಮುಂತಾದ ಬೆಲೆಬಾಳುವ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾಗ ಬಿಜಾಪುರದ ಸುಲ್ತಾನ ಬಂದು ಅದನ್ನೆಲ್ಲಾ ಕೊಳ್ಳೆಹೊಡೆದಾಗ, ಸೋಮನಾಥ ದೇವಾಲಯ,ಬೇಲೂರು ಹಳೇಬೀಡು,ಹಂಪಿಯನ್ನು ನಾಶ ಮಾಡಿದಾಗ, 700ವರ್ಷ ನಮ್ಮನ್ನು ಸತತವಾಗಿ ದೋಚಿ, 50ಸಾವಿರಕ್ಕೂ ಹೆಚ್ಚು ದೇವಸ್ಥಾನಗಳನ್ನು ಮಸೀದಿಯಾಗಿ ಪರಿವರ್ತಿಸಿದಾಗ... ನಾವು ಸುಮ್ಮನಿದ್ದೆವು.

ದೇಶ ವಿಭಜನೆಯ ನಂತರ ಪಾಕಿಸ್ತಾನದಿಂದ ಹಿಂದೂಗಳನ್ನು ಓಡಿಸಿ ಅದನ್ನು ಮುಸ್ಲಿಂ ರಾಷ್ಟ್ರ ಎಂದು ಘೋಷಣೆ ಮಾಡಿದರು. ಆದರೆ ನಾವು ಯಾರನ್ನೂ ಓಡಿಸಲಿಲ್ಲ, ಎಲ್ಲಾ ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಗೆ ಆಶ್ರಯಕೊಟ್ಟು ಜಾತ್ಯತೀತ ರಾಷ್ಟ್ರ ಎಂದು ಘೋಷಣೆ ಮಾಡಿ ಭಾರತಮಾತೆಗೆ ತಿರಂಗ ಕೊಟ್ಟೆವು. ಕಾಶ್ಮೀರಿ ಪಂಡಿತರನ್ನು ಓಡಿಸಿ, ಕಾಶ್ಮೀರಕ್ಕೆ 370ರ ವಿಧಿ ಪ್ರಕಾರ ಪ್ರತ್ಯೇಕವಾಗಿ ವಿಶೇಷ ಸ್ಥಾನಮಾನ ಕೇಳಿದಾಗಲೂ ನಾವು ಸುಮ್ಮನಿದ್ದೆವು. ಪ್ರತಿಸಲ ಯುದ್ಧದಲ್ಲಿ ಸೋತದ್ದು ಪಾಕಿಸ್ತಾನವಾದರೂ ಅವರ ಸೈನಿಕರ ಶವಸಂಸ್ಕಾರ ಮಾಡಿದ್ದು ನಾವೇ,90ಸಾವಿರ ಶರಣಾದ ಸೈನಿಕರನ್ನು ಮರಳಿ ಪಾಕಿಸ್ತಾನಕ್ಕೆ ಒಪ್ಪಿಸಿ, ಲಾಹೋರ್ ಒಪ್ಪಂದ ಮಾಡಿಕೊಂಡು ಶಾಂತಿಯನ್ನು ಪ್ರತಿಪಾದಿಸಿದೆವು. ಸಂವಿಧಾನದಲ್ಲಿ ಪ್ರತ್ಯೇಕ ಕಾನೂನು,ಮಿಸಾಲಾತಿ ಕೇಳಿದಾಗ, ಎಲ್ಲಾ ರಾಷ್ಟ್ರದಲ್ಲಿರುವುದಕ್ಕಿಂತ 2ಪಟ್ಟು ಹೆಚ್ಚು ಮಸೀದಿ ನಮ್ಮಲ್ಲಿ ಕಟ್ಟಿದಾಗ, ಗಣೇಶ ಚತುರ್ಥಿಯ ಶೋಭಾಯಾತ್ರೆ ನಿಮ್ಮ ಮನೆಪಕ್ಕದಿಂದ ಹೋದರೆ ತೊಂದರೆ ಎಂದಾಗ, ಅಮರಜವಾನ ಜ್ಯೋತಿ ಮೆಟ್ಟಿ ಪಾವಿತ್ರ್ಯತೆಗೆ ಧಕ್ಕೆ ತಂದಾಗ, ವಿಶ್ವವಿದ್ಯಾನಿಲಯ ದೇಶವಿರೋಧಿ ಚಟುವಟಿಕೆಯಲ್ಲಿ ತೊಡಗಿ ಅಫ್ಜಲ್‌ಗುರುವನ್ನು ಹುತಾತ್ಮ, ಭಗತ್ ಸಿಂಗ್‌ನನ್ನು ಭಯೋತ್ಪಾದಕ ಎಂದು ಕರೆದಾಗ, ಪ್ರಮುಖ ನಗರಗಳ ಹೆಸರು ಆ ಬಾದ್ ಈ ಬಾದ್ ಎಂದು ಬದಲಿಸಿದಾಗ, ಅಸಾದುದ್ದೀನ್ ಓವೈಸಿ 10 ನಿಮಿಷ ಭದ್ರತೆ ತೆಗೆಯಿರಿ ನಾವು ಹಿಂದುಗಳನ್ನು ದೇಶ ಪೂರ್ತಿ ಕೊಂದು ಹಾಕುತ್ತೇವೆ, ಕರ್ನಾಟಕದಲ್ಲಿ ಸಿದ್ದು ಶಾದಿಭಾಗ್ಯಾ ಯೋಜನೆಯಡಿ ಹಾಸಿಗೆ ದಿಂಬು ಕೊಟ್ಟಾಗ, ಕೇರಳ ಕರ್ನಾಟಕ,ಬಂಗಾಳ, ಪಂಜಾಬಲ್ಲಿ ಹಿಂದುತ್ವವನ್ನು ತೆಗಲಿ ಕಾರ್ಯಕರ್ತರನ್ನು ಹತ್ಯೆ ಮಾಡಿದಾಗ, ಪೂಜನಿಯ ಗೋಮಾತೆಯನ್ನು ನಡು ಬೀದಿಯಲ್ಲಿ ಕತ್ತರಿಸಿ ಕೇರಳದ ಕಾಂಗ್ರೆಸ್ ಕಾರ್ಯಕರ್ತರು ಸಾರು ಮಾಡಿ ಕುಡಿದಾಗ, ಹೆಣ್ಣುಮಕ್ಕಳನ್ನು ಬಲವಂತವಾಗಿ ಜಿಹಾದ್ ಮೃತ್ಯುಕೂಪಕ್ಕೆ ಎಳೆದಾಗ, ಇಟಲಿಯಿಂದ ಅರಬೋಗಟ್ಟಲೆ ದುಡ್ಡು ತರಿಸಿಕೊಂಡು ಇಲ್ಲಿನ ಹಿಂದುಗಳನ್ನ ಕ್ರಿಶ್ಚಿಯನ್ನರಾಗಿ ಮತಾಂತರಿಸುವಾಗ, ವೋಟಬ್ಯಾಂಕಿಗಾಗಿ ಬಾಂಗ್ಲಾದೇಶದ ಮುಸಲ್ಮಾನರನ್ನ ಅಕ್ರಮವಾಗಿ ಪಶ್ಚಿಮ ಬಂಗಾಳಕ್ಕೆ ಕರೆಸಿಕೊಂಡು ಅವರಿಗೆ ರೇಷನ್ ಕಾರ್ಡ್ ಆಧಾರ್ ಕಾರ್ಡ್ ಮಾಡಿಸಿಕೊಟ್ಟು ತನ್ನ ರಾಜ್ಯದಲ್ಲಿನ ಹಿಂದುಗಳ ಮೇಲೆ ದಾಳಿ ಮಾಡಿಸುತ್ತಿರೋದು ಮಮತಾ ಎಂದು ತಿಳಿದ್ದಿದ್ದರೂ, ದೇವರನಾಡಾಗಿರುವ ಕೇರಳವನ್ನ ಐಸಿಸ್ ಉಗ್ರರ ಸ್ವರ್ಗವಾಗಿ ಬದಲಿಸಿದಾಗ ನಾವು ಸುಮ್ಮನಿದ್ದೇವು. 1947ರಲ್ಲಿ ಭಾರತ ವಿಭಜನೆಯಾದಾಗ 47 ಲಕ್ಷ ಹಿಂದುಗಳು ಮತ್ತು ಸಿಖ್ಖರು ಪಾಕಿಸ್ತಾನದಿಂದ ನಿರಾಶ್ರಿತರಾಗಿ ಭಾರತಕ್ಕೆ ಓಡಿ ಬಂದಿದ್ದರು, ಲಕ್ಷಕ್ಕೂ ಹೆಚ್ಚು ಹೆಣ್ಣುಮಕ್ಕಳ ಅತ್ಯಾಚಾರ, ಮತಾಂತರ ಅಂದೂ ಆಗಿತ್ತು. ಮತಾಂಧರು 1990 ರಲ್ಲಿ ಕಾಶ್ಮೀರದಿಂದ 1.40 ಲಕ್ಷ ಕಾಶ್ಮೀರ ಪಂಡಿತರನ್ನು ಓಡಿಸಿದ್ದರು. ಇಂದಿಗೂ ಅವರು ನಿರಾಶ್ರಿತರಾಗಿ ಬದುಕುತ್ತಿದ್ದಾರೆ. ಅಂದು 389 ಕಾಶ್ಮೀರ್ ಪಂಡಿತರ ಹತ್ಯೆ ನಡೆದಿತ್ತು. ಇನ್ನೂ ಹಲವರನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿದ್ದರು. ಈ ಬಗ್ಗೆ ಆ ಮಾನವತಾವಾದಿಗಳಿಗೆ ಮಾನವೀಯತೆ ಯಾಕಿಲ್ಲ? ಭಾರತದ ಹಿಂದೂಗಳು ಅಸಹಿಷ್ಣುಗಳು....ಭಾರತ ಸುರಕ್ಷಿತವಲ್ಲ ಅಂದವರು ನಮ್ಮಲ್ಲಿಗೆ ಯಾಕೆ ಬರಬೇಕು? ಉಳಿದ 48 ಮುಸ್ಲಿಂ ರಾಷ್ಟ್ರಗಳಿಗೇಕೆ ಅಫ್ಘಾನಿಸ್ತಾನದ ಜನರು ಬೇಡ? ವಿಶ್ವಕ್ಕೆ ಶಾಂತಿ ಅಹಿಂಸೆ ಮಾನವೀಯತೆ ತಾಳ್ಮೆ ಮುಂತಾದ ಸಂದೇಶ ಸಾರಿದ ಭಾರತಕ್ಕೆ ಈ ವಿಷಯದಲ್ಲಿ ಪಾಠ ಬೇಕಾ? ಯೋಚಿಸಿಸಬೇಕಾದ ವಿಚಾರ.

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**